2) ಶಾಖೋತ್ಪನ್ನ ವಿದ್ಯುತ್ ಯೋಜನೆ

ಅ) ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ 5 ಮತ್ತು 6ನೇ ಘಟಕ

3) ಬಿಡದಿ ಸಂಯುಕ್ತ ಚಕ್ರೀಯ ವಿದ್ಯುತ್ ಯೋಜನೆ (300 ಮೆ.ವ್ಯಾ.)

ಅ) ರಾಯಚೂರು ಶಾಖೋತ್ಪನ್ನ ಕೇಂದ್ರ 5 ಮತ್ತು 6ನೇ ಘಟಕಗಳ ಸ್ಥಾಪನೆಗೆ ಈಗಾಗಲೇ ಕೇಂದ್ರ ಸರ್ಕಾರದ ತಾಂತ್ರಿಕ ಹಣಕಾಸು ಮಂಜೂರಾತಿ ದೊರೆತಿದೆ. ಉಳಿದ ಯೋಜನೆಗೆ ಕೇಂದ್ರ ಸರ್ಕಾರದ ಮಂಜೂರಾತಿ ದೊರೆಯಬೇಕಾಗಿದೆ. ಶಿವನಸಮುದ್ರಂ ಯೋಜನೆಯು ಕಾವೇರಿ ನದಿಕೊಳ್ಳದಲ್ಲಿರುವುದರಿಂದ ಇದು ಆ ಕಾವೇರಿ ಜಲವಿವಾದದಲ್ಲಿ ಸೇರಿಕೊಂಡಿದೆ.

ಮಹಾದಾಯಿ ಜಲವಿದ್ಯುತ್ ಯೋಜನೆಗೆ ಕೇಂದ್ರ ಸರ್ಕಾರದ ಆದೇಶದ ಮೇರೆಗೆ ಗೋವಾ ಸರ್ಕಾರದ ಸಮ್ಮತಿಯನ್ನು ಪಡೆದುಕೊಳ್ಳಬೇಕಾಗಿದೆ.

ಬಿಡದಿ ವಿದ್ಯುತ್ ಯೋಜನೆ ಸಾಧ್ಯತಾ ವರದಿಯನ್ನು ದಿನಾಂಕ 27.01.1996ರಲ್ಲಿ ಕೇಂದ್ರೀಯ ವಿದ್ಯುತ್ ಪ್ರಾಧಿಕಾರಕ್ಕೆ ಒಪ್ಪಿಸಲಾಗಿದೆ. ಆದಷ್ಟು ಬೇಗ ಮುಂಜೂರಾತಿ ಪಡೆಯಲು ಕೇಂದ್ರೀಯ ವಿದ್ಯುತ್ ಪ್ರಾಧಿಕಾರದ ಹಲವಾರು ಅವಶ್ಯಕತೆಯಗಳನ್ನು ಪೂರೈಸಲು ಕರ್ನಾಟಕ ವಿದ್ಯುತ್ ನಿಗಮವು ಕ್ರಮ ತೆಗೆದುಕೊಳ್ಳುತ್ತಿದೆ.

ಇ) ಶಿವನಸಮುದ್ರಂ ಕಾಲಿಕ ವಿದ್ಯುತ್ ಯೋಜನೆಯನ್ನು ಕಾವೇರಿ ಟ್ರಿಬ್ಯೂನಲನಿಂದ ಹೊರತುಪಡಿಸಿ ಕಾರ್ಯರೂಪಕ್ಕೆ ತರಲು ಯತ್ನಿಸಲಾಗುತ್ತಿದೆ.

ಮಹಾದಾಯಿ ಯೋಜನೆಯಿಂದಾಗುವ ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ಗೋವಾ ಮತ್ತು ಕರ್ನಾಟಕ ಸರ್ಕಾರದ ಅಧಿಕಾರಿಗಳನ್ನೊಳಗೊಂಡ ಒಂದು ತಾಂತ್ರಿಕ ಸಮಿತಿಯನ್ನು ರಚಿಸಲಾಗಿದೆ. ತಾಂತ್ರಿಕ ಸಮಿತಿಯ ಅಂತಿಮ ವರದಿಯನ್ನು ನಿರೀಕ್ಷಿಸಲಾಗಿದೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಿದ ವಿಷಯ.

ಶ್ರೀನಿವಾಸಪುರದಲ್ಲಿ ನಡೆದಂತ ಘಟನೆ ಕುರಿತು.

+ ಶ್ರೀ ವಾಟಾಳ್ ನಾಗರಾಜ್ : ಒಂದು ಪ್ರಶ್ನೆಯನ್ನು ತಮ್ಮ ಮುಂದೆ ತರಬೇಕಾಗಿದೆ. ಆ ಶ್ರೀನಿವಾಸಪುರದಲ್ಲಿ ನಡೆದಿರತಕ್ಕಂಥ ಘಟನೆ ಬಗ್ಗೆ ಇಲ್ಲಿ ಸಮಗ್ರವಾಗಿ ಚರ್ಚೆಯಾಗಬೇಕಾಗಿದೆ. ಅದು ತಮ್ಮ ಕ್ಷೇತ್ರವೂ ಕೂಡ, ಮತ್ತು ಇದು ರಾಜ್ಯದ ಸಮಸ್ಯೆಗೂ ಸಂಬಂಧಪಟ್ಟಿರತಕ್ಕಂಥದ್ದು, ಅಲ್ಲಿ ಶಾಂತಿಭಂಗವಾಗಿರತಕ್ಕಂಥದ್ದು, ಅಲ್ಲಿ ಪರಿಸ್ಥಿತಿ ಏನೇನು ನಡೆದಿದೆ ಎಂಬುದರ ಬಗ್ಗೆ ಸ್ವಲ್ಪ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ತಾವು ಈ ವಿಷಯದಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ನಾನು ವೈಯಕ್ತಿಕವಾಗಿ ಕೇಳಿದ್ದೆ.

ಅಧ್ಯಕ್ಷರು : ತಾವು ಕೇಳಿದಿರಿ, ಬಿರ್ಗೆಯವರೂ ಪ್ರಸ್ತಾಪ ಮಾಡಿದರು, ಶ್ರೀರಾಂರೆಡ್ಡಿಯವರೂ ಕೇಳಿದ್ದಾರೆ, ಯಡಿಯೂರಪ್ಪನವರು ಪತ್ರ ಬರೆದು ಕಳುಹಿಸಿದ್ದಾರೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ನಮ್ಮ ಪಾರ್ಟಿಯ ಅಧ್ಯಕ್ಷರನ್ನು ಬಂಧನ ಮಾಡಿದ್ದಾರೆ ಈ ವಿಷಯವನ್ನೂ ಸ್ವಲ್ಪ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ವಾಟಾಳ್ ನಾಗರಾಜು : ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ನಾನು ಪ್ರಾರಂಭ ಮಾಡಿಬಿಡುತ್ತೇನೆ.

ಅಧ್ಯಕ್ಷರು : ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವವರು ಇನ್ನು ಕೆಲವರು ಉಳಿದುಕೊಂಡಿದ್ದಾರೆ.

ಶ್ರೀ ಜೆ.ಪಿ. ಶ್ರೀರಾಂರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಸ್ಥಳಕ್ಕೆ ಹೋಗಿಬಂದಿದ್ದೇನೆ. ಅದರ ಬಗ್ಗೆ ಮಾಹಿತಿಯನ್ನು ಸದನಕ್ಕೆ ನೀಡಲು ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಗೃಹಮಂತ್ರಿಗಳು ಏನೊ ಹೇಳುವವರಿದ್ದಾರೆ ಒಂದು ನಿಮಿಷ ತಾಳಿ, ಅವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹಸಚಿವರು) : ಮಾನ್ಯ ಅಧ್ಯಕ್ಷರೆ, ಶ್ರೀನಿವಾಸಪುರದ ಘಟನೆ ಬಗ್ಗೆ ಈ ಸದನದಲ್ಲಿ ಒಂದು ಹೇಳಿಕೆಯನ್ನು ಸರ್ಕಾರದ ಪರವಾಗಿ ಕೊಡತಕ್ಕಂಥ ಅವಶ್ಯಕತೆ ಇದೆ. ಆ ಹೇಳಿಕೆಯನ್ನು ನಾನು ತಯಾರು ಮಾಡುತ್ತಿದ್ದೇನೆ. ನಾನೂ ಸಹ ಆ ಸ್ಥಳಕ್ಕೆ ಹೋಗಿದ್ದೆ, ಅಲ್ಲಿ ಪರಿಸ್ಥಿತಿ ನಿಯಂತ್ರಣದಲ್ಲಿ ಇದೆ. ಕರ್ಫ್ಯೂವನ್ನು ಸಹಿತ ಸಡಿಲ ಮಾಡಿದ್ದಾರೆ. ಆದ್ದರಿಂದ ತಾವು ಒಂದು ಸಮಯವನ್ನು ನಿಗಧಿ ಮಾಡಿ, ನಾನು ಹೇಳಿಕೆಯನ್ನು ಕೊಟ್ಟಮೇಲೆ ಗೌರವಾನ್ವಿತ ಸದಸ್ಯರು ಮಾತನಾಡಲಿಕ್ಕೆ, ಸ್ಪಷ್ಟೀಕರಣವನ್ನು ಕೇಳಲಿಕ್ಕೆ ಅವಕಾಶವನ್ನು ಮಾಡಿಕೊಡಬಹುದು. ನನ್ನ ಹೇಳಿಕೆ ಇನ್ನೂ ತಯಾರಾಗಿಲ್ಲ ಒಂದೆರಡು ಗಂಟೆ ಆಗಬಹುದು ನಂತರ ಅದನ್ನು ಚರ್ಚೆಮಾಡಬಹುದು.

ಶ್ರೀ ವಾಟಾಳ್ ನಾಗರಾಜ್ : ಅವರು ಹೇಳಿಕೆಯನ್ನು ಕೊಡಲಿ ಸಂತೋಷ, ಅಷ್ಟರಲ್ಲಿ ಅದಕ್ಕೆ ಮುಂಚೆ ಒಂದೆರಡು ನಿಮಿಷ ಪ್ರಸ್ತಾಪ ಮಾಡಿಬಿಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ತಮ್ಮ ಛೇಂಬರ್‌ಗೆ ಬಂದು ಕೇಳಿದ್ದೆ, ಬಹುಶಃ ಯಾರು ಕೇಳಿದ್ದಾರೋ ಏನೋ ಗೊತ್ತಿಲ್ಲ. ಆದರೆ ಅದಕ್ಕೆ ಒಂದು ಶಿಸ್ತು ಬೇಡವೆ?

ಅಧ್ಯಕ್ಷರು : ತಾವೂ ನನ್ನ ಛೇಂಬರ್‌ಗೆ ಬಂದು ಪ್ರಸ್ತಾಪ ಮಾಡಿದ್ದೀರಿ, ಹಾಗೆಯೇ ಶ್ರೀ ರಾಂರೆಡ್ಡಿಯವರು ನಿನ್ನೆ ಅಲ್ಲಿಗೆ ಹೋಗಿಬಂದು ನನ್ನ ಹತ್ತಿರ ಪ್ರಸ್ತಾಪ ಮಾಡಿದರು, ವಾಟಾಳ್‌ರವರು ನಿನ್ನೆಯೂ ಹೇಳಿದ್ದರು, ಇವೊತ್ತು ಪ್ರಸ್ತಾಪ ಮಾಡಿದ್ದಾರೆ ವಿರೋಧಪಕ್ಷದ ನಾಯಕರು ನನಗೆ ಪತ್ರವನ್ನು ಬರದೇ ಕಳುಹಿಸಿದ್ದಾರೆ. ಮಂತ್ರಿಗಳು ಹೇಳಿಕೆಯನ್ನು ಕೊಡುತ್ತೇವೆಂದು ಹೇಳುತ್ತಿದ್ದಾರಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, 3ನೇ ತಾರೀಖಿನಿಂದ ಶನಿವಾರ ದಿವಸ ಶ್ರೀನಿವಾಸಪುರದಲ್ಲಿ ಆದಂಥ ಘಟನೆ ಏನು ಇದೆ, ಈ ಘಟನೆಯಿಂದ ನಿಜವಾಗಲೂ ನಾಗರೀಕರಲ್ಲಿ ಗಾಬರಿಯನ್ನು ಉಂಟು ಮಾಡತಕ್ಕಂಥ ಪರಿಸ್ಥಿತಿ ಇದೆ. ಏಕೆಂದರೆ ಒಬ್ಬ ಸ್ಥಳೀಯ ನರ್ಸಿಂಗ್ ಹೋಂನಲ್ಲಿ ಒಂದು ಮಗುವಿನ ಚಿಕಿತ್ಸೆಗಾಗಿ ಕರೆದುಕೊಂಡು ಹೋದಾಗ ಆ ಮಗುವು ತೀರಿಕೊಂಡ

ಮೇಲೆ ಅದೇ ಒಂದು ಕಾರಣಕ್ಕಾಗಿ ಅಲ್ಲಿ ಗಲಾಟೆ ನಡೆದು, ಆ ವೈದ್ಯರ ಮೇಲೆ ಹಲ್ಲೆ ಮಾಡಿ, ಮತ್ತೆ ಅಲ್ಲಿರತಕ್ಕ ಅಂಗಡಿಗಳನ್ನು ಲೂಟಿ ಮಾಡಿ, ಒಂದು ಪ್ರಕ್ಷುಬ್ಧವಾದ ವಾತಾವರಣ ಮತ್ತು ಒಬ್ಬರ ಮೇಲೆ ಒಬ್ಬರನ್ನು ಎತ್ತಿಕಟ್ಟುತಕ್ಕಂಥ ಪ್ರಯತ್ನಗಳೂ ಕೂಡ ನಡೆದಿದೆ ಎಂದು ಗೊತ್ತಾಗಿದೆ. ಇಂತಹ ಘಟನೆಗಳು ಒಂದುಕಡೆಯು ಸೀಮಿತವಾಗಿರುವುದಿಲ್ಲ. ಏಕೆಂದರೆ ಈ ಕೋಮು ಘರ್ಷಣೆ ಸೀಮಿತವಾಗಿ ಒಂದು ಸ್ಥಳಕ್ಕೆ ಆಗಲೀ, ಒಂದು ಊರಿಗೆ ಆಗಲೀ ಇರುವುದಿಲ್ಲ. ಎಲ್ಲೋ ಒಂದು ಊರಿನಲ್ಲಿ ಆಗಿದೆ ಅಂದರೆ ಅದು ಸರ್ವಸಾಧಾರಣವಾಗಿ ಇಡೀ ರಾಜ್ಯದಲ್ಲಿ ಹಬ್ಬುತಕ್ಕಂಥ ಪರಿಸ್ಥಿತಿಯೂ ಕೂಡ ಇರುತ್ತದೆ. ವಿಶೇಷವಾಗಿ ಇಂತಹ ಕೋಮು ಘರ್ಷಣೆ, ಯಾವ ಕಾರಣಕ್ಕಾಗಿ ಇದಕ್ಕೆ ಕಮ್ಯುನಲ್ ಟರ್ನ್ ಕೊಟ್ಟರೊ ಎಂಬತಕ್ಕಂಥದ್ದು ಗೊತ್ತಾಗಲಿಲ್ಲ. ಏಕೆಂದರೆ ಅನೇಕಸಾರಿ ಒಮ್ಮೆ ಬೇರೆ ಜಾತಿಯ ವೈದ್ಯರಿದ್ದರೆ ಇನ್ನೊಂದು ಜಾತಿಯ ರೋಗಿ ಅಲ್ಲಿಗೆ ಹೋಗಿಯೆ ಹೋಗುತ್ತಾನೆ. ಆದರೆ ಇದಕ್ಕೆ ಈ ಪರಿಸ್ಥಿತಿ ಏಕೆ ಬಂತು, ಇದರ ಹಿನ್ನೆಲೆ ಏನು ಇದಕ್ಕೆ ಕಾರಣ ಏನು ಎನ್ನತಕ್ಕಂಥದ್ದು ನಮಗೆ ಗೊತ್ತಾಗಬೇಕಾಗುತ್ತದೆ. ಮತ್ತು ಈ ಸ್ಥಳಕ್ಕೆ ತಾವು ಕೂಡ ಭೇಟಿ ಕೊಟ್ಟು ಅಲ್ಲಿಯ ವಾತಾವರಣವನ್ನು ತಾಳಿದುಕೊಂಡು ಬಂದಿದ್ದೀರಿ ಎಂದು ಪೇಪರ್‌ನಲ್ಲಿ ಹಾಗೆ ಬಂದಿದೆ. ಆಮೇಲೆ ಗೃಹ ಮಂತ್ರಿಗಳಾದ ಪಿ.ಜಿ.ಆರ್. ಸಿಂಧ್ಯಾರವರು ಕೂಡ ಹೋಗಿದ್ದು ಹೇಳಿಕೆಯನ್ನೂ ಕೂಡ ಕೊಟ್ಟಿದ್ದಾರೆ, ಅದು ಪಾಪರ್ ನಲ್ಲೂ ಬಂದಿದೆ. ಅದನ್ನು ಓದುತ್ತೇನೆ. ಶ್ರೀನಿವಾಸಪುರದಲ್ಲಿ ಗಾಯಗೊಂಡಿದ್ದ ಇಬ್ಬರ ಸಾವು ಕರ್ಫ್ಯೂ. ಶನಿವಾರ ಶ್ರೀನಿವಾಸಪುರ ಸಮೀಪ ಗಲಭೆ ಇಬ್ಬರು ವ್ಯಕ್ತಿಗಳು ಮೃತಪಟ್ಟಿದ್ದಾರೆಂದು ಗೃಹಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಸ್ಪಷ್ಟಪಡಿಸಿದ್ದಾರೆ. ಮೃತಪಟ್ಟ ವ್ಯಕ್ತಿಗಳನ್ನು ಶ್ರೀನಿವಾಸಪುರ ತಾಲ್ಲೂಕಿನವರೆಂದು ಹಾಗೂ ಅವರುಗಳು ಯಾರೆಂಬುದು ಇನ್ನೂ ತಿಳಿದಿಲ್ಲ ಎಂದು ತಿಳಿಸಿದ್ದಾರೆ ಎಂಬತಕ್ಕಂಥದ್ದು ಬಂದಿದೆ. ನೀವು (ಅಧ್ಯಕ್ಷರು) ಇನ್ನೂ ಹೋಗಿಲ್ಲ ಅಂಥ ಅಂದರೆ ಏಕೆ ಹೋಗಿಲ್ಲ ಎಂಬುದು ಗೊತ್ತಾಗಬೇಕು. ಪೇಪರ್‌ನಲ್ಲಿ ಬಂದಿರುವಂತೆ, ಪಿ.ಜಿ.ಆರ್. ಸಿಂಧ್ಯಾರವರು ಹೋಗಿದ್ದಾರೆ, ಬೈರೇಗೌಡರು ಕೂಡ ಹೋಗಿ ಬಂದಿದ್ದಾರೆ ಎಂದು ಬಂದಿದೆ, ಶ್ರೀ ರಾಂರೆಡ್ಡಿಯವರು ಹೋಗಿ ಬಂದಿದ್ದಾರೆ ಎಂದು ಬಂದಿದೆ. ನಮ್ಮ ಎಂ.ಪಿ. ಮುನಿಯಪ್ಪನವರು ಹೋಗಿ ಬಂದಿದ್ದಾರೆ ಎಂಬುದಾಗಿ ಬಂದಿದೆ ಹೀಗೆ ಅನೇಕ ಮುಖಂಡರು ಆ ಸ್ಥಳಕ್ಕೆ ಹೋಗಿ ಭೇಟಿ ಕೊಟ್ಟಿದ್ದಾರೆ ಎನ್ನತಕ್ಕಂಥದ್ದು ಬಂದಿದೆ. ಈಗ ಅಲ್ಲಿ ಏನು ಪರಿಸ್ಥಿತಿ ಇದೆ. ಯಾವ ರೀತಿಯಾಗಿ ಆ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದಿದ್ದೀರಿ. ಇದಕ್ಕೆ ಕಾರಣಕರ್ತರು ಯಾರು? ಇದೇ ರೀತಿಯಾಗಿ ಪರಿಸ್ಥಿತಿಯನ್ನು ಸಡಿಲ ಬಿಟ್ಟರೆ ಬೇರೆ ಪಟ್ಟಣಗಳಲ್ಲಿ, ಸ್ಥಳಗಳಲ್ಲಿ ಉದ್ಭವಿಸುವಂತಹ ಪರಿಸ್ಥಿತಿ ಬರುತ್ತದೆ. ಈಗ ಏಪ್ರಿಲ್ ತಿಂಗಳಲ್ಲಿ ಪಾರ್ಲಿಮೆಂಟ್‌ನ ಚುನಾವಣೆ ಬರುವುದರಿಂದ ಕೆಲವು ಜನರು ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂಬ ಪ್ರಯತ್ನವನ್ನು ಮಾಡಬಹುದು. ಇದರಲ್ಲಿ ಜಾತಿ, ಪಕ್ಷ, ಪಂಗಡವೆಂದು ಹೇಳುವುದಿಲ್ಲ. ಏಕೆಂದರೆ ಒಂದೆರಡು ತಿಂಗಳು ಈ ಟೆಂಪೊ ಇದೇ ರೀತಿಯಾಗಿ ಇಟ್ಟರೆ ನಮಗೆ ಲಾಭವಾಗುತ್ತದೇನೊ, ನಿಮಗೆ ಲಾಭವಾಗುತ್ತದೆನೊ, ಎಂದು ಹೇಳಿ ಈ ಗಂಡ ಹೆಂಡತಿಯರ ನಡುವೆ ಕೂಸು ಮುಗ್ಗಾದಾಗ ಯಾವ ಪರಿಸ್ಥಿತಿ ಇರುತ್ತದೋ ಹಾಗೆ ಈ ಪೊಲಿಟಿಕಲ್ ಪಾರ್ಟಿಗಳಲ್ಲಿ ಜನರು ನುಗ್ಗಾಡುವಂತಹ ಪರಿಸ್ಥಿತಿ ಬರುತ್ತದೆ. ಅದಕ್ಕಾಗಿ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ, ಈ

ಘಟನೆ ನಡೆಯಬೇಕಾದರೆ ಕಾರಣ ಯಾರು? ಇದಕ್ಕೆ ಬೆಂಬಲವನ್ನು ಯಾರು ಕೊಟ್ಟಿದ್ದಾರೆಂಬುದನ್ನು ಕೂಡ ತಾವು ಸ್ಪಷ್ಟ ಪಡಿಸಿದರೆ ಮತ್ತು ತಾವು ಒಂದು ಸ್ಟೇಟ್‌ಮೆಂಟ್ ಮಾಡಿದರೆ ಅದು ಒಳ್ಳೆಯದಾಗುತ್ತದೆ. ಇನ್ನು ಪೋಲಿಸ್ ನವರ ಪರವಾಗಿ ಅಥವಾ ಗೃಹ ಸಚಿವರ ಪರವಾಗಿ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ತಾವು ತಿಳಿಸಿದರೆ ಒಳ್ಳೆಯದಾಗುತ್ತದೆ ಎಂಬುದನ್ನು ತಮ್ಮ ಮುಖಾಂತರ ತಿಳಿಸುತ್ತೇನೆ. ಇದು ಒಂದೆ ಸಾರಿಯಲ್ಲ, ಈ ಶ್ರೀನಿವಾಸ ಪುರದಲ್ಲಿ ಕೋಮು ಘರ್ಷಣೆ ಎರಡು ಮೂರು ಸಲ ಆಗಿದೆ ತಮಗೆ ಗೊತ್ತಿರುವಂತೆ ಹಿಂದೆ ಕೂಡ ಮಾವಿನ ತೋಪು, ಹಣ್ಣಿನ ಗಿಡ ಇವುಗಳನ್ನು ಕಡಿದಿದ್ದರು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಹಿಂದೆ ಕಮ್ಯುನಲ್ ಕ್ಲಾಸಸ್ ಶ್ರೀನಿವಾಸಪುರದಲ್ಲಿ ಆಗಿರಲಿಲ್ಲ. ಬೇರೆ ಕಡೆ ಆಗಿರುವಂಥದ್ದನ್ನು ಅದರ ದ್ವೇಷವನ್ನು ತೀರಿಸಿಕೊಳ್ಳುವುದಕ್ಕೋಸ್ಕರ ಅವರು ಮಾವಿನ ತೋಟವನ್ನು ಕಡಿದಿದ್ದರು. ಆಗ ಅಷ್ಟೆ ನಡೆದಿದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಯಿತು, ಆಗಲಿಲ್ಲವೆಂದರೆ ಸಂತೋಷ, ಇನ್ನು ಮುಂದೆಯೂ ಆಗಬಾರದು, ಅಂತಹ ವಾತಾವರಣವನ್ನು ನಿರ್ಮಾಣ ಮಾಡಬೇಕು ಏಕೆಂದರೆ ಮಾನ್ಯ ಅಧ್ಯಕ್ಷರೆ ಅಲ್ಲಿರುವುದರಿಂದ ಬಹುಶಃ ಹಿಂದೆಂದೂ ಅಂತಹ ವಾತಾವರಣಕ್ಕೆ ಅವಕಾಶವನ್ನು ಕೊಟ್ಟಿಲ್ಲ ಮುಂದೆಯೂ ಅವಕಾಶಕೊಡತಕ್ಕ ಪ್ರಶ್ನೆಯೇ ಬರುವುದಿಲ್ಲ. ಅವರು ಎಲ್ಲಾ ಸಮಾಜದ ವ್ಯಕ್ತಿಗಳ ಜೊತೆಯಲ್ಲಿ ಹೊಂದಿಕೊಂಡು ಹೋಗುವಂತಹ ವ್ಯಕ್ತಿಗಳಾಗಿರುವುದರಿಂದ ಅಲ್ಲಿ ಶಾಂತಿ ಇತ್ತು. ಆದರೆ ಈ ಶಾಂತಿ ಬಂಗವೇಕೆ ಆಗಿದೆ, ಈ ಪರಿಸ್ಥಿತಿ ಏಕೆ ಬಂದಿದೆ ಎನ್ನುವುದನ್ನು ಮಾನ್ಯ ಗೃಹ ಸಚಿವರು ನಮಗೆ ವಿವರವಾಗಿ ತಿಳಿಸಿದರೆ ಒಳ್ಳೆಯದಾಗುತ್ತದೆ. ಏಕೆಂದರೆ ಈಗ ಒಂದು ಗಂಟೆಗೆ ಬಜೆಟ್ ಸ್ಪೀಚ್ ಆದರೆ ಸಭೆ ಮುಕ್ತಾಯವಾಗುತ್ತದೆ. ಆದುದರಿಂದ ಅಷ್ಟರೊಳಗೆ ಒಂದು ಸ್ಟೇಟ್‌ಮೆಂಟ್ ಕೊಟ್ಟರೆ ಅವರು ಗೆದ್ದುಕೊಂಡಿರುವಂತಹ ಕ್ರಮದ ಬಗ್ಗೆ ಮಾಹಿತಿಕೊಟ್ಟು ನಮಗೆ ತೃಪ್ತಿಯಾದರೆ ಅದು ಅಲ್ಲಿಗೆ ಮುಕ್ತಾಯವಾಗುತ್ತದೆ.ಅದಕ್ಕಾಗಿ ಮಾನ್ಯ ಸಚಿವರು ಸವಿಸ್ತಾರವಾದಂತಹ ಹೇಳಿಕೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಬಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಘಟನೆ ನಡೆದಂತಹ ಶ್ರೀನಿವಾಸಪುರಕ್ಕೆ ಹೋಗಿ ಬಂದಿದ್ದೇನೆ, ಅದಕ್ಕೂ ಮೊದಲು ಮಾನ್ಯ ಗೃಹ ಸಚಿವರು ಹೋಗಿಬಂದಿದ್ದಾರೆ. ಘಟನೆ ನಡೆದ ದಿವಸವೆ ಮಾನ್ಯ ಬೈರೇಗೌಡರು ಹೋಗಿದ್ದಾರೆ. ಬೇರೆ ಬೇರೆ ಮುಖಂಡರುಗಳು ಕೂಡ ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಆದರೆ ಎರಡು ಪ್ರಮುಖವಾದಂತಹ ವಿಷಯಗಳು ನನ್ನ ಗಮನಕ್ಕೆ ಬಂದಿವೆ. ಇವತ್ತು ನಮ್ಮ ರಾಜ್ಯದಲ್ಲಿ ಆರೋಗ್ಯ ಇಲಾಖೆಯಲ್ಲಿ ಸಾಮಾನ್ಯವಾಗಿ ಒಳ್ಳೆಯ ಡಾಕ್ಟರುಗಳು ಇದ್ದಾರೆ, ಸರ್ವೆಸಾಮಾನ್ಯವಾಗಿ ಇಂತಹ ಘಟನೆಗಳು ನಡೆಯುತ್ತಾ ಇರುತ್ತವೆ. ಚುಚ್ಚುಮದ್ದು ಕೊಡುವಾಗ ಹೌಟ್ ದೇಟೆಡ್ ಹಾಕಿ ಕೊಡುವಂಥಾದ್ದು, ಸತ್ತು ಹೋಗಿರುವಂಥಾದ್ದು, ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಆಪರೇಷನ್ ನಡೆಯುವಂತಹ ಸಂದರ್ಭದಲ್ಲಿ ಸತ್ತು ಹೋಗಿರುವಂಥಾದ್ದು ಇದೆಲ್ಲಾ ನಡೆಯುತ್ತಾ ಇರುತ್ತದೆ. ಇದು ಸರ್ವ ಸಾಮಾನ್ಯವಾಗಿ ಮಾಮೂಲಿಯಾಗಿ ನಡೆಯುತ್ತಾ ಇರುತ್ತದೆ. ಅದೇ

ರೀತಿಯಲ್ಲಿ ಶ್ರೀನಿವಾಸಪುರದಲ್ಲಿಯೂ ಒಂದು ಘಟನೆ ನಡೆದಿದೆ ಇಲ್ಲಿ ಯಾವುದೋ ಒಂದು ಸಣ್ಣ ಘಟನೆ ನಡೆದು ದುರದೃಷ್ಟವಶಾತ್ ಆ ಮಗು ಸತ್ತು ಹೋಗಿದೆ ಅದಕ್ಕಾಗಿ ನಾವೆಲ್ಲರೂ ದುಃಖಪಡಬೇಕು. ಆ ಮುಗ್ಧ ಹೆಂಗಸು ತನ್ನ ಮಗುವನ್ನು ಕಳೆದುಕೊಂಡು ನೋವಿನಿಂದ ಅಳುತ್ತಾ ಅವಳು ಬಸ್ ನಿಲ್ದಾಣದಲ್ಲಿ ಕುಳಿತಿರುವಂತಹ ಸಂದರ್ಭದಲ್ಲಿ ಅವರನ್ನು ಪ್ರಚೋದನೆ ಮಾಡಿಸಿ ಪೋಲಿಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಕಂಪ್ಲೇಂಟ್ ಕೊಡಿಸಿದ್ದಾರೆ. ಅದೂ ಕೂಡ ಸರಿಯಾಗಿದೆ. ಪೋಲಿಸ್ ಸ್ಟೇಷನ್‌ನಲ್ಲಿ ಕಂಪ್ಲೇಂಟ್ ಕೊಡಿಸಿದಂತಹ ಜನರೆ ಆ ಡಾಕ್ಟರ್ ಕ್ಲಿನಿಕ್ ಹತ್ತಿರ ಗುಂಪು ಸೇರಿಕೊಂಡು ಜಗಳಕ್ಕೆ ನಿಂತಿದ್ದಾರೆ. ಎರಡು ಗುಂಪುಗಳಿಗೂ ಜಗಳವಾಗಿದೆ. ಪೋಲಿಸ್‌ನವರು ಡಾಕ್ಟರ್‌ರನ್ನು ಕರೆದುಕೊಂಡು ಬಂದು ಪೊಲೀಸ್ ಸ್ಟೇಷನ್‌ನಲ್ಲಿ ಹಾಕಿದರೆ ಅಲ್ಲಿ ನಡೆದಿರುವಂತಹ ಘಟನೆಯನ್ನು ನಾವೆಲ್ಲರೂ ಗಂಭೀರವಾಗಿ ನೋಡುವಾಗ ಪೊಲೀಸ್ ಸ್ಟೇಷನ್‌ನಲ್ಲಿ ಸಬ್ ಇನ್‌ಸ್ಪೆಕ್ಟರ್ ಮುಂದೆಯೆ ಇಬ್ಬರು ವ್ಯಕ್ತಿಗಳು ಆ ಡಾಕ್ಟರನ್ನು ಹಿಡಿದು ಹೊಡೆದಿದ್ದಾರೆ. ಇಲ್ಲಿ ಪೊಲೀಸ್ ನಿಷ್ಕ್ರಿಯತೆಯೂ ಇದಕ್ಕೆ ಸಂಬಂಧವಿದೆ. ಪೋಲೀಸ್‌ನವರ ಎದುರಿನಲ್ಲಿ ಹೊಡೆದು, ಪೋಲೀಸರಿಂದ ಏನಾಗುತ್ತದೆ ಅವರನ್ನು ನಾವೇ ನೋಡಿಕೊಳ್ಳುತ್ತೇವೆಂದು ಅವರು ಅಲ್ಲಿಂದ ಹೊರಟು ಹೋಗಿ ಡಾಕ್ಟರ್ ಕ್ಲಿನಿಕ್ ಎಲ್ಲವನ್ನು ಹೊಡೆದು ಹಾಕಿದರು. ಅಲ್ಲಿಂದ ಘಟನೆ ಪ್ರಾರಂಭವಾಗಿದೆ. ನಾನು ನಿನ್ನೆ ಇಡೀ ಶ್ರೀನಿವಾಸಪುರವನ್ನು ಸುತ್ತಿಕೊಂಡು ಬಂದಿದ್ದೇನೆ. ಎಲ್ಲೆಲ್ಲಿ ಏನಾಗಿದೆ ಎಂಬುದನ್ನು ನೋಡಿಯೆಂದು ಬಂದಿದ್ದೇನೆ. ಹಿಂದೆ ನಮ್ಮ ಜಿಲ್ಲೆಯಲ್ಲೂ ಅಂದರೆ ಶಿದ್ಲಗಟ್ಟ, ಮುಳಬಾಗಿಲಲ್ಲಿ ಇಂತಹ ಕೆಲವು ಘಟನೆಗಳು ನಡೆದಿದೆ, ಕೆಲವರು ಸತ್ತಿದ್ದಾರೆ. ಆದರೆ ಆಸ್ತಿ ಪಾಸ್ತಿ ನಷ್ಟವಾಗಿರತಕ್ಕಂಥದ್ದು ಮೊಟ್ಟಮೊದಲಿಗೆ ನಾನು ಕಂಡದ್ದು ಇದು, ಆದರೆ ಇದಕ್ಕೆ ಯಾರು ಬಲಿಯಾಗಿರುವವರೆಂದರೆ ಬಡವರು, ಇಲ್ಲಿ ಕಳ್ಳರು ಕಾಕರು ಯಾರು ದರೋಡೆ ಮಾಡಿಲ್ಲ. ಕಳ್ಳರು ಕಾಕರಾದರೆ ಅವರಿಗೆ ಆ ಜಾತಿ, ಈ ಜಾತಿ ಎಂಬುದಿಲ್ಲ. ಎಲ್ಲಿ ಸಿಕ್ಕರೆ ಅದನ್ನು ಹೊಡೆದುಕೊಂಡು ಹೋಗುತ್ತಾರೆ. ಆದರೆ ಇಲ್ಲಿ ಯಾರು ಕಳ್ಳರೆಂದರೆ ಒಂದು ನಿರ್ದಿಷ್ಟವಾದಂತಹ ಉದ್ದೇಶವಿರುವಂತಹ ದರೋಡೆಕೋರರು. ನಾನು ಪ್ರತ್ಯೇಕವಾಗಿ ಪ್ರತಿಯೊಂದು ಸುಟ್ಟುಹೋಗಿರುವಂತಹ ಜಾಗಕ್ಕೆ ಹೋಗಿದ್ದೇನೆ. ಅವರು ಟಾರ್ಗೆಟ್ ಮಾಡಿದ್ದಾರೆ, ಇಂತಹ ವರ್ಗದ ಜನರೆ ಅಂಗಡಿಗಳು ಎಂದು ಟಾರ್ಗೆಟ್ ಮಾಡಿ ಸುಟ್ಟಿದ್ದಾರೆ. ಬಸ್ ಸ್ಟ್ಯಾಂಡಿಗೆ ಹೋಗಿ ನೋಡಿದರೆ ಕರುಳು ಕಿತ್ತು ಬರುವಂತಹ ವಾತಾವರಣವಿದೆ. ಅಲ್ಲಿ ಹಾಳಾಗಿರುವಂಥಾದ್ದು ಎಲ್ಲಾ ಪೆಟ್ಟಿಗೆ ಅಂಗಡಿಗಳು ಮತ್ತು ಸಣ್ಣ ಸಣ್ಣ ಅಂಗಡಿಗಳನ್ನು ಇಟ್ಟುಕೊಂಡಿರುವವರು ಬಡವರದು ಹಾಳಾಗಿದೆ. ಇನ್ನೊಂದು ಕಡೆ ಮುನಿಸಿಪಾಲ್ ಬಿಲ್ಡಿಂಗ್‌ನಲ್ಲಿ ಒಂದು ಚಪ್ಪಲಿ ಅಂಗಡಿ ಇದೆ. ಅದು ಕಾಂಕ್ರೀಟ್ ಬಿಲ್ಡಿಂಗ್ ಸುಮಾರು ದೊಡ್ಡದಾದ ಅಂಗಡಿ ಇದೆ. ಆ ಕಾಂಕ್ರೀಟ್ ಬಿಲ್ಡಿಂಗ್ ಗೋಡೆ ಕುಸಿಯುವಷ್ಟು ಮಟ್ಟಿಗೆ ಗಡಾರೆಯನ್ನು ತೆಗೆದುಕೊಂಡು ಅಗೆದಿದ್ದಾರೆ. ಇದು ಆಕಸ್ಮಿಕವಾಗಿ ಸ್ಪಾಂಟೇನಿಯಸ್ ಆಗಿ ಉದ್ಭವಾಗಿದ್ದರೆ ಆ ರೀತಿ ವ್ಯವಸ್ಥಿತವಾಗಿ ಟಾರ್ಗೆಟ್ ಮಾಡಲು ಸಾಧ್ಯವಿಲ್ಲ. ಸ್ಪಂಟೇನಿಯಸ್ ಆಗಿ ಇದ್ದರೆ ಏನೊ ಒಂದೆರಡು ಕಲ್ಲುಗಳನ್ನು ಬೀಸುತ್ತಾರೆ, ಸಣ್ಣ ಪುಟ್ಟ ಗಲಾಟೆಗಳು ಆಗುತ್ತವೆ, ಪೋಲೀಸರು ಹೋಗಿ ಆ ಜನರನ್ನು ಚದುರಿಸುತ್ತಾರೆ. ಆದರೆ 11.45ಕ್ಕೆ ಪ್ರಾರಂಭವಾದ ಈ ಘಟನೆ 1.45ವರೆಗೆ ಸತತವಾಗಿ ಅವ್ಯಾಹತವಾಗಿ ನಡೆದಿದೆ. ಮುಳಬಾಗಿಲು ಸರ್ಕಲ್, ಚಿಂತಾಮಣಿ ಸರ್ಕಲ್, ಬಸ್ ಸ್ಟ್ಯಾಂಡ್, ಮಯಿನ್ ರೋಡ್ ಇಷ್ಟು ಕಡೆ

ಟಾರ್ಗೆಟ್ ಮಾಡಿದ್ದಾರೆ. ಅಲ್ಲಿ ಹೆಚ್ಚಾಗಿ ಅಲ್ಪಸಂಖ್ಯಾತರ ಆಸ್ತಿಪಾಸ್ತಿಗಳು ನಷ್ಟವಾಗಿದೆ. ನಾನು ಹೋದಾಗಲೂ ಬೆಂಕಿ ಉರಿಯುತ್ತಿತ್ತು. ಕೆಲವು ಸಾಮಿಲ್‌ಗಳೂ ಕೂಡ ಸುಟ್ಟಿದೆ ಅಲ್ಪಸಂಖ್ಯಾತರ ಎರಡು ಕಡೆಯವರದು ಹೆಚ್ಚು ನಷ್ಟವಾಗಿದೆ. ಇತರರದು ಸ್ವಲ್ಪ ನಷ್ಟವಾಗಿದೆ. ಯಾವುದೆ ಪ್ರಾಪರ್ಟಿ ನಷ್ಟವಾದರೂ ಅದನ್ನು ನಾವು ಗಣನೆ ಮಾಡಬಹುದು. ಆದರೆ ಈ ಘಟನೆಗೆ ಸ್ಪಷ್ಟವಾಗಿ ಪ್ರೇರಪಣೆಯನ್ನು ನೀಡಿದ್ದಾರೆ. ಅಲ್ಲಿ ಹೇಗ ಪ್ರೇರೇಪಣೆ ನೀಡಿದ್ದಾರೆಂದರೆ ಬಹುಶಃ ಆ ಡಾಕ್ಟರ್ ಬೇರೆ ಯಾರಾದರೂ ಆಗಿದ್ದರೆ ಆ ಘಟನೆ ನಡೆಯುತ್ತಿರಲಿಲ್ಲವೆಂದು ಈಗಲೂ ನನಗೆ ದೃಢವಾದ ನಂಬಿಕೆ ಇದೆ. ಏಕೆಂದರೆ ಇಂತಹ ಘಟನೆಗಳು ಹಲವಾರು ಕಡೆ ನಮ್ಮ ರಾಜ್ಯದಲ್ಲಿ ನಡೆಯುತ್ತಾ ಇರುತ್ತದೆ. ನಡೆಯುವುದಿಲ್ಲವೆಂದಲ್ಲ, ಕಿಡ್ನಿ ಆಪರೇಷನ್ ಮಾಡಲು ಹೋಗಿ ಹಾರ್ಟ ತೆಗೆಯುವುದನ್ನು ನೋಡಿದ್ದೇವೆ. ಆಪರೇಷನ್ ಮಾಡುವಾಗ ಕತ್ತರಿಯನ್ನು ಹೊಟ್ಟೆಯಲ್ಲಿ ಬಿಟ್ಟಿರುವುದನ್ನು ನೋಡಿದ್ದೇವೆ. ಇನ್ನಾವುದೋ ಆಪರೇಷನ್ ಮಾಡಲು ಹೋಗಿ ಇನ್ನಾವುದೋ ಅಂಗಾಂಗವನ್ನು ತೆಗೆದಿರುವುದನ್ನು ನೋಡಿದ್ದೇವೆ. ಆಪರೇಷನ್ ಮಾಡುವಾಗ ಸತ್ತಿರುವುದನ್ನು ನಾವು ನೋಡಿದ್ದೇವೆ. ಆದರೆ ಎಲ್ಲಾ ಕಡೆಯೂ ಈ ರೀತಿಯ ಘಟನೆ ನಡೆದಿಲ್ಲ. ಆದರೆ ಈ ರೀತಿಯಾಗಿ ಘಟನೆ ನಡೆಯಬೇಕೆಂದರೆ ಪ್ರಚೋದನೆ ನೀಡಿ, ಪ್ರಜ್ಞಾಪೂರ್ವಕವಾಗಿ ಮಾಡಿದ್ದಾರೆ. ಇದಕ್ಕೆ ಪ್ರಚೋದನೆ ನೀಡಿರುವಂತಹ ವ್ಯಕ್ತಿಗಳು ಯಾರೆಂಬುದು ಕೂಡ ನನಗೆ ಗೊತ್ತಿದೆ. ಆದರೆ ಈಗ ಹೇಳುವುದಕ್ಕೆ ಪರಿಸ್ಥಿತಿ ಸರಿಯಾಗಿಲ್ಲ. ಅದನ್ನು ಹೇಳುವುದಕ್ಕೂ ಸ್ವಲ್ಪ ಕಷ್ಟವಾಗುತ್ತದೆ. ಆದರೆ ನನ್ನ ಅಭಿಪ್ರಾಯದಲ್ಲಿ ಇದನ್ನು ಪ್ರಚೋದನೆ ಮಾಡಿರುವುದಷ್ಟೇ ಅಲ್ಲದೆ ಇದನ್ನು ವ್ಯವಸ್ಥಿತವಾಗಿ ಮಾಡಿದ್ದಾರೆ.ಆದುದರಿಂದ ಯಾರು ಇದಕ್ಕೆ ಪ್ರಚೋದನೆ ಮಾಡಿದ್ದಾರೆ ಈ ಕೋಮುವಾರು ಶಕ್ತಿಗಳು, ಅವರ ಬಗ್ಗೆ ಯಾವುದೆ ಮೂಲಜಿಲ್ಲದೆ ಕ್ರಮವನ್ನು ತೆಗೆದುಕೊಳ್ಳಬೇಕು. ಏಕೆಂದರೆ, ಅದು ಇವತ್ತು ಬೇರೆ ಕಡೆಗೂ ಹರಡತಕ್ಕಂಥ ಸಾಧ್ಯತೆಗಳು ಇವೆ. ನಾನು ಅಲ್ಲಿ ಪೊಲೀಸ್ ಠಾಣೆಗೂ ಹೋಗಿದ್ದೆ. ದಕ್ಷಿಣ ವಲಯದ ಡಿ.ಐ.ಜಿ. ನಾಗರಾಜುರವರು ಸಹ ನನಗೆ ಸಿಕ್ಕಿದ್ದರು. ಠಾಣೆಗೂ ಹೋಗಿದ್ದೆ. ದಕ್ಷಿಣ ವಲಯದ ಡಿ.ಐ.ಜಿ.ನಾಗರಾಜುರವರು ಸಹ ನನಗೆ ಸಿಕ್ಕಿದ್ದರು. ಅಲ್ಲಿರುವಂತಹ ಜನರು ಹೇಳುವುದೇನೆಂದರೆ, ಪೊಲೀಸಿನವರು ಸ್ವಲ್ಪ ಚುರುಕಾಗಿ ಕೆಲಸವನ್ನು ಮಾಡದಿದ್ದರೆ ಬಹುಶಃ ಇಷ್ಟು ಅನಾಹುತಗಳು ಆಗುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ, ಅದನ್ನು ಕಡಿಮೆ ಮಾಡಬಹುದಾಗಿತ್ತು ಮತ್ತು ಆ ಸಮಯದಲ್ಲಿ ಪೊಲೀಸ್ ಸಿಬ್ಬಂದಿವರ್ಗವು ಕಡಿಮೆ ಇತ್ತು ಎಂದು ನಾನು ಈ ಬಗ್ಗೆ ಡಿ.ಐ.ಜಿ.ಯವರನ್ನು ಕೇಳಿದೆ ಅದಕ್ಕೆ ಅವರು ನಾರ್ಮಲ್ ಆಗಿ ಎಷ್ಟು ಸ್ಟ್ರೆಂಥ್ ಇರಬೇಕಾಗಿತ್ತೊ ಅಷ್ಟು ಇತ್ತು ಈ ರೀತಿ ಗಲಾಟೆಯಾಗುತ್ತದೆ ಎಂದು ಯಾರು ನಿರೀಕ್ಷೆ ಮಾಡಿರಲಿಲ್ಲ ಎಂದು ಹೇಳಿದರು. ಆದರೆ ಆ ಘಟನೆಯಾದ ತಕ್ಷಣ ಬೇರೆ ಕಡೆಯಿಂದ ಪೊಲೀಸರನ್ನು ಕರೆಸಿಕೊಳ್ಳುವಂತಹ ಸಾಧ್ಯತೆ ಇತ್ತು. ಅದನ್ನು ಜನರು ಮಾತನಾಡಿಕೊಳ್ಳುವ ರೀತಿಯಲ್ಲಿ ಅಲ್ಲಿನ ಪೊಲೀಸ್ ಸಬ್ ಇನ್ಸಪೆಕ್ಟರ್ ರವರು ನಿಷ್ಠೆಯಿಂದ ಕೆಲಸ ಮಾಡಿದ್ದಾರೆ. ನಮ್ಮ ಒಬ್ಬ ಸಂಗಾತಿಯೆ ಆ ಆಫೀಸ್‌ನಲ್ಲಿ ಇದ್ದಾಗ ಸಬ್ ಇನ್ಸ್ಪೆಕ್ಟರ್ ಹತ್ತಿರ ಬಂದು ಈ ರೀತಿಯಾಗಿದೆ ನೀವು ಏಕೆ ಸುಮ್ಮನೆ ಇದ್ದೀರಿ ಎಂದು ಹೇಳಿದರೆ, ನಾವು ಏನು ಮಾಡುವುದು, ನಾವು ಏನೂ ಮಾಡುವುದಕ್ಕೆ ಆಗುತ್ತಾ ಇಲ್ಲವೆಂಬ ಅಸಹಾಯಕತೆಯನ್ನು ತೋರಿಸಿದ್ದಾರೆ. ಆದ್ದರಿಂದ ಸನ್ಮಾನ್ಯ ಸಭಾಧ್ಯಕ್ಷರೆ, ಯಾರು ಬಡವರು ಆಸ್ತಿಯನ್ನು ಕಳೆದುಕೊಂಡಿದ್ದಾರೆ, ಅಂಗಡಿಯನ್ನು

ಕಳೆದುಕೊಂಡಿದ್ದಾರೆ, ಯಾರು ಭಿಕಾರಿಗಳಾಗಿದ್ದಾರೆ, ಅವರ ಜೀವನವೇ ಅದಾಗಿರುತ್ತದೆ. ಅವರಿಗೆ ಕೂಡಲೆ ಸರ್ಕಾರ ಪರಿಹಾರವನ್ನು ಕೊಡಬೇಕು ಇಲ್ಲದಿದ್ದರೆ ಅವರು ಬದುಕುವುದಕ್ಕೆ ಸಾಧ್ಯವಿಲ್ಲ. ನಾನು ನಿನ್ನೆ ನೋಡಿದಾಗ ಶ್ರೀನಿವಾಸಪುರ ಸ್ಮಶಾನ ಮೌನವಾಗಿದೆ. ಅದಕ್ಕೆ ಪರಿಹಾರವನ್ನು ಕೊಡಬೇಕು ಮತ್ತು ಯಾರು ಈ ಘಟನೆಗೆ ಪ್ರಚೋದನೆಯನ್ನು ನೀಡಿದ್ದಾರೆ ಅದು ಪೊಲೀಸ್‌ನವರಿಗೂ ಗೊತ್ತಿದೆ, ನನಗೂ ಕೂಡ ಗೊತ್ತು. ಆದರೆ ನಾನು ಈಗ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಹೇಳಿದರೆ ಪರಿಸ್ಥಿತಿ ಕೆಟ್ಟು ಹೋಗುತ್ತದೆ. ಅವರ ಬಗ್ಗೆ ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಳ್ಳಬೇಕು. ಆಸ್ತಿಪಾಸ್ತಿಯನ್ನು ಕಳೆದುಕೊಂಡವರಿಗೆ ಪರಿಹಾರವನ್ನು ಕೊಡಬೇಕು. ಪೊಲೀಸ್ ನವರ ವಿಷಯದಲ್ಲೂ ಸಹ ಸಂಪೂರ್ಣವಾಗಿ ಜವಾಬ್ದಾರಿಯುತವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಇದನ್ನು ತಡೆಗಟ್ಟಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

10.30 ಎ.ಎಂ.

+ಶ್ರೀ. ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಇದು ನೇರವಾಗಿ ತಮ್ಮ ಕ್ಷೇತ್ರಕ್ಕೆ ಬರತಕ್ಕ ವಿಚಾರ ಆದರೂ ಈ ಬಗ್ಗೆ ಚರ್ಚೆ ಮಾಡಬೇಕೆಂದು ನಾನು ನಿನ್ನೆಯೇ ತಮ್ಮ ಮನೆಗೆ ಬಂದಿದ್ದೆ. ಈ ವಿಚಾರ ಪತ್ರಿಕೆಯಲ್ಲಿ ಬಂದ ನಂತರ, ಏನು ಈ ರೀತಿಯಾಗಿದೆಯಲ್ಲ ಎಂದು ಇದರ ಬಗ್ಗೆ ತಿಳಿದುಕೊಳ್ಳಲು ಹಾಗೂ ತಮ್ಮನ್ನು ನೋಡಲು ತಮ್ಮ ಮನೆಗೆ ನಿನ್ನೆ ಬಂದಿದ್ದೆ. ಆದರೆ ನಿಮ್ಮ ಮನಸ್ಸಿನ ವೇದನೆ, ನೋವು ನೋಡಿ ನಮಗೂ ಬಹಳ ನೋವಾಯಿತು. ನಿನ್ನೆದಿವಸ ತಾವು ಮನೆಯಲ್ಲಿ ಯಾರ ಜೊತೆಯಲ್ಲೂ ಮಾತನಾಡುವ ಮಟ್ಟದಲ್ಲಿ ಇರಲಿಲ್ಲ ಮತ್ತು ಒಬ್ಬ ವಿಧಾನಸಭೆಯ ಅಧ್ಯಕ್ಷರಾಗಿ ಈ ಸ್ಥಳಕ್ಕೆ ನಾನು ಹೋಗಬೇಕೇ ಬೇಡವೆ ಎನ್ನುವ ಒಂದು ನಿರ್ಧಾರಕ್ಕೆ ತಾವು ಬಂದು ಒಂದು ರೀತಿಯ ನೋವನ್ನು ಅನುಭವಿಸುತ್ತಿದ್ದಿರಿ. ಮತ್ತು ನೀವು ಅಲ್ಲಿಗೆ ನಿಮ್ಮ ಕ್ಷೇತ್ರಕ್ಕೆ ಹೋದಾಗ, ನಿಮ್ಮನ್ನು ನೋಡಿ ಪ್ರಚೋದನೆಯಾಗಿ ಇನ್ನೇನಾದರೂ ಆದೀತಲ್ಲ ಎನ್ನುವುದು ಮತ್ತೊಂದು ಕಡೆ. ಎಲ್ಲಾ ಭಾವನೆಯನ್ನು, ನೋವನ್ನು ತಾವು ಅನುಭವಿಸಿ ಒಂದು ಹಂತದಲ್ಲಿ ಕಣ್ಣೀರಿಟ್ಟಿರಿ. ಅದು ಮನಸ್ಸಿಗೂ ಬಹಳ ನೋವಾಯಿತು. ನಿಮ್ಮ ಕ್ಷೇತ್ರದಲ್ಲಿ ಹೀಗೆ ಆಗಬಾರದಿತ್ತು ಎನ್ನುವ ನೋವಿನಿಂದ ತಾವು ಕಣ್ಣೀರಿಟ್ಟಿರಿ, ಅದನ್ನು ನೋಡಿ ನನಗೂ ಕೂಡ ಬಹಳ ಅತ್ಯಂತ ವೇದನೆಯಾಯಿತು ಈ ಒಂದು ಪರಿಸ್ಥಿತಿಯನ್ನು ನಾವು ಚಿಂತನೆ ಮಾಡಿದಾಗ, ಬಹಳ ಗಾಢವಾಗಿ ಯಾವುದೇ ಪೂರ್ವಾಗ್ರಹಕ್ಕೆ ಪೀಡಿತರಾಗದೆ ಮತ್ತು ಯಾವುದೇ ಒಂದು ರಾಜಕೀಯಕ್ಕೆ ಇದನ್ನು ಬಳಸದೇ ಮಾತನಾಡುವುದಾದರೆ, ಆ ವೈದ್ಯರು ಮತ್ತು ಮಗು ಒಂದು ಕಡೆ, ನಡೆದಿರತಕ್ಕಂಥ ಘಟನೆ ಮತ್ತೊಂದು ಕಡೆ, ಹೀಗೆ ಎರಡು ಭಾಗವನ್ನು ನಾವು ಮಾಡಬೇಕಾಗುತ್ತದೆ. ವೈದ್ಯರ ಹತ್ತಿರ ಆ ಮಗು ಅವತ್ತೇ ಬಂದದ್ದಲ್ಲ, ಆ ಮಗು ಸುಮಾರು ನಾಲ್ಕೈದು ದಿವಸಗಳಿಂದ ಔಷಧಿಗಾಗಿ ಅಲ್ಲಿಗೆ ಬರುತ್ತಿತ್ತು. ಆ ದಿವಸ ಆ ಔಷಧಿಯನ್ನು ತೆಗೆದುಕೊಂಡು ಇಂಜೆಕ್ಟ್ ಮಾಡಿದಾಗ ಮಗು ಸಾಯಿತು. ಆದರೆ ಆ ಮಗುವಿನ ತಂದೆಯಾಗಲಿ, ತಾಯಿಯಾಗಲಿ ಅಥವಾ ಅವರ ಬಂಧುಗಳಾಗಲಿ ಬಳಗದವರಾಗಲಿ ನಮ್ಮ ಮಗುವಿನ ಸಾವಿಗೆ ವೈದ್ಯರೇ ಕಾರಣವೆಂದು ಅವರು ಎಲ್ಲೂ ಯಾವ ಪೊಲೀಸ್ ಸ್ಟೇಷನ್‌ಗೂ ಫಿರ್ಯಾದಿಯನ್ನು ಕೊಡಲಿಲ್ಲ. ಅವರು ಬಂದು ನಮ್ಮ ಮಗು

ಸಾಯಿತು ಮಗುವಿನ ಶವ ಸಂಸ್ಕಾರ ಮಾಡಬೇಕು ಮತ್ತೆ ಮರಳಿ ಊರಿಗೆ ಹೋಗೋಣವೆಂದು ಆ ಒಂದು ಬಸ್ ನಿಲ್ದಾಣದಲ್ಲಿ ಕುಳಿತುಕೊಂಡು ಅಳುತ್ತಿದ್ದಾಗ, ಯಾರೋ ಬಂದು ಏತಕ್ಕೆ ಅಳುತ್ತಿದ್ದೀಯಾ, ಏನು ಕಥೆ ಎಂದು ಕೇಳಿದಾಗ ಅವರು ಹೀಗಾಯಿತು ಎಂದು ಹೇಳಿದ ಕಥೆ ಕೇಳಿ, ಮಗುವಿನ ಸಾವಿನಿಂದ ನೋವು ಪಡುತ್ತಿರತಕ್ಕಂಥ ಜನರಿಗಿಂತ, ಈ ಮಗು ಸತ್ತು, ಏತಕ್ಕೆ ಅಳುತ್ತಿದ್ದಿಯೋ? ಔಷಧಿ ಕೊಟ್ಟ ವೈದ್ಯರ್ಯಾರು? ಅಲ್ಲಿಂದ ಬೇರೆ ಹೊಸ ಕಥೆ ನಿರ್ಧಾರವಾಯಿತು. ಈ ಹೊಸ ಕಥೆಯಿಂದ ವಸ್ತುಸ್ಥಿತಿಯೇ ಬೇರೆಯಾಯಿತು, ನಡೆದ ಘಟನೆಯೇ ಬೇರೆಯಾಯಿತು. ಇದು ನಡೆದಿರತಕ್ಕಂಥ ಸಂಗತಿ. ಮಾನ್ಯ ಶ್ರೀರಾಮ ರೆಡ್ಡಿಯವರು ಹೇಳಿದ ಹಾಗೆ ಪೋಲಿಸರು ಸ್ವಲ್ಪ ಎಚ್ಚರವಹಿಸಿದ್ದರೆ, ಇದನ್ನು ತಡೆಯ ಬಹುದಿತ್ತು ಎಂದು ನನಗನಿಸುತ್ತದೆ. ಮಾನ್ಯ ಗೃಹಸಚಿವರಿಗೆ ಬಹಳ ಅತ್ಯಂತ ಕಳಕಳಿಯಿಂದ ಮನವಿ ಮಾಡಿಯೊಳ್ಳುತ್ತೇನೆ, ಅವರಿಗೂ ಅರ್ಥವಾಗಿದೆ. ಅವರು ಈ ಕಡೆ ಕುಳುತುಕೊಂಡಿದ್ದಾಗ ಅನೇಕ ಸಾರಿ ಪೋಲೀಸ್ ಸ್ಟೇಷನ್‌ಗಳು ಯಾವ್ಯಾವ ರೀತಿ ಕೆಲಸ ಮಾಡುತ್ತವೆ ಎನ್ನುವ ಬಗ್ಗೆ ಅವರಿಗೂ ಅರ್ಥವಾಗಿದೆ, ನಾನು ಇಲ್ಲವೆಂದು ಹೇಳುತ್ತಿಲ್ಲ. ಕೆಲವು ಸಾರಿ ಪೋಲೀಸ್ ಸ್ಟೇಷನ್‌ಗಳು ರಾಜಕೀಯದ ಕಛೇರಿಗಳಾಗಿರುತ್ತವೆ, ರಾಜಕೀಯದ ಕಾರ್ಯಾಲಯಗಳಾಗಿರುತ್ತವೆ ಮತ್ತೆ ಕೆಲವು ಪೋಲೀಸ್‌ನವರು ಅವರೇ ಪ್ರಚೋದನೆ ಮಾಡಿ, ಮೇಲಿರತಕ್ಕಂಥ ಉನ್ನತ ಅಧಿಕಾರಿಗಳು ಈ ಮಟ್ಟಕ್ಕೆ ಇಳಿಯದೆ ಇರಬಹುದು, ಕೆಳಮಟ್ಟದಲ್ಲಿ ಯಾವ ಈ ಪೋಲೀಸ್ ಸ್ಟೇಷನ್‌ಗಳು ಕೆಟ್ಟರೆ ರಾಜ್ಯದಲ್ಲಾಗತಕ್ಕಂಥ ಅನಾಹುತ ಇದೆ. ಮೇಲ್ವರ್ಗದ ಅಧಿಕಾರಿವರ್ಗದವರ ಬಗ್ಗೆ ನನಗೆ ಅಪಾರವಾದ ಗೌರವವಿದೆ, ನಮ್ಮಲ್ಲಿ ಒಳ್ಳೊಳ್ಳೆಯ ಶ್ರೇಷ್ಠಮಟ್ಟದ ಅಧಿಕಾರಿಗಳಿದ್ದಾರೆ. ಯಾವಾಗ ಮೇಲ್ವರ್ಗದ ಅಧಿಕಾರಿಗಳ ತಲೆಗೆ ಬರುತದೆಂದರೆ, ಎಲ್ಲಾ ಬೆಂಕಿ ಬಿದ್ದು, ಊರು ನಾಶವಾಗಿ, ಜನ ಸತ್ತು ಆಮೇಲೆ ಅದು ಅಂತಿಮವಾಗಿ ಶವಸಂಸ್ಕಾರಕ್ಕೆ ಪೋಲೀಸ್ ನವರು ಹೋಗುವಂತಹ ರೀತಿ . ಕೊನೆಗೆ ಅಲ್ಲೆಲ್ಲಾ ಸತ್ತು, ಮಲಗಿ ಎಲ್ಲಾ ಆದ ಮೇಲೆ, ಆಮೇಲೆ ಓ ಆಯಿತು, ಸತ್ತು ಹೋದರಾ, ಎಷ್ಟು ಜನ ಸತ್ತರು, ಏನು ಎಂದು ಮಹಜರ್ ಬರೆಯುವುದಕ್ಕೆ ಅಷ್ಟೆ ಹೋಗುತ್ತಾರೆಯೇ ಹೊರತು ಅದಕ್ಕಿಂತ ಮುಂಚೆ ಹೋಗುವುದಿಲ್ಲ. ಸಿನಿಮಾದಲ್ಲಿ ಹೋದ ಹಾಗೆಯೇ ಹೋಗುವುದು ಅದು ಸತ್ಯ. ರೀತಿ ಸಿನಿಮದಲ್ಲೂ ನಡೆಯುತ್ತಿರುವುದು. ಅದು ವಸ್ತುಸ್ಥಿತಿ, ಇದು ಮಾನ್ಯ ಗೃಹಸಚಿವರಿಗೆ ಗೊತ್ತು. ತಮ್ಮ ಕ್ಷೇತ್ರದಲ್ಲಿ ನಡೆದಿರತಕ್ಕಂಥದ್ದಕ್ಕೆ ಪೋಲೀಸ್ ಠಾಣೆಯಲ್ಲಿ ಒಂದು ರಾಜಕೀಯದ ನಿರ್ಧಾವಿದೆ. ನನಗೆ ಗೊತ್ತು, ಈ ಘಟನೆ ನಡೆಯುವುದಕ್ಕೆ ಇಡೀ ಪೋಲೀಸ್ ನವರು ಪ್ರಚೋದನೆಗೆ ಬೆಂಬಲ ಕೊಡತಕ್ಕಂಥದ್ದು ಉಂಟು. ನಾನು ನಿನ್ನೆ ಇವತ್ತು ಅಲ್ಲಿ ಆಗಿರತಕ್ಕಂಥ ಘಟನೆಯ ಬಗ್ಗೆ ಸಂಪೂರ್ಣವಾಗಿ ವಿಚಾರಣೆ ಮಾಡಿದಾಗ ಇದೆಲ್ಲಾ ನಡೆದಿರುವುದೂ ಉಂಟು. ಆದರೆ ಒಂದು ನನಗನಿಸುತ್ತದೆ, ಅದೇನೆಂದರೆ, ಈ ಘಟನೆಗೂ ಒಬ್ಬ ವೈದ್ಯ ಕೊಟ್ಟಂಥ ಔಷಧಿಗೂ, ಊರಿನಲ್ಲಿರುವ ಅಂಗಡಿಗಳಿಗೂ ಅಂಗಡಿಗಳ ಲೂಟಿಗೂ, ಅಂಗಡಿಯನ್ನು ಧಾಳಿ ಮಾಡಿದ್ದಕ್ಕೂ, ಅಂಗಡಿಯವರನ್ನು ಎಳೆದಿರುವುದಕ್ಕಾ ಈ ಇರಿತದಿಂದ ಜನರು ಸತ್ತಿರುವುದಕ್ಕೂ ಒಂದಕ್ಕೊಂದು ಒಂದಕ್ಕೊಂದು ಅರ್ಥವಿಲ್ಲದ ಅನರ್ಥವಾದ ಕಾರ್ಯವಾಗಿದೆ. ನಾನು ಇದಕ್ಕೆ ಯಾವುದೇ ಒಂದು ರಾಜಕೀಯವನ್ನು ಬೆರೆಸದೆ ತಮ್ಮ ಮೂಲಕ ಸರ್ಕಾರಕ್ಕೆ ನೇರವಾಗಿ ಹೇಳುತ್ತೇನೆ, ಇದರ ಬಗ್ಗ ಪ್ರಾಮಾಣಿಕವಾಗಿ ಉನ್ನತಮಟ್ಟದ ಶ್ರೇಷ್ಠ ವ್ಯಕ್ತಿಗಳ ಕೈಯಿಂದ ತನಿಖೆ ಆಗಲೇಬೇಕು ತಾವು

ಈ ತನಿಖೆಯನ್ನು ಬಹಳ ದಿವಸಗಳ ಕಾಲ ನಿಧಾನ ಮಾಡಬಾರದು. ತಮ್ಮಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಏಕೆಂದರೆ ನಾನು ನಿಮ್ಮ ಬಗ್ಗೆ ಬಹಳ ಗೌರವನ್ನಿಟ್ಟುಕೊಂಡು ಮಾತನಾಡುತ್ತಿದ್ದೇನೆ. ಇದು ಅಷ್ಟು ಸುಲಭವಾಗಿಬಿಡತಕ್ಕ ಘಟನೆಯಲ್ಲ. ಇದು ಕೇವಲ ಶ್ರೀನಿವಾಸಪುರದ ಪ್ರಶ್ನೆಯಾಗುವುದಿಲ್ಲ ಈ ಒಂದು ವಿಷ, ವಿಷದ ಗಾಳಿ ಇಡೀ ರಾಜ್ಯಕ್ಕೆ ಹಬ್ಬುತ್ತದೆ, ಇಡೀ ರಾಜ್ಯದಲ್ಲಿ ಒಂದು ಹೊಸ ಕೆಟ್ಟ ವಾತಾವರಣ ನಿರ್ಮಾಣವಾಗುತ್ತದೆ. ಅದುದರಿಂದ ನಾಳೆ ಎಲ್ಲಿಗೆ ಹೋಗಬೇಕು? ನಿರಾಪರಾಧಿಗಳ ಗತಿಯೇನು? ಇಲ್ಲಿ ಇರತಕ್ಕಂಥದ್ದು ಕೇವಲ ಮಗು ಸತ್ತದ್ದು, ಡಾಕ್ಟರು ಔಷಧಿ ಕೊಟ್ಟಿದ್ದು, ಡಾಕ್ಟರು ಯಾರು, ಮಗು ಯಾರು, ಸಾವು ಇಷ್ಟೆ ಅಲ್ಲಿರತಕ್ಕದ್ದು, ಇದು ಬಹಳ ಸೂಕ್ಷ್ಮ ಹಾಗೂ ಸಣ್ಣ ವಿಚಾರ. ಅದು ಇಷ್ಟು ಬೃಹದಾಕಾರವಾಗಿ ಬೆಳೆಯಬೇಕಾದರೆ ಇದಕ್ಕೆ ಪಿತೂರಿಯೇ ಕಾರಣ. ಈ ಪಿತೂರಿಗೆ ಕಾರಣ ಯಾರು, ಅವರು ಯಾರೇ ಅಗಿರಲಿ, ಅವರ ಬಗ್ಗೆ ಸ್ಪಷ್ಟವಾದಂಥ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕಾದ್ದು ಅತ್ಯಂತ ನ್ಯಾಯೋಚಿತವೆನ್ನತಕ್ಕ ಮಾತನ್ನು ತಮಗೆ ಹೇಳುತ್ತೇನೆ. ಈ ಘಟನೆಯಿಂದ ನಷ್ಟವನ್ನು ತಕ್ಷಣ ಗಮನಹರಿಸಬೇಕು. ಅನುಭವಿಸಿರುವವರ ಬಗ್ಗೆ ಈ ಘಟನೆಯಿಂದ ನಷ್ಟವೇನಾಗಿದೆ, ಅಂಗಡಿಯವರ ನಷ್ಟವೇನಾಗಿದೆ, ವ್ಯಕ್ತಿಯ ನಷ್ಟವೇನಾಗಿದೆ, ಸತ್ತಿರುವವರು ಯಾರು ಅವರಿಗೆ ಈ ಕೂಡಲೇ ಪರಿಹಾರವನ್ನು ತಕ್ಷಣ ಕೊಡಬೇಕು. ಇದರ ಬಗ್ಗೆ ನೀವು ನಾಳೆ ತೀರ್ಮಾನ ತೆಗೆದುಕೊಂಡು ಸರ್ಕಾರದಿಂದ ಕೊಡತಕ್ಕಂಥ ವ್ಯವಸ್ಥೆ ಬೇಡ ಒಂದು ಗುಂಡಪಿನ್ ಹೋಗಿದ್ದರೂ ಸಹ ಅದರ ಪರಿಹಾರವನ್ನು ಸರ್ಕಾರ ನೇರವಾಗಿ ಕೊಡತಕ್ಕ ವ್ಯವಸ್ಥೆಗೆ ಕೈ ಹಾಕಬೇಕೆಂದು ಅಧ್ಯಕ್ಷರೆ ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ. ಮತ್ತೊಮ್ಮೆ ಪೋಲೀಸ್ ಠಾಣೆಗಳ ಬಗ್ಗೆ ಕೈಮುಗಿದು ಹೇಳುತ್ತೇನೆ, ನಾನು ಹೇಳಿದೆ ಎಂದು ವರ್ಗ ಮಾಡುವುದಾಗಲಿ ಅಥವಾ ಬೇರೆ ಶಾಸಕರು ಹೇಳಿದರೆಂದು ವರ್ಗ ಮಾಡತಕ್ಕಂಥ, ಈ ವರ್ಗಾವರ್ಗಿಯ ವ್ಯವಸ್ಥೆ, ಶಾಸಕರುಗಳು ಹೇಳುವಂತ ಈ ಸಬ್ ಇನ್ಸಪೆಕ್ಟರುಗಳು, ಇನ್ಸಪೆಕ್ಟರುಗಳನ್ನು ವರ್ಗಾ ಮಾಡಿ ಹಾಕಿಕೊಳ್ಳುವ ದುರಂತದಿಂದಲೇ ಇದು ಅಗಬಹುದೇನೊ ಎನ್ನುವಷ್ಟು ಆಗಿ ಎಲ್ಲಾ ಪೋಲೀಸ್ ಠಾಣೆಗಳು ಕೆಟ್ಟಿದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ ಎಲ್ಲಾ ಸಬ್ ಇನ್ಸಪೆಕ್ಟರು, ಸರ್ಕಲ್ ಇನ್ಸಪೆಕ್ಟರುಗಳು ಕೆಟ್ಟಿದ್ದಾರೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕೆಲವರು ಇಂತಹ ರಾಜಕಾರಣವನ್ನು ಉಪಯೋಗಿಸಿಕೊಳ್ಳುವ ವ್ಯವಸ್ಥೆಗೆ ಹೋಗುತ್ತಾರೆ. ಅಧ್ಯಕ್ಷರೇ ಅದನ್ನು ಮಾನ್ಯ ಗೃಹ ಮಂತ್ರಿಗಳಿಗೆ ಹೇಳುತ್ತೇನೆ, ಅವರಿಗೆ ಸಂಪೂರ್ಣ ಗೊತ್ತಿದೆ. ಸಂಪೂರ್ಣ ವಿಚಾರ ತಿಳಿದಿದ್ದಾರೆ ಮತ್ತು ಇಲಾಖೆಯ ಬಗ್ಗೆ ಸಂಪೂರ್ಣವಾಗಿ ಬಹಳ ತಿಳಿದುಕೊಂಡಿದ್ದಾರೆ, ಇದನ್ನು ಏನು ಮಾಡಬೇಕೆನ್ನುವುದನ್ನು ತಮ್ಮ ಮೂಲಕ ಅವರಿಗೆ ಹೇಳುತ್ತಿದ್ದೇನೆ, ಈ ಪೋಲಿಸ್ ಠಾಣೆಯಿಂದ ಉದ್ಭವಾದಂತಹ ಬೆಂಕಿಗೆ ಕಿಡಿಗೆ ಪೋಲೀಸ್ ಠಾಣೆಯೇ ಒಂದು ರೀತಿ ಪ್ರಚೋದನೆಗೆ ಕಾರಣವಾಗಿದೆ ಎನ್ನುವುದರಲ್ಲಿ ಅನುಮಾನವಿಲ್ಲ, ಇದರ ಬಗ್ಗೆ ಸಮಗ್ರವಾಗಿ ತನಿಖೆ ಉನ್ನತಮಟ್ಟದಲ್ಲಿ ನಡೆಯ ಬೇಕೆಂದು ನಾನು ಒತ್ತಾಯಿಸುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ಈ ವಿಷಯವನ್ನು ಎತ್ತಬೇಕೆಂದು ನಾನು ತಮಗೆ ವಿನಂತಿ ಮಾಡಿದ್ದೆ. ಒಬ್ಬ ಹಿರಿಯ ನಿವೃತ್ತ ಅಧಿಕಾರಿ ದೈವಾಧೀನರಾದ್ದರಿಂದ ಅವರ ಮನೆಗೆ ಹೋಗಿ ಬರುವುದು ಸ್ವಲ್ಪ ತಡವಾಗಿ ನಾನು

ಸಮಯಕ್ಕೆ ಸರಿಯಾಗಿ ಬರುವುದಕ್ಕಾಗಲಿಲ್ಲ. ಒಂದು ಮಗುವಿಗೆ ವೈದ್ಯರೊಬ್ಬರು ಚುಚ್ಚುಮದ್ದನ್ನು ನೀಡುವಂತಹ ಸಂದರ್ಭದಲ್ಲಿ, ಒಂದು ಮಗು ಮೃತವಾಯಿತೆಂದು ಇದರಿಂದ ಒಂದು ಪ್ರಕ್ಷುಬ್ಧವಾತಾವರಣ ಅಲ್ಲಿ ನಿರ್ಮಾಣವಾಗಿ ಎರಡು ಸಾವಿನೊಂದಿಗೆ ಲೂಟಿ , ಇಂತಹ ಅನೇಕ ದುಷ್ಕೃತ್ಯಗಳು ಅಲ್ಲಿ ನಡೆದು ಇವತ್ತು ಅಲ್ಲಿ ಕರ್ಫ್ಯೂ ಜಾರಿ ಮಾಡಿರುವುದನ್ನು ನಾವು ಪತ್ರಿಕೆಯಲ್ಲಿ ಓದಿದ್ದೇವೆ. ಒಂದು ದುಃಖಿತರುವಂತಹ ಸಂಗತಿ ಎಂದರೆ, ಕೋಲಾರ ಜಿಲ್ಲೆಯ ಕೆಲವು ಭಾಗದಲ್ಲಿ ಯಾವುದೇ ಸಣ್ಣಪುಟ್ಟ ಘಟನೆಗಳು ನಡೆದರೂ ಸಹ, ಅದಕ್ಕೆ ಒಂದು ಬೇರೆ ಬಣ್ಣವನ್ನುಕೊಟ್ಟು ಗೊಂದಲದ ವಾತಾವರಣ ನಿರ್ಮಾಣ ಮಾಡುವಂತಹದ್ದು ನಿರಂತರವಾಗಿ ನಡೆಯುತ್ತಿದೆ. ಬಹುಶಃ ಗೃಹ ಇಲಾಖೆ ಆ ಭಾಗದಲ್ಲಿ ಯಾವುದೇ ಈ ಸಣ್ಣಪುಟ್ಟ ಘಟನೆಗಳು ನಡೆದರೂ ಸಹ ಅದನ್ನು ತುಂಬಾ ಮುಂಜಾಗ್ರತೆಯಿಂದ, ಎಚ್ಚರಿಕೆಯಿಂದ ಅದಕ್ಕೆ ಬೇರೆ ಬಣ್ಣವನ್ನು ಕೊಡದಂತೆ ಅಲ್ಲೇ ಶಾಂತಸ್ಥಿತಿಗೆ ತರುವಂತಹ ಒಂದು ಪ್ರಯತ್ನವನ್ನು ಮಾಡುವಂತದ್ದು ಅವರ ಆದ್ಯ ಕರ್ತವ್ಯ.

ಇದು ನಿಮ್ಮದೇ ಕ್ಷೇತ್ರವಾದುದರಿಂದ ನನಗಿಂತ ಹೆಚ್ಚು ಮಾಹಿತಿಗಳು ತಮ್ಮಲ್ಲಿ ಇವೆ ಎಂದು ನಾನಾದರೂ ಭಾವಿಸಿದ್ದೇನೆ. ಯಾವುದೋ ಕೋಮಿನ ಒಬ್ಬ ಡಾಕ್ಟರು ಇನ್ನೊಂದು ಕೋಮಿನ ಮಗುವನ್ನು ಚುಚ್ಚು ಮದ್ದು ಕೊಡುವುದರ ಮೂಲಕ ಕೊಲೆ ಮಾಡಲಿಕ್ಕೆ ಸಾಧ್ಯವಿಲ್ಲ. ಡಾಕ್ಟರು ಮಾನವೀಯತೆಯ ದೃಷ್ಟಿಯಿಂದ ಅವನ ಕರ್ತವ್ಯವನ್ನು ಮಾಡುತ್ತಾನೆ, ಅವನು ಹಿಂದೂ ಆಗಲೀ, ಮುಸ್ಲಿಂ ಆಗಲೀ ಅದಕ್ಕೆ ಬೇರೆ ಬಣ್ಣ ಕೊಡುವಂಥಾದ್ದು ಅಕ್ಷಮ್ಯ ಅಪರಾಧ, ಇದು ಒಂದು ನೀಚ ಪ್ರವೃತ್ತಿ ಎಂದು ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇದು ಸಾಧ್ಯವಿಲ್ಲ. ಆದರೆ ಸನ್ಮಾನ್ಯ ಅಧ್ಯಕ್ಷರೇ, ಈ ಘಟನೆ ನಡೆಯುತ್ತವೆ ಎಂದು ಯಾವುದೇ ಪೋಲೀಸ್ ಅಧಿಕಾರಿ ಕನಸು ಕಾಣುವುದಕ್ಕೆ ಆಗುವುದಿಲ್ಲ. ಈ ಘಟನೆ ಆದ ಮೇಲೆ ಅಥವಾ ಗೊತ್ತಾದ ಮೇಲೆ, ಒಂದು ಕೆಟ್ಟ ಪರಿಸ್ಥಿತಿ ನಿರ್ಮಾಣವಾಗದ ರೀತಿಯಲ್ಲಿ ತಕ್ಷಣ ಬಂದೋಬಸ್ತು ಮಾಡುವಂಥ ಪ್ರಾಮಾಣಿಕ ಪ್ರಯತ್ನ ಪೋಲೀಸ್ ಇಲಾಖೆಯಿಂದ, ಅಧಿಕಾರಿಯಿಂದ ಆಗಬೇಕಾಗಿದೆ. ಅಲ್ಲಿ ಅವರು ಎಡವಿದ್ದಾರೆ ಎನ್ನುವಂಥಾದ್ದು ಪತ್ರಿಕಾ ವರದಿಯಿಂದ ನಮ್ಮ ಸ್ನೇಹಿತರು ಮಾತನಾಡಿದುದರಿಂದ ನನಗೆ ತಿಳಿದು ಬಂದ ಅಂಶ. ಇದು ಗೊತ್ತಾದರೂ ಸಹ, ನಾವು ಯಾರಾದರೂ ಹೋಗುವುದರಿಂದ ಅದಕ್ಕೆ ಬೇರೆ ರಾಜಕೀಯ ಬಣ್ಣ ಕೊಡಬಹುದು ಎನ್ನುವ ದೃಷ್ಟಿಯಿಂದ ಅಧ್ಯಕ್ಷರೇ ಇರುವಂಥ ಈ ಕ್ಷೇತ್ರದ ಬಗ್ಗೆ ನಮ್ಮ ಗೃಹ ಇಲಾಖೆ ವಿಶೇಷವಾದ ಗಮನ ಕೊಟ್ಟು, ಅದನ್ನು ಶಮನ ಮಾಡುತ್ತಾರೆ, ಅಪರಾಧಿಗಳನ್ನು ಬಂಧನ ಮಾಡುತ್ತಾರೆ, ಅಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವಂಥ ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆ ಎಂದು ನಾನಾದರೂ ಭಾವಿಸಿದ್ದೆ ಆದರೆ ಪತ್ರಿಕಾ ವರದಿಯನ್ನು ನೋಡಿದಾಗ ಅದಕ್ಕೊಂದು ರಾಜಕೀಯ ಬಣ್ಣದ ತಿರುವನ್ನು ಕೊಡುವಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ಕೆಲವು ಪಿತೂರಿಗಳಿಂದ ಕೆಲವು ಅಧಿಕಾರಿಗಳು ಅಲ್ಲಿ ಮಾಡಿದ್ದಾರೆ, ಎನ್ನುವಂಥಾದ್ದು ಪತ್ರಿಕಾ ವರದಿಗಳಿಂದ ಸ್ಪಷ್ಟವಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ಯಾರೇ ವ್ಯಕ್ತಿ ಈ ಘಟನೆಯಲ್ಲಿ ಪಾಲುಗೊಂಡಿದ್ದು, ಈ ಅಶಾಂತಿಯ ವಾತಾವರಣಕ್ಕೆ ಅವಕಾಶ ಮಾಡಿಕೊಟ್ಟಿದ್ದರೆ, ಅವನ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯ ಮಾಡುವಂಥ ವ್ಯಕ್ತಿ ನಾನು. ಇದರಲ್ಲಿ ಎರಡು ಮಾತಿಲ್ಲ. ಆದರೆ ಇಲ್ಲಿ ಉದ್ದೇಶಪೂರ್ವಕವಾಗಿ ಬಿ.ಜೆ.ಪಿ. ಕಾಂಗ್ರೆಸ್ ಅಥವಾ

ಮತ್ತೊಂದು ಎಂದು ಹೇಳಿ ಅದನ್ನು ತಿರುಚುವಂಥ, ಅದಕ್ಕೆ ಬಣ್ಣ ಕಟ್ಟುವಂಥ ಪ್ರಯತ್ನ ಯಾರಾದರೂ ಮಾಡಿದ್ದರೆ, ಬಹುಶಃ ಅದಕ್ಕಿಂತ ದೊಡ್ಡ ಅಪರಾಧ ಬೇರೊಂದು ಇಲ್ಲ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ದಯಮಾಡಿ ನಾನು ವಿನಂತಿ ಮಾಡುತ್ತೇನೆ. ಇದರ ಬಗ್ಗೆ ಒಂದು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿಸಿ. ಏಕೆ ನಾನು ಜುಡಿಷಿಯಲ್ ಎನ್‌ಕ್ವೈರಿ ಮಾಡಿ ಎಂದು ಹೇಳುತ್ತಿದ್ದೇನೆ ಎಂದರೆ ಇದಕ್ಕೆ ರಾಜಕೀಯ ಬಣ್ಣ ಕೊಟ್ಟಿರುವುದರಿಂದ. 84 ಜನರನ್ನು ಬಂಧನ ಮಾಡಿದ್ದೀರಿ ಎಂದು ಅದರಲ್ಲಿ 60 ಜನ ಬಿ.ಜೆ.ಪಿ. ಯವರನ್ನು ತಾವು ಬಂಧನ ಮಾಡಿದ್ದೀರಿ. ಪ್ರಮುಖ ಬಿ.ಜೆ.ಪಿ.ಕಾರ್ಯಕರ್ತರಾದ ಸೋಮಪ್ಪ ರೆಡ್ಡಿ ಎನ್ನುವಂಥ ಮಾಸ್ಟರ್ ಒಬ್ಬರನ್ನು ನೀವು ಬಂಧನ ಮಾಡಿದ್ದೀರಿ, ನಾರಾಯಣ ಸ್ವಾಮಿ ಎಂಬ ಬಿ.ಜೆ.ಪಿ.ಯ ಕಿಸಾನ್ ಮೋರ್ಚ ಅಧ್ಯಕ್ಷರನ್ನು ಬಂಧನ ಮಾಡಿದ್ದೀರಿ. ನಾಲ್ಕಾರು ದಿವಸಗಳ ಹಿಂದೆ ಬಿ.ಜೆ.ಪಿ.ಯ ತಾಲ್ಲೂಕು ಅಧ್ಯಕ್ಷರಾದಂಥ ಜಯರಾಮರೆಡ್ಡಿ ಎನ್ನುವವರನ್ನು ಬಂಧನ ಮಾಡಿದ್ದೀರಿ. ಡಬ್ಬಪ್ಪ ಎನ್ನುವ ಇನ್ನೊಬ್ಬ ಯುವ ಮೋರ್ಚಾ ಅಧ್ಯಕ್ಷರನ್ನೂ ಸಹ ತಾವು ಬಂಧನ ಮಾಡಿದ್ದೀರಿ. ಅಂದರೆ ತಮ್ಮ ಕಣ್ಣು, ಎಲ್ಲಿ ಏನೇ ಘಟನೆ ನಡೆದರೂ ಸಹ ಭಾರತೀಯ ಜನತಾ ಪಾರ್ಟಿಯ ಮುಖಂಡರನ್ನು ಬಂಧನ ಮಾಡಿ, ಅದಕ್ಕೊಂದು ಕೋಮು ಬಣ್ಣವನ್ನು ಕಟ್ಟಿ, ಒಂದು ರೀತಿ ರಾಜಕೀಯ ಸೇಡನ್ನು ತೀರಿಸಿಕೊಳ್ಳುವಂಥ ಪ್ರಯತ್ನ ಏನಾದರೂ ಆಗಿದ್ದರೆ, ಬಹುಶಃ ಇದು ನಾಚಿಕೆಯಿಂದ ತಲೆ ತಗ್ಗಿಸಬೇಕಾದ ಸಂಗತಿ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಕಾಂಗ್ರೆಸ್ಸಿನ ಮುಖಂಡರು, ಬಿ.ಜೆ.ಪಿ.ಯ ಮುಖಂಡರು ಬಹಳ ಸ್ಪಷ್ಟವಾಗಿ ನಿಷ್ಪಕ್ಷಪಾತವಾದ ಒಂದು ತನಿಖೆಯಾಗಬೇಕು ಎಂದು ಆಗ್ರಹ ಮಾಡಿದ್ದಾರೆ. ನಾನೂ ಸಹ ಆಗ್ರಹವನ್ನು ಮಾಡುತ್ತಿದ್ದೇನೆ. ಆದರೆ ಈ ಒಂದು ಘಟನೆಯನ್ನು ಲೋಕಸಭಾ ಚುನಾವಣೆಯ ಹಿನ್ನಲೆಯಲ್ಲಿ ರಾಜಕೀಯ ಲಾಭಕ್ಕಾಗಿ ಯಾರಾದರೂ, ಯಾವುದೇ ಪಕ್ಷದವರು ಇರಲಿ, ಅದನ್ನು ಉಪಯೋಗ ಮಾಡಿಕೊಳ್ಳುವಂಥ ಪ್ರಯತ್ನ ಮಾಡಿದ್ದರೆ, ಇದು ಅಕ್ಷಮ್ಯ ಅಪರಾಧ. ನಾವು ಆ ಕಡೆ ಇರಲಿ, ಈ ಕಡೆ ಇರಲಿ, ಒಂದು ಜವಾಬ್ದಾರಿ ಸ್ಥಾನದಲ್ಲಿರುವಂಥ ಪ್ರಮುಖರು, ಈ ರೀತಿಯ ಘಟನೆಗಳು ನಡೆದಾಗ ಶಾಂತಿಯನ್ನು ಕಾಪಾಡುವಂಥ ಪ್ರಯತ್ನ ಮಾಡಬೇಕೇ ಹೊರತು, ಲಕ್ಷಾಂತರ ರೂಪಾಯಿ ಆಸ್ತಿಪಾಸ್ತಿ ನಷ್ಟವಾದರೆ, ನಮ್ಮವರದೇ ನಷ್ಟವಾಗುತ್ತದೆ. ಸರ್ಕಾರ ಪರಿಹಾರ ಕೊಡುವುದನ್ನು ನಮ್ಮ ತೆರಿಗೆ ಹಣದಿಂದ ಅವರು ಕೊಡಬೇಕಾಗುತ್ತದೆ. ಯಾರಿಗೆ ನಷ್ಟವಾಗಿದೆ, ಯಾರಿಗೆ ಆಸ್ತಿಪಾಸ್ತಿ ನಷ್ಟವಾಗಿದೆ, ಈ ಒಂದು ಘಟನೆಯಿಂದ ಇಬ್ಬರು ಮೃತರಾಗಿದ್ದಾರೆ, ಗಾಯಾಳುಗಳಾಗಿದ್ದಾರೆ, ಎಲ್ಲ ಸಂದರ್ಭದಲ್ಲಿ ಯಾವ ರೀತಿ ತಾವು ಪರಿಹಾರವನ್ನು ಕೊಡುತ್ತೀರೋ ಅದರಂತೆಯೇ ತಕ್ಷಣ ಪರಿಹಾರವನ್ನು ಕೊಡುವುದರ ಜೊತೆಗೆ, ಇದರ ಬಗ್ಗೆ ದಯಮಾಡಿ ಒಂದು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬೇಕು. ರಾಜಕೀಯ ಬಣ್ಣವನ್ನು ಕೊಡುವಂಥ ಪ್ರಯತ್ನ ಏನಾದರೂ ಆಗಿದ್ದರೆ, ಅದು ಆಗದಂತೆ ಸನ್ಮಾನ್ಯ ಗೃಹ ಸಚಿವರು ವಿಶೇಷವಾದ ಗಮನವನ್ನು ಕೊಡಬೇಕು ಎಂದು ಮಾತ್ರ ಈ ಸಂದರ್ಭದಲ್ಲಿ ಒತ್ತಾಯ ಮಾಡಿ ನಾನು ವಿನಂತಿಯನ್ನು ಮಾಡುತ್ತೇನೆ, ಯಾರು ಪೋಲೀಸ್ ಅಧಿಕಾರಿಗಳಿಗೆ ಬಿ.ಜೆ.ಪಿ.ಯವರ ಮೇಲೆ ಕೇಸ್ ಹಾಕಿದರೆ ಆಡಳಿತ ಪಕ್ಷದವರಿಗೆ ಸಮಾಧಾನವಾಗುತ್ತದೆ ಎನ್ನುವುದು ಬಹಳ ಜನಜನಿತವಾಗಿರುವಂಥ ಸಂಗತಿ. ಕಳೆದ ಹತ್ತಾರು ವರ್ಷಗಳಿಂದ ನಾವು ನೋಡಿಕೊಂಡು ಬಂದ, ಬಹುಶಃ ತಮ್ಮಲ್ಲಿ ಗಮನ, ಯಾವುದೇ ಸಂದರ್ಭದಲ್ಲಿ,

ಯಾವುದೇ ಘಟನೆಗಳು ನಡೆದರೂ ಸಹ ಅದಕ್ಕೆ ಒಂದು ಬಣ್ಣವನ್ನು ಕಟ್ಟಿ ಬಿ.ಜೆ.ಪಿ.ಯವರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವಂಥ ಪ್ರಾಮಾಣಿಕ ಪ್ರಯತ್ನ ನಮ್ಮ ಅಧಿಕಾರಿಗಳು ಮಾಡುತ್ತಾರೆ. ಉನ್ನತ ಅಧಿಕಾರಿಗಳು ಅದರಲ್ಲಿ ಇದ್ದಾರೆಯೋ, ಇಲ್ಲವೋ ಗೊತ್ತಿಲ್ಲ. ಅಲ್ಲಿರುವಂಥವರು ಆ ಒಂದು ಕೆಲಸ ಮಾಡಿದಾಗ ಮಾತ್ರ ಅಲ್ಲಿ ಸಬ್‌ಇನ್ಸಪೆಕ್ಟರೋ, ಸರ್ಕಲ್‌ಇನ್ಸಪೆಕ್ಟರೋ ಆಗಿ ಮುಂದುವರೆಯುವಂಥ ಒಂದು ಸಂದರ್ಭವನ್ನು ನಾವು ಇವತ್ತು ಕಾಣುತ್ತಿದ್ದೇವೆ. ಆದರೆ ನಮ್ಮ ಅಧ್ಯಕ್ಷರು ಇರುವಂಥ ಕ್ಷೇತ್ರದಲ್ಲಿ ಆ ರೀತಿ ಆಗಲಿಕ್ಕಿಲ್ಲ ಎನ್ನುವಂಥ ವಿಶ್ವಾಸ ನನಗಿದೆ. ಸತ್ಯ ಸಂಗತಿ ಅವರಿಗೆ ಮನವರಿಕೆಯಾಗಿದೆ. ಗೃಹ ಸಚಿವರಲ್ಲಿ ವಿನಂತಿ ಮಾಡುತ್ತೇನೆ, ಅಲ್ಲಿರುವಂಥ ಜನಗಳಿಗೆ ಸತ್ಯ ಸಂಗತಿ ಗೊತ್ತಿಲ್ಲ. ದಯಮಾಡಿ, ನಾವೂ ಒಟ್ಟಿಗೆ ಹೋಗೋಣ. ತಾವು ಹೋಗಿ ಬಂದಿದ್ದೀರಿ. ನೀವೂ ಜೊತೆಗೆ ಇದ್ದರೆ ಒಳ್ಳೆಯದು. ಅಲ್ಲಿ ಯಾವ ವರ್ಗಕ್ಕೂ ಸಂಬಂಧಪಡದೇ ಇರತಕ್ಕಂಥ ವ್ಯಕ್ತಿಗಳನ್ನು ಭೇಟಿ ಮಾಡೋಣ, ಹಿರಿಯರನ್ನು ಭೇಟಿ ಮಾಡೋಣ. ಇದಕ್ಕೆ ಕಾರಣ ಯಾರು? ಏತಕ್ಕೆ ಈ ಬಣ್ಣ ಬಂತು, ವಾಸ್ತವಿಕ ಸ್ಥಿತಿ ಏನು? ಸತ್ತವರು ಯಾವು? ಈ ಘಟನೆ ಈ ರೀತಿ ಸತ್ತಾದಮೇಲೆ ಆಯಿತೇ? ಮುಂಚೆ ಆಯಿತೇ? ಮಗು ಸತ್ತಮೇಲೆ ಆಯಿತೇ? ಅಥವಾ ಇಬ್ಬರು ಇರಿತಕ್ಕೆ ಒಳಗಾಗಿ ಸತ್ತಮೇಲೆ ಆಯಿತೇ? ಈ ಸಂಗತಿಗಳ ಬಗ್ಗೆ ಸನ್ಮಾನ್ಯ ಗೃಹ ಸಚಿವರು ಉತ್ತರ ಕೊಟ್ಟಮೇಲೆ ಕೆಲವು ಸ್ಪಷ್ಟೀಕರಣ ನಾನು ಕೇಳಲಿಕ್ಕೆ ಬಯಸುತ್ತೇನೆ. ಸನ್ಮಾನ್ಯ ಗೃಹ ಸಚಿವರು ಆಗಬಹುದು ಎನ್ನುವುದಾದರೆ, ದಯಮಾಡಿ ನಾವು ಅಲ್ಲಿಗೆ ಹೋಗಿ ಬಂದರೆ ಇನ್ನೂ ವಿಚಾರ ತಿಳಿಯಾಗಬಹುದು. ನಿಮಗೆ ನಿಮ್ಮದೇ ಆದಂಥ ಮಾಹಿತಿಗಳಿದ್ದರೂ ಸಹ ನಾನು ಬಂದಾಗ ಇನ್ನೂ ಕೆಲವು ಸಂಗತಿಗಳನ್ನು ಯಾವುದೇ ಪಕ್ಷಕ್ಕೆ ಸೇರದಂಥ ಹಿರಿಯರನ್ನು, ಯಾರೂ ಪ್ರತ್ಯಕ್ಷದರ್ಶಿಗಳು ಇದ್ದಾರೆ, ಅವರನ್ನು ಕೇಳುವುದರಿಂದ ಇನ್ನೂ ವಾಸ್ತವಿಕ ಸ್ಥಿತಿ ನಿಮಗೆ ಮನದಟ್ಟು ಆಗಬಹುದು ಎಂದು ವಿನಂತಿ ಮಾಡಿ, ದಯಮಾಡಿ ತಕ್ಷಣ ಸೂಕ್ತವಾದಂಥ ಪರಿಹಾರವನ್ನು ಅವರೆಲ್ಲರಿಗೂ ಒದಗಿಸಿ ಕೊಡಬೇಕು. ಜ್ಯುಡಿಷಿಯಲ್ ಎನ್ ಕ್ವೈರಿಯನ್ನು ತಕ್ಷಣ ಮಾಡಿಸಬೇಕು ಎನ್ನುವಂಥ ಒತ್ತಾಯವನ್ನು ನಾನು ಸರ್ಕಾರಕ್ಕೆ ತಮ್ಮ ಮೂಲಕ ಮಾಡುತ್ತಿದ್ದೇನೆ.

+ ಶ್ರೀ ಆರ್. ಶ್ರೀನಿವಾಸ್ (ಮುಳಬಾಗಿಲು) : ಮಾನ್ಯ ಅಧ್ಯಕ್ಷರೇ, ನಿನ್ನೆ ಶ್ರೀನಿವಾಸಪುರದ ಘಟನೆ ನೋಡಲಿಕ್ಕೆ ನಾನೇ ಸ್ವತಃ ಹೋಗಿದ್ದೆ. ಅಲ್ಲಿ ನೋಡಿದ ಮೇಲೆ ನನಗನ್ನಿಸಿತು, ಯಾವುದೋ ಒಂದು ಬೇರೆ ಊರನ್ನು ನೋಡುತ್ತಿದ್ದೇವೇನೋ ಎಂದು. ಇದಕ್ಕೆ ಕಾರಣ ಏನು ಎಂದರೆ, ತಮಗೆ ಗೊತ್ತೇ ಇದೆ. ನನ್ನ ಕ್ಷೇತ್ರ ಕೂಡ ಶ್ರೀನಿವಾಸಪುರಕ್ಕೆ ಕೇವಲ 3 ಕಿಲೋಮೀಟರ್ ನಿಂದಲೇ ಶುರುವಾಗುತ್ತದೆ. ನನ್ನ ಹಳ್ಳಿಗಳಲ್ಲಿ ಕೂಡ ಏನಾದರೂ ಅಶಾಂತಿ ಆಗಬಹುದೇನೋ ಎನ್ನುವಂಥ ಅನಿಸಿಕೆಯಿಂದ ನಾನು ಅಲ್ಲಿ ಹೋಗಿ ನೋಡಿದಾಗ ನನಗಂತೂ ಕಣ್ಣಿನಲ್ಲಿ ನೀರು ಬಂತು. ಅಲ್ಲಿ ಮೈನ್ ಬಜಾರ್ ನಲ್ಲಿ ನಿನ್ನೆಯವರೆಗೂ ಕೂಡ ಬೆಂಕಿ ಉರಿಯುತ್ತಾ ಇದ್ದುದನ್ನು ನಾನು ಕಣ್ಣಾರೆ ಕಂಡೆ. ಈ ಘಟನೆ ಕಾರಣಕರ್ತರು ಯಾರು ಎನ್ನುವುದು ಕೆಲವರಿಗೆ ಈಗಾಗಲೇ ಗೊತ್ತಾಗಿದೆ. ಆದರೆ ಅವರನ್ನು ಇದುವರೆಗೂ ಕೂಡ ಹಿಡಿದಿಲ್ಲ. ಇದು ಬಹಳ ಅನ್ಯಾಯ. ಇವತ್ತು ಯಾರು ಒಬ್ಬ ಡಾಕ್ಟರು ತಪ್ಪು ಮಾಡಿದ್ದಾನೆ ಎಂದು ಹೇಳಿದರೂ ಕೂಡ ಅವನನ್ನು ಪೋಲೀಸ್ ಸ್ಟೇಷನ್‌ಗೆ ಕರೆದರೆ, ಪೋಲೀಸ್ ಸ್ಟೇಷನ್‌ಗೇ ಹೋಗಿ, ನಾಲ್ಕು ಜನ ಅವನನ್ನು ಹಿಡಿದುಕೊಂಡು ಸಬ್‌ಇನ್ಸ್‌ಪೆಕ್ಟರ್ ಮುಂದೆನೇ

ಹೊಡೆದರೆ ಯಾರು ತಾನೇ ಸುಧಾರಿಸಿಕೊಳ್ಳುವುದಕ್ಕಾಗುತ್ತದೆ. ತಪ್ಪು ಆಗಿದೆ. ಕಾನೂನನ್ನು ಕೈಗೆ ಎತ್ತಿಕೊಳ್ಳುವಂಥ ಕೆಲಸವನ್ನು ಯಾರೂ ಮಾಡಬಾರದು. ಆ ಕೆಲಸ ಆಗಿದ್ದುದರಿಂದ ಇವತ್ತು ಈ ಎಲ್ಲಾ ಘಟನೆಗಳಿಗೂ ಕೂಡ ಅವಕಾಶವಾಗಿದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಆ ಮಗು ಸುಮಾರು 3-4 ದಿವಸಗಳಿಂದಲೂ ಕೂಡ ಕಾಯಿಲೆ ಬಿದ್ದಿತ್ತು. ಆ ಮಗು ಸತ್ತು ಹೋದ ಮೇಲೆ, ಅವರು ಬಸ್ ಸ್ಟ್ಯಾಂಡಿಗೆ ಬಂದು, ಬಸ್ ಹತ್ತಲಿಕ್ಕೆ ಹೋದಾಗ, ಮಗು ಸತ್ತಮೇಲೆ ಆ ತಾಯಿಗೆ ಎಲ್ಲರಿಗೂ ಕೂಡ ನೋವಾಗುತ್ತದೆ. ಅತ್ತುಕೊಂಡು, ನನ್ನ ಮಗು ಸತ್ತಿತ್ತು ಅನ್ನುವಂಥ ನೋವನ್ನು ಅಯಮ್ಮಾ ಪಡುತ್ತಿದ್ದರೆ ಇವರು ಈ ಸಮಯವನ್ನು ಉಪಯೋಗಿಸಿಕೊಂಡು, ಮುಂದಿನ ಲೋಕಸಭಾ ಚುನಾವಣೆಯಲ್ಲಿ ಏನೋ ಮಾಡಿಬಿಡುತ್ತೇವೆ ಎನ್ನುವಂಥ ಭಾವನೆ ಇಟ್ಟುಕೊಂಡು ಇದಕ್ಕೆ ಪ್ರೇರಿತರಾಗಿ ಈ ಕೆಲಸ ಮಾಡಿದ್ದಾರೆ ಎಂದು ನಾನು ನೇರವಾಗಿ ಹೇಳಬಯಸುತ್ತೇನೆ. ಇವತ್ತು ಇಂಥ ಯಾವುದೇ ಘಟನೆಗೆ ಅವಕಾಶ ಮಾಡಿದವರನ್ನು ದಯವಿಟ್ಟು ಬಿಡಬಾರದು. ಪೋಲೀಸಿನವರದೂ ಕೂಡ ನನ್ನ ಪ್ರಕಾರ ಸ್ವಲ್ಪ ನಿಷ್ಕ್ರಿಯತೆ ಇದೆ. ಇವತ್ತು, ಅದರಲ್ಲೂ ನಮ್ಮ ಜಿಲ್ಲೆಯಲ್ಲಿ ಮೊದಲಿನಿಂದಲೂ ಕೂಡ, ನಾಲ್ಕೈದು ಪಟ್ಟಣಗಳು ಬಹಳ ಸೆನ್ಸಿಟೀವ್ ಟೌನ್ಸ್ ಆಗಿವೆ. ಅದನ್ನು ಮನದಟ್ಟು ಮಾಡಿಕೊಂಡು ಪೋಲೀಸಿನವರು ಯಾವತ್ತೂ ಕೂಡ ಬಹಳ ಜಾಗರೂಕತೆಯಿಂದ ಇರಬೇಕಾಗುತ್ತದೆ. ಆದರೆ ಇಲ್ಲಿ ಜಾಗರೂತಕೆಯಿಂದ ಕೆಲಸ ನಿರ್ವಹಿಸಲಿಲ್ಲ ಎಂದು ನಾನು ನೇರವಾಗಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಇವತ್ತು ಈ ಘಟನೆಯನ್ನು ನೋಡಿದ ಮೇಲೆ ನಷ್ಟ ಆಗಿರುವವರಿಗೆ ಪರಿಹಾರ ಕೊಡಲೇ ಬೇಕಾಗುತ್ತದೆ. ಅವರಿಗೆ ಪರಿಹಾರ ಕೊಡುವುದಕ್ಕೆ ನಾಳೆ, ನಾಡಿದ್ದು ಎಂದು ಮೀನಾಮೇಷ ಎಣಿಸಬಾರದು. ಜನಗಳಲ್ಲಿ ಒಳ್ಳೆಯ ಭಾವನೆಯನ್ನು ತುಂಬಬೇಕು. ಅಲ್ಲಿ ನಾನು ಕುಳಿತಿದ್ದಾಗೆ ಒಬ್ಬರು ಬಂದು ನೋಡಿ ನಮ್ಮ 16 ವರ್ಷದ ಹುಡುಗರನ್ನು ಕರೆದುಕೊಂಡು ಹೋಗುತ್ತಾರೆ, 18 ವರ್ಷದವರನ್ನು ಕರೆದುಕೊಂಡು ಹೋಗುತ್ತಾರೆ ಎನ್ನುವಂಥಾ ಮಾತನ್ನು ಹೇಳಿದರು. ನಾನು ಹೇಳಿದೆ. ನಮ್ಮ ಕೈ ಮಿಂಚಿ ಹೋಗಿದೆ. ಈಗ ಬಿಟ್ಟುಬಿಡಿ ಪೋಲೀಸಿನವರಿಗೆ, ಅವರು ಇವತ್ತು ಕಾನೂನನ್ನು ಕೈಯಲ್ಲಿ ತೆಗೆದುಕೊಳ್ಳಬೇಕಾಗುತ್ತದೆ, ಆದ್ದರಿಂದ ನೀವು ಯಾರೂ ಅಡ್ಡ ಹೋಗಬಾರದು ಎನ್ನುವಂಥ ಮಾತನ್ನು ಹೇಳಿದಾಗ ನಿನ್ನೆ ಅವರೂ ಒಪ್ಪಿಕೊಂಡರು. ಹಾಗಾಗಿ ಇವತ್ತು ಅಲ್ಲಿ ಯಾರೋ ತಪ್ಪು ಮಾಡಿದ್ದರೂ ಕೂಡ ಅವರ ಮೇಲೆ ಕಠಿಣವಾದಂಥ ಕ್ರಮ ಜರುಗಿಸಬೇಕಾಗುತ್ತದೆ. ಅದರಲ್ಲೂ ಮೊದಲನೆಯದಾಗಿ ಆ ನಾಲ್ಕೈದು ಜನ ಯಾರು ಪೋಲೀಸ್ ಸ್ಟೇಷನ್‌ನಲ್ಲಿ ಆ ಡಾಕ್ಟರನ್ನು ಹೊಡೆದರು ಅವರನ್ನು ಇದುವರೆಗೂ ಬಂಧಿಸಿಲ್ಲ ಎನ್ನುವಂಥ ಮಾತನ್ನು ನಿನ್ನೆ ಅಲ್ಲಿ ಹೇಳಿದರು. ಅದನ್ನು ಮಾನ್ಯ ಮಂತ್ರಿಗಳು ಮನದಟ್ಟು ಮಾಡಿಕೊಂಡು ಅವರನ್ನು ಅರೆಸ್ಟ ಮಾಡಬೇಕು ಎಂದು ಈ ಸಮಯದಲ್ಲಿ ಮತ್ತೊಮ್ಮೆ ಹೇಳಿ ಈ ರೀತಿಯ ಘಟನೆಗಳು ಎಲ್ಲೂ ಕೂಡ ಬರಬಾರದು, ಇದಕ್ಕೆ ರಾಜಕೀಯ ಬೆರೆಸಬಾರದು ನಿಜ. ಯಡಿಯೂರಪ್ಪನವರು ಹೇಳಿದ ಹಾಗೆ ರಾಜಕೀಯ ಬೆರೆಸಬಾರದು. ಆದರೆ ಕೆಲವರಿಗೆ ಇದರಿಂದಲೇ ಲಾಭ ಎನ್ನುವಂಥ ಭಾವನೆ ಇದೆ. ಅಲ್ಲಿ ಒಂದು ಚಪ್ಪಲಿ ಅಂಗಡಿ ಲೂಟಿ ಮಾಡಿದ್ದಾರೆ. ಚಪ್ಪಲಿ ಅಂಗಡಿಯನ್ನು ಏಕೆ ಲೂಟಿ ಮಾಡಿದ್ದಾರೆ ಎಂದರೆ ಈ ಘಟನೆಯನ್ನು ದೊಡ್ಡದು ಮಾಡಿ ಚಪ್ಪಲಿ ಅಂಗಡಿಯಲ್ಲಿ ಚಪ್ಪಲಿಗಳನ್ನು ಗೋಣಿಚೀಲಗಳಲ್ಲಿ ತುಂಬಿಕೊಂಡು ತೆಗೆದುಕೊಂಡು ಹೋಗಿದ್ದಾರೆ. ಬೂಟ್‌ಗಳನ್ನು ತೆಗೆದುಕೊಂಡು

ಹೋಗಿದ್ದಾರೆ. ಇಂಥಹ ಘಟನೆಗೆ ಕೆಲವು ಕಿಡಿಗೇಡಿಗಳು ಕಾಯುತ್ತಿರುತ್ತಾರೆ. ಇದಕ್ಕೆ ಈ ಸರ್ಕಾರ ಗಮನ ಹರಿಸಬೇಕು ಎಂದು ನಾನು ಈ ಸಮಯದಲ್ಲಿ ಹೇಳುತ್ತೇನೆ. ಅಲ್ಲಿ ಏನು ನಷ್ಟವಾಗಿದೆ, ಆ ನಷ್ಟವನ್ನು ತುಂಬಿ ಕೊಡಲು ಸರ್ಕಾರ ಮುಂದೆ ಬರಬೇಕು, ಬೇಗನೆ ಆ ಕೆಲಸ ಮಾಡಿ ಇನ್ನೂ ಸ್ವಲ್ಪ ಅಲ್ಲಿ ಪರಿಸ್ಥಿತಿಯನ್ನು ಸುಧಾರಿಸಬೇಕು. ನಿನ್ನೆಯಿಂದ ಬಹಳ ಒಳ್ಳೆಯ ಬಂದೋಬಸ್ತು ಇದೆ, ಯಾವುದೇ ಅಹಿತಕರ ಘಟನೆಗಳಾಗಿಲ್ಲ. ಆದರೂ ಕೂಡ ಇದರ ಸುತ್ತಲೂ ಅಂದರೆ ನಮ್ಮ ಜಿಲ್ಲೆಯಲ್ಲಿ ಬಹಳ ಸೆನ್ಸಿಟೀವ್ ಇರುವಂಥ ಪಟ್ಟಣಗಳ ಮೇಲೆ ನಿಗಾ ಇಡಬೇಕು ಎಂದು ಈ ಸಮಯದಲ್ಲಿ ಹೇಳುತ್ತೇನೆ ಎರಡನೆಯದಾಗಿ ಮತ್ತೊಂದು ವಿಚಾರವನ್ನು ಹೇಳುತ್ತೇನೆ. ನಿನ್ನೆ ಒಂದು ಘಟನೆಯಾಗಿದೆ, ಕೋಲಾರದಿಂದ ಸುಮಾರು 10 ಕಿಲೋ ಮೀಟರ್ ದೂರದಲ್ಲಿ ಒಂದು ಆಕ್ಸಿಡೆಂಟ್ ಆಗಿದೆ. ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡುತ್ತೇನೆ, ನೀವು ಟೆಂಪೋಗಳಿಗೆ ಪರ್ಮಿಟ್ಟನ್ನು ಕೊಟ್ಟು, ಜನಗಳನ್ನು ಸಾಯಿಸುವುದಕ್ಕೆ ನೀವೇ ಪರ್ಮಿಟ್ ಕೊಟ್ಟ ಹಾಗೆ ಅನ್ನಿಸುತ್ತದೆ. ನಿನ್ನೆ ಆ ಘಟನೆಯನ್ನು ನೋಡಿದಾಗ ಅಲ್ಲೇ ಸ್ಪಾಟ್‌ನಲ್ಲಿ 10 ಜನ ಸತ್ತಿದ್ದಾರೆ. ಇವತ್ತು ಸರ್ಕಾರಕ್ಕೆ ಕೆ.ಎಸ್.ಆರ್.ಟಿ.ಸಿ. ಸರಿಯಾಗಿ ನಡೆಸುವುದಕ್ಕೆ ಆಗದಿದ್ದರೆ ಖಾಸಗೀಕರಣ ಮಾಡಿ. ದಯವಿಟ್ಟು ಜನಗಳನ್ನು ಸಾಯಿಸಬೇಡಿ. ಇದನ್ನು ಸರ್ಕಾರಕ್ಕೆ ನಾನು ನೇರವಾಗಿ ಹೇಳ ಬಯಸುತ್ತೇನೆ. ನೀವು ಖಾಸಗೀಕರಣ ಮಾಡಿ. ಆ ಪ್ರೈವೇಟ್ ಬಸ್‌ನವರು ನಡೆಸಲು ಬಿಡಿ. ಕೊಡಗು ದಿ, ಸೌತ್ ಕೆನಡಾ ನೋಡಿ, ಇಲ್ಲೆಲ್ಲಾ ಪ್ರೈವೇಟ್‌ನವರು ಚೆನ್ನಾಗಿ ನಡೆಯುತ್ತಿದ್ದಾರೆ ಆದರೆ ನೀವು ಕೆ.ಎಸ್.ಆರ್.ಟಿ.ಸಿ ನಡೆಸುವುದಕ್ಕೆ ಆಗದಿದ್ದರೆ ಈ ರೀತಿ ಇವರುಗಳಿಗೆ ಪರ್ಮಿಟ್ಟನ್ನೂ ಕೊಟ್ಟರೂ ಇವರುಗಳಿಂದ ದುಡ್ಡು ಬರುವುದಿಲ್ಲ. ಅದರಿಂದ ನಮಗೆ ಟ್ಯಾಕ್ಸ ಬರುವುದಿಲ್ಲ. ಇಂಥಾದನ್ನೆಲ್ಲಾ ಕೊಟ್ಟು ನಿಜವಾಗಲೂ ಕೂಡ ಜನಗಳನ್ನು ಸಾಯಿಸುತ್ತಿದ್ದೀರಿ. ಇದಕ್ಕೆ ಗಮನ ಕೊಡಬೇಕು. ನಿನ್ನೆ ಆಗಿರುವಂಥ ದುರ್ಘಟನೆಯನ್ನು ನೋಡಿದ ಮೇಲೆ, ಆ ಟೆಂಪೋಗಳವರಿಗೆ ಟ್ಯಾಕ್ಸ ಇಲ್ಲ, ಡ್ರೈವರ್‌ಗೆ ಲೈಸೆನ್ಸ ಇದೆಯೇ ಎಂದು ಚೆಕ್ ಮಾಡುವುದಿಲ್ಲ. ಈ ಪರಿಸ್ಥಿತಿಯಲ್ಲಿರುವುದರಿಂದ ಇಂಥಾದ್ದಕ್ಕೆ ಅವಕಾಶ ಮಾಡಿಕೊಡಬಾರದು. ಇದನ್ನು ಕಟ್ಟುನಿಟ್ಟಾಗಿ ಮಾಡಬೇಕು, ಏನು ಈ ಟೆಂಪೋಗಳಿಗೆ ಅವಕಾಶ ಮಾಡಿಕೊಟ್ಟಿದ್ದೀರಿ, ಪೋಲೀಸಿನವರಿಗೆ ಹೇಳಿ, ಆರ್.ಟಿ.ಓ.ಗಳಿಗೆ ಹೇಳಿ ಇದನ್ನು ನಿಲ್ಲಿಸಬೇಕು. ನಿಮಗೆ ಬೇಕಾದರೆ ನಾನು ಪುರಾವೆಗಳನ್ನು ತಂದಿದ್ದೇನೆ. ಇವತ್ತು ಪೋಲೀಸಿನವರು, ಆರ್.ಟಿ.ಓ. ಆಫೀಸಿನವರು ಕಾಸುಗಳನ್ನು ತೆಗೆದುಕೊಳ್ಳುವಂಥಾದ್ದನ್ನೂ ಕೂಡ ಫೋಟೋಗಳನ್ನು ತೆಗೆದು ತಂದಿದ್ದೇನೆ. ಇಂಥ ಪರಿಸ್ಥಿತಿಯಾದರೆ ಇವತ್ತು ಏನಾಗುತ್ತದೆಂದರೆ ಸರ್ಕಾರಕ್ಕೆ ಬರುವಂಥ ಹಣವೂ ಪೋಲಾಗುತ್ತದ. ಇವತ್ತು ಜನಗಳಿಗೆ ನಾವೇ ಲೈಸೆನ್ಸ್ ಕೊಟ್ಟು ಸಾಯಿಸಿದ ಹಾಗೆ ಆಗುತ್ತದೆ. ಇಂಥಾದ್ದಕ್ಕೂ ಕೂಡ ಸರ್ಕಾರದವರು ಗಮನ ಹರಿಸಬೇಕು. ಕೆ.ಎಸ್.ಆರ್.ಟಿ.ಸಿ. ಬಸ್ಸುಗಳನ್ನು ಸರಿಯಾದ ಸಮಯಕ್ಕೆ ಓಡಿಸಲು ಆಗದಿದ್ದರೆ ಖಾಸಗೀಕರಣ ಮಾಡಲು ಯೋಜನೆ ಮಾಡಬೇಕು. ಹಿಂದೆ ಕೆ.ಆರ್.ಆರ್.ಟಿ.ಸಿ.ಯವರು ಸ್ಟ್ರೈಕ್ ಮಾಡಿದಾಗ ಖಾಸಗೀಕರಣ ಮಾಡಬೇಕೆಂದು ಸರ್ಕಾರ ಯೋಜನೆ ಮಾಡಿತ್ತು. ಆದರ ಆ ನಿಟ್ಟಿನಲ್ಲಿ ಪುನಃ ತಾವು ಖಾಸಗೀಕರಣದ ಪ್ರಸ್ತಾಪವನ್ನು ನಿಲ್ಲಿಸಿದ್ದೀರಿ. ಈ ಎಲ್ಲದರ ಪರಿಣಾಮದಿಂದ ಇವತ್ತಿನ ದಿವಸ ಜನ ಸಾಯುತ್ತಿದ್ದಾರೆ. ಇದಕ್ಕೆ ತಾವು ಗಮನಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಿ ನನಗೆ ಎರಡು ಮಾತುಗಳನ್ನು ಆಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕರು : ಸನ್ಮಾನ್ಯ ಸದಸ್ಯರೆ, ನಮ್ಮ ವ್ಯವಸ್ಥೆಯಲ್ಲಿ ಸಭಾಧ್ಯಕ್ಷರ ಸ್ಥಾನ ಹೇಗಿರುತ್ತದೆಂದರೆ ಸಂಪ್ರದಾಯಸ್ಥ ಹಿಂದೂ ಕುಟುಂಬದಲ್ಲಿ ಹೊಟ್ಟೆ ತುಂಬ ಮಕ್ಕಳು ಹೆತ್ತಂಥವರು ವಿಧವೆ ಆದರೆ ಹೇಗಾಗುತ್ತದೆ ಹಾಗೆ ಆಗುತ್ತದೆ. ತವರು ಮನೆಯವರು ನೋಡುತ್ತಾರೋ ಇಲ್ಲವ್ವೋ, ಅತ್ತೆ ಮನೆಯವರು ನೋಡುತ್ತಾರೋ ಇಲ್ಲವ್ವೋ, ಅವಳನ್ನಂತೂ ಸದಾ ಕಾಲ ಸಮಾಜ ಸಂಶಯ ದೃಷ್ಟಿಯಿಂದಲೇ ನೋಡುತ್ತಿರುತ್ತದೆ. ನನಗೆ 16-17 ವರ್ಷದ ಸಾರ್ವಜನಿಕ ಜೀವನದಲ್ಲಿ ಬಡವರೆಲ್ಲ ಒಂದು ಜಾತಿ ಎನ್ನತಕ್ಕಂಥ ವಿವೇಚನೆಯಿಂದ ನಾನು ಬದುಕಿ ಬೆಳೆದು ಬಂದಿರುವವನು. ಬಡವರಲ್ಲಿ ಪುನಃ ಜಾತಿಗಳನ್ನು ಹುಡುಕುವಂಥ ನೀಚ ಕೆಲಸವನ್ನು ನಾನು ಎಂದಿಗೂ ಮಾಡಲಿಲ್ಲ. ಬಡವರನ್ನು ಬಹಳ ಹೆಚ್ಚಿಗೆ ಗೌರವಿಸಿ, ಪ್ರೀತಿಸಿ ಅವರ ಮಧ್ಯೆ ಬೆಳೆದುಕೊಂಡು ಬಂದವನು. ಕೆಲವು ನಿಮಿಷಗಳ ಮೊದಲು ಪ್ರಶ್ನೋತ್ತರದಲ್ಲಿ ಕೆಲವು ಸದಸ್ಯರು ಕೇಳುತ್ತಾ ಇದ್ದರು. ಹುಚ್ಚು ನಾಯಿ ಕಡಿದರೆ ಔಷಧಿ ಸಿಗುತ್ತಿಲ್ಲ, ಎಂದು. ಅಲ್ಲಿ ಹೂ ಮಾರುವ ರಾಮಣ್ಣ, ಹಜಾಮರ ಶಾಪ್ ಇಟ್ಟುಕೊಂಡಿರತಕ್ಕ ಕೃಷ್ಣಪ್ಪ, ಸೈಕಲ್ ಶಾಪ್ ಇಟ್ಟುಕೊಂಡಿರುವ ಹಮೀನ ಎಲ್ಲರೂ ಒಂದೇ ನನಗೆ. ಅವರಲ್ಲಿ ವ್ಯತ್ಯಾಸ ಕಾಣುವುದಿಲ್ಲ. ಅವರ ಜೀವನಾಧಾರಕ್ಕೆ ಇರತಕ್ಕಂಥ ಅಂಗಡಿಯನ್ನು ಲೂಟಿ ಮಾಡಿದಾಗ ಇಂತಹ ಹುಚ್ಚರಿಗೆ ಯಾವ ಔಷಧಿ ಕೊಡಬೇಕೋ ನನಗೆ ಗೊತ್ತಿಲ್ಲ. ಯಾವ ಯಾವ ಮನೋವಿಜ್ಞಾನಿಯ ಹತ್ತಿರ ಇವರನ್ನು ಕಳುಹಿಸಬೇಕೋ ನನಗೆ ಗೊತ್ತಾಗುತ್ತಿಲ್ಲ. ಸುಮಾರು ಜನರಿಗೆ ನಾನು ಸ್ವತಃ ನಿಂತು ಯಾರಿಗೆ ಜೀವನಕ್ಕೆ ವ್ಯವಸ್ಥೆ ಮಾಡಿಸಿಕೊಟ್ಟಿದ್ದೆ, ಬ್ಯಾಂಕ್ ಮತ್ತು ಇನ್ನಿತರ ಕಡೆಗಳಿಂದ ಸಾಲ ಕೊಡಿಸಿದ್ದೆ, ಅವರನ್ನು ನಿರ್ಗತಿಕರನ್ನಾಗಿ ಮಾಡಿದ್ದಾರೆ. ಏಕೆ ಮಾಡಿದರೋ? ಯಾರು ಮಾಡಿದರೋ? ನಾನು ಅಲ್ಲಿಗೆ ಹೋಗಿಲ್ಲ. ಸನ್ಮಾನ್ಯ ನಾಗರಾಜ್ ರವರು ಹೇಳಿದಂತೆ ನಾನೂ ಭಾವೋದ್ವೇಗಕ್ಕೆ ಒಳಗಾಗ ಬಹುದು ಅಥವಾ ನನ್ನನ್ನು ನೋಡಿ ನನ್ನನ್ನು ಅನುಸರಿಸಿರತಕ್ಕಂಥ ಯಾವುದೇ ವರ್ಗದ ಜನ ಆವೇಶಕ್ಕೆ ಒಳಗಾಗಬಾರದು ಎನ್ನುವ ಕಾರಣಕ್ಕೆ ನಾನು ನನ್ನನ್ನೇ ನಿಗ್ರಹಿಸಿಕೊಂಡು ಇಲ್ಲಿಯೇ ಇದ್ದೆ. ನಾನು ಇಡೀ ಸದನ ಎಲ್ಲಾ ಸದಸ್ಯರಲ್ಲೂ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಾಯಿಗೆ ಹುಚ್ಚು ಹಿಡಿದರೆ ಔಷಧಿ ಕಂಡುಹಿಡಿದಿದ್ದಾರೆ. ಜನರಿಗೆ ಹುಚ್ಚು ಹಿಡಿಯದಂತೆ ನೋಡಿಕೊಳ್ಳತಕ್ಕಂಥ ಜವಾಬ್ದಾರಿಯನ್ನು ನೀವೆಲ್ಲರೂ ಹೊರಬೇಕು. ಇಲ್ಲದೇ ಹೋದರೆ ನಾವು ಕುಳಿತಿರತಕ್ಕಂಥ ಈ ಸದನದ ಅಸ್ತಿತ್ವಕ್ಕೆ ಮೂರು ಕಾಸಿನ ಬೆಲೆ ಇರುವುದಿಲ್ಲ. ಅದಕ್ಕಿಂತ ಹೆಚ್ಚು ನಾನು ಏನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

+ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) : ಸನ್ಮಾನ್ಯ ಅಧ್ಯಕರೆ, ಸಮಯದ ಅಭಾವದಿಂದಾಗಿ ನಾನು ನನ್ನ ಹೇಳಿಕೆಯ ಪ್ರತಿಗಳನ್ನು ಮಾಡಿಸಲಿಕ್ಕೆ ಸಾಧ್ಯವಾಗಲಿಲ್ಲ. ಅದಕ್ಕೋಸ್ಕರವಾಗಿ ನನ್ನ ಹೇಳಿಕೆಯ ಪ್ರತಿಯನ್ನು ಮಾಡಿಸಿ ಕೊಡುತ್ತೇನೆ. ಈ ಹೇಳಿಕೆಯನ್ನು ಕೊಟ್ಟ ನಂತರ ಗೌರವಾನ್ವಿತ ಸದಸ್ಯರುಗಳು ಎತ್ತಿರತಕ್ಕಂಥ ಅಂಶಗಳ ಬಗ್ಗೆ ನಾನು ವಿವರಣೆಯನ್ನು ಸಹಿತ ಕೊಡುತ್ತೇನೆ.

(ಅಧ್ಯಕರ ಪೀಠವನ್ನು ಉಪಾಧ್ಯಕರು ಅಲಂಕರಿಸಿದರು)

ತಮ್ಮ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ಸಭೆಯ ಮುಂದಿಡುತ್ತೇನೆ. ಶ್ರೀನಿವಾಸಪುರದಲ್ಲಿ 2-3-1996ರಂದು ಬೆಳಿಗ್ಗ 10-30ಗಂಟೆಗೆ ಉಪ್ಪಾರಪಳ್ಳಿಯ ಸುನಂದ ಮತ್ತು ಶ್ರೀನಿವಾಸ್‌ರವರ

ಒಂದೂವರೆ ವರ್ಷದ ಮಗು ಮನೋಹರ ಖಾಸಗೀ ಆಯುರ್ವೇದ ವೈದ್ಯರಾದ ಡಾ.ಮೌಲಾಲಿಯವರ ನ್ಯಾಷನಲ್ ಹೆಲ್ತ್ ಕೇಲ್ ಚಿಕಿತ್ಸಾಲಯದಲ್ಲಿ ಚಿಕಿತ್ಸೆಗೆ ಒಳಗಾದಾಗ 11 ಗಂಟೆಗೆ ಗ್ಲುಕೋಸ್ ಕೊಟ್ಟಾಗ 11-30 ಗಂಟೆಗೆ ಮರಣ ಹೊಂದಿದನು. ಇದರಿಂದಾಗಿ ಮಗುವಿನ ತಾಯಿ ಪೋಲೀಸ್ ಠಾಣೆಯ ಸಮೀಪವಿರುವ ಬಸ್ ನಿಲ್ದಾಣದ ಕಡೆಗೆ ಜೋರಾಗಿ ಅಳುತ್ತಾ ಹೋದಳು. ಕೆಲವು ಕಿಡಿಗೇಡಿಗಳು ಸದರಿ ವೈದ್ಯರನ್ನು ಹೊಡೆದರಲ್ಲದೆ ಅವರ ಚಿಕಿತ್ಸಾಲಯಕ್ಕ ಕಲ್ಲುಗಳನ್ನು ಎಸೆದರು ಅಂದು ಸಂತೆಯ ದಿನವಾದುದರಿಂದ ಬಸ್ ನಿಲ್ದಾಣ ಹಾಗೂ ಮಾರುಕಟ್ಟೆ ಪ್ರದೇಶದಲ್ಲಿ ಸಾಕಷ್ಟು ಜನ ನೆರೆದಿದ್ದರು. ಸೈಕಲ್ ರಿಪೇರಿ, ಕಿರಾಣಿ ಸಾಮಾನು, ತರಕಾರಿ, ಹಣ್ಣು, ಮನೆ ಸಾಮಾನು ಎಲೆಕ್ಟ್ರಿಕಲ್ ಸಾಮಾನು, ಇತ್ಯಾದಿಗಳನ್ನು ವ್ಯವಹರಿಸುವ ಸುಮಾರು 35-40 ಸಣ್ಣ ಅಂಗಡಿಗಳಿಗೆ ಒಂದು ಗುಂಪು ಹೋಗಿ ಬೆಂಕಿ ಹಚ್ಚಿತು. ಅಲ್ಲದೆ ಮೊಟ್ಟೆ ಹಣ್ಣು, ಪಾತ್ರೆಗಳನ್ನು ಮಾರುವ 15 ಅಂಗಡಿಗಳನ್ನು ಲೂಟಿ ಮಾಡಿತು. ಹಾಗೆಯೇ ಊರಿನ ಹೊರಗಿರುವ ಬೇಟಪ್ಪನವರು ಕಟ್ಟಿಗೆ ಕೊರೆಯುವ ಮಿಲ್ ಕೂಡ ಅಗ್ನಿಗೆ ಆಹುತಿಯಾಯಿತು. ಇದಕ್ಕೆ ಪ್ರತಿಯಾಗಿ ಕೆಲವು ಕಿಡಿಗೇಡಿಗಳು ಐದು ಜನರನ್ನು ಚಾಕುವಿನಿಂದ ಇರಿದರು. ಅವರಲ್ಲಿ ಮುವ್ವರು ಶ್ರೀನಿವಾಸ ತಂದೆ ಕದಿರಪ್ಪ 25 ವರ್ಷ ದೇವರಹಳ್ಳಿ, ನಾರಾಯಣಸ್ವಾಮಿ, ತಂದೆ ಈರಪ್ಪ, 30 ವರ್ಷ, ಕಂಬಲಪಲ್ಲಿ, ಗೋವಿಂದಪ್ಪ ತಂದೆ ಮುನಿವೆಂಕಟಪ್ಪ ೨೫ವರ್ಷ ವೈಜಕೂರು ಇವರಲ್ಲಿ ಶ್ರೀನಿವಾಸ ಮತ್ತು ಇನ್ನಿಬ್ಬರು ಪ್ರಜ್ಞೆತಪ್ಪಿದಾಗ ಇವರನ್ನು ಕೋಲಾರ ಎಸ್.ಎನ್.ಎಸ್.ಆಸ್ಪತ್ರೆಗೆ ನಂತರ ಬೆಂಗಳೂರಿನ ನಿಮ್ಹಾನ್ಸ ಆಸ್ಪತ್ರೆಗೆ ದಾಖಲು ಮಾಡಲಾಯಿತು. ದಾಖಲು ಮಾಡಲಾಯಿತು. ಇಬ್ಬರು ನಿಮ್ಹಾನ್ಸ ಆಸ್ಪತ್ರೆಯಲ್ಲಿ ಮರಣ ಹೊಂದಿದರು. ಶ್ರೀನಿವಾಸ್ ರವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಮರಣ ಹೊಂದಿದ ಇಬ್ಬರ ಗುರುತನ್ನು ಇನ್ನೂ ಪತ್ತೆ ಹಚ್ಚ ಬೇಕಾಗಿದೆ. ಪೋಲೀಸರು ಈ ಘಟನೆಯನ್ನು ನಿಯಂತ್ರಣಕ್ಕೆ ತರುವುದಕ್ಕೆ ಎರಡು ಅಶ್ರುವಾಯು ಸೆಲ್ ಸಿಡಿಸಿದರಲ್ಲದೆ ಲಾಠಿ ಪ್ರಯೋಗವನ್ನೂ ಸಹ ಮಾಡಿದರು. ಶ್ರೀನಿವಾಸಪುರದ ಸಬ್ ಇನ್ ಸ್ಪೆಕ್ಟರ್ ರವರು ಗಾಳಿಯಲ್ಲಿ 6 ಸುತ್ತು ಗುಂಡು ಹಾರಿಸಿದರು. ಕೋಲಾ[illegible]ಸ್.ಪಿ.ಕೇಂದ್ರ ವಲಯದ ಡಿ.ಐ.ಜಿ. ಸ್ಥಳಕ್ಕೆ ಧಾವಿಸಿದರು. ಹಾಗೆಯೇ ಕೆ.ಎಸ್.ಆರ್.ಪಿ.ಯ ಮೂ[illegible] ಪ್ಲಟೂನ್‌ಗಳನ್ನು ಶ್ರೀನಿವಾಸಪುರಕ್ಕೆ ಕಳುಹಿಸಲಾಯಿತು. ಇನ್ನೊಂದು ಪ್ಲಟೂನ್‌ನೊಡನೆ ಕೆ.ಎಸ್.ಆರ್.ಪಿ.ಯ ಐ.ಜಿ.ಪಿ.ಯವರು ಶ್ರೀನಿವಾಸ ಪುರಕ್ಕೆ ಆ ದಿನವೇ ತೆರಳಿದರು. ಭಾರತದ ದಂಡ ಪ್ರಕ್ರಿಯಾ ಸಂಹಿತೆಯ 144ನೇ ಕಲಮಿನ ಪ್ರಕಾರ ಮಾರ್ಚ 7ನೇ ತಾರೀಖಿನ ಮಧ್ಯ ರಾತ್ರಿಯವರೆಗೆ ಪ್ರತಿಬಂಧಕಾಜ್ಞೆಯನ್ನು ಜಾರಿಗೊಳಿಸಲಾಗಿದೆ. ಅದೇ ದಿನ ಸಾಯಂಕಾಲ 6 ಗಂಟೆಯಿಂದ 4ನೇ ಮಾರ್ಚ ಬೆಳಗಿನ 6 ಗಂಟೆಯುವರೆವಿಗೂ ಕರ್ಫ್ಯೂವನ್ನು ವಿಧಿಸಲಾಯಿತು. ಈ ಪ್ರಕರಣದಲ್ಲಿ ಸಣ್ಣಪ್ಪ ರೆಡ್ಡಿ ಮತ್ತು ಜಯರಾಮ ರೆಡ್ಡಿ ಹಾಗೂ ಮುನಿರಾಜ ಇವರನ್ನು ಒಳಗೊಂಡಂತೆ 102 ಜನರನ್ನು ಬಂಧಿಸಲಾಗಿದೆ. ಬಂಧಿತರದಲ್ಲಿ 10 ಜನರನ್ನು 11-3-1996ರವರೆಗ ನ್ಯಾಯಾಂಗ ವಶಕ್ಕೆ, 72 ಜನರನ್ನು 16-3-1996 ರವರೆಗೆ ನ್ಯಾಯಾಂಗ ವಶಕ್ಕೆ ಕೊಡಲಾಗಿದ್ದು 20 ಜನರನ್ನು 4-3-1996ರಂದು ನ್ಯಾಯಾಲಯದ ಮುಂದೆ ಹಾಜರುಪಡಿಸಲಿದ್ದಾರೆ. ಪೋಲೀಸರು ತಾವಾಗಿ 3 ಕೇಸುಗಳನ್ನು ಹಾಗೂ ನಾಗರೀಕರ ದೂರುಗಳ ಮೇರೆಗ 8 ಕೇಸುಗಳನ್ನು ದಾಖಲ ಮಾಡಿಕೊಂಡಿದ್ದಾರೆ. ಡಾ. ಮೌಲಾಲಿಯನ್ನು 2-3-

1996ರಂದೇ ಸುನಂದಮ್ಮನವರ ದೂರಿನ ಮೇರೆಗೆ ಮೊಕದ್ದಮೆ 44:96ಕಲಮು 304(ಎ) ಭಾರತದ ದಂಡ ಸಂಹಿತೆಯ ಪ್ರಕಾರ ಬಂಧಿಸಿ 11-3-1996ರವರೆಗೆ ನ್ಯಾಯಾಂಗ ವಶಕ್ಕೆ ಕೊಡಲಾಗಿದೆ. ಇದರಿಂದ ಜನರಿಗೆ ಆಗಿರುವ ಆಸ್ತಿಯ ನಷ್ಟದ ಅಂದಾಜು ಮಾಡಲಾಗುತ್ತಿದೆ. ಮರಣ ಹೊಂದಿದ ಮಗುವಿನ ಶವ ಪರೀಕ್ಷೆ ಮಾಡಿ ಸಂಸ್ಕಾರಕ್ಕೆ ಗ್ರಾಮಕ್ಕೆ ಕಳುಹಿಸಿಕೊಡಲಾಗಿದೆ. ಘಟನೆ ನಡೆದ ಸಂಜೆ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಬೈರೇಗೌಡರು ಸ್ಥಳಕ್ಕೆ ಭೇಟಿ ನೀಡಿ ಅಧಿಕಾರಿಗಳೊಡನೆ ಸಮಾಲೋಚನೆ ನಡೆಸಿದಲ್ಲದೆ ಸ್ಥಳೀಯ ಜನರ ನೋವಿನ ಅಹವಾಲುಗಳನ್ನು ಕೇಳಿದ್ದಾರೆ. ದಿನಾಂಕ 3-3-1996ರಂದು ಅಂದರೆ ನಿನ್ನೆಯ ದಿವಸ ನಾನು, ಪೋಲೀಸ್ ಮಹಾನಿರ್ದೇಶಕರು ಹಾಗೂ ಅಡಿಷನಲ್ ಡಿ.ಜಿ.ಪಿ. ಕಾನೂನು ಮತ್ತು ಸುವ್ಯವಸ್ಥೆ ಇವರ ಜೊತೆಯಲ್ಲಿ ಬೆಳಿಗ್ಗೆ ಶ್ರೀನಿವಾಸಪುರಕ್ಕೆ ಭೇಟಿ ನೀಡಿ ಕೋಲಾರದ ಜಿಲ್ಲಾಧಿಕಾರಿಗಳು, ಎಸ್.ಪಿ.ಯವರು ಕೇಂದ್ರವಲಯದ ಡಿ.ಐ.ಜಿ.ಯವರು ಕೆ.ಎಸ್.ಆರ್.ಪಿ.ಯ ಐ.ಜಿ.ಪಿ.ಯವರ ಜೊತೆಗೆ ಗಲಭೆಗ್ರಸ್ತ ಪ್ರದೇಶಗಳನ್ನು ಸಂದರ್ಶಿಸಿದ್ದೇನೆ. ಮತ್ತು ತಾಲ್ಲೂಕು ಕಚೇರಿಯಲ್ಲಿ ನಗರದ ಕೆಲವು ಮುಖಂಡರೊಡನೆ ಚರ್ಚಿಸಿ ಅವರ ಅನಿಸಿಕೆಗಳನ್ನೂ ಸಹ ಕೇಳಿದ್ದೇವೆ. ಹಾಗೆಯೇ ಈಗಾಗಲೇ ಕೈಗೊಂಡಿರುವ ಕ್ರಮಗಳ ಬಗ್ಗೆ ಅಧಿಕಾರಿಗಳೊಡನೆ ಚರ್ಚಿಸಿ ಸುತ್ತಲಿನ ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಿಕೊಳ್ಳುವ ಬಗ್ಗೆ ಸೂಕ್ತ ಆದೇಶಗಳನ್ನು ಅಧಿಕಾರಿಗಳು ನೀಡಿದ್ದಾರೆ. 2-3-1996ರ ನಂತರ ಶ್ರೀನಿವಾಸಪುರದಲ್ಲಿ ಯಾವುದೇ ಅಹಿತಕರ ಘಟನೆ ನಡೆದಿಲ್ಲ. ಮೇಲ್ನೋಟಕ್ಕೆ ಕೋಮು ಗಲಭೆಯೆಂದು ಕಂಡು ಬಂದರೂ ವಾಸ್ತವವಾಗಿ ಈ ಗಲಭೆಗೆ ಶ್ರೀನಿವಾಸಪುರದ ಒಂದು ಗುಂಪಿನ ಗೂಂಡಾ ಪ್ರವೃತ್ತಿಯನ್ನು ಹೊಂದಿರುವ ಕೆಲವು ವ್ಯಕ್ತಿಗಳ ಪ್ರಚೋದನೆ ಇರಬಹುದೆಂದು ಪೋಲೀಸರ ಅನುಮಾನವಿದೆ. ಇದು ಜಿಲ್ಲೆಯಲ್ಲಿ ಬೇರೆ ಕಡೆ ಹಬ್ಬದೇ ಇರುವ ಹಾಗ ನಾವು ಮುಂಜಾಗರೂಕತಾ ಕ್ರಮವನ್ನು ನಾವು ತೆಗೆದು ಕೊಂಡಿದ್ದೇವೆ. ಇವತ್ತು ಬೆಳಿಗ್ಗೆ ಕರ್ಫ್ಯೂವನ್ನು ರಿಲ್ಯಾಕ್ಸ ಮಾಡಿದ್ದೇವೆ.

11.00 ಎ.ಎಂ.

ದಿನಾಂಕ 2.3.1996ರ ಶನಿವಾರ ಮಧ್ಯಾಹ್ನ ಎರಡುವರೆ ಗಂಟೆಯ ನಂತರ ಯಾವುದೇ ಅಹಿತಕರವಾದಂತಹ ಘಟನೆಗಳು ನಡೆದಿಲ್ಲ. ಈ ಘಟನಾವಳಿಗಳಿಗೆ ಕಾರಣಕರ್ತರು ಯಾರು ಎನ್ನುವುದನ್ನು ಸ್ಥಳೀಯ ಪೋಲೀಸರು ಅಲ್ಲ ಹೊರಗಡೆಯಿಂದ ಹೋಗಿರತಕ್ಕಂತಹ ಉನ್ನತ ಮಟ್ಟದ ಅಧಿಕಾರಿಗಳು ತನಿಖೆಯನ್ನು ಮಾಡಿದ್ದಾರೆ. ಇದರಲ್ಲಿ ಕೆಲವರನ್ನು ಈಗಾಗಲೇ ಬಂಧಿಸಿದ್ದಾರೆ. ಮಾನ್ಯ ಶ್ರೀನಿವಾಸಗೌಡರು ಹೇಳಿದ ಹಾಗೆ ಬಂಧಿಸಿಲ್ಲ ಎನ್ನತಕ್ಕಂತಹ ಪ್ರಶ್ನೆ ಇಲ್ಲ. ಕೆಲವರನ್ನು ಬಂಧಿಸಿದ್ದೇವೆ. ಬಂಧಿಸಿರುವವರಲ್ಲಿ ಅವರು ಎಷ್ಟೇ ದೊಡ್ಡವರು ಆಗಿರಲಿ, ಇದರಲ್ಲಿ ರಾಜಕೀಯವನ್ನು ಬೆರಸತಕ್ಕಂತಹ ಪ್ರಶ್ನೆಯೇ ಬರುವುದಿಲ್ಲ. ಈ ಸದನದ ಎರಡು ಕಡೆಯ ಗೌರವಾನ್ವಿತ ಸದಸ್ಯರುಗಳಿಗೆ ಅತ್ಯಂತ ಪ್ರಾಮಾಣಿಕವಾದಂತಹ ವಚನವನ್ನು ಕೊಡುವುದು ಏನೆಂದರೆ ರಾಜಕೀಯ ಉದ್ದೇಶವನ್ನು ಇಟ್ಟುಕೊಂಡು ಅಥವಾ ಮುಂದೆ ಬರುವ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಇದರಿಂದ ರಾಜಕೀಯ ಲಾಭವನ್ನು ಪಡೆಯಬೇಕು, ಬೇರೆಯವರ ಮೇಲೆ ಗೂಬೆಯನ್ನು ಕೂರಿಸಬೇಕು ಎಂಬ

ಉದ್ದೇಶ ಸರ್ಕಾರಕ್ಕೆ ಇಲ್ಲ ಎನ್ನತಕ್ಕಂಥದ್ದನ್ನು ಅತ್ಯಂತ ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇದೇ ಸಂದರ್ಭದಲ್ಲಿ ಅವರುಗಳು ಯಾವುದೇ ಪಕ್ಷದವರು ಇರಲಿ ಅವರು ತಪ್ಪುಗಳನ್ನು ಮಾಡಿದ್ದರ ಉನ್ನತ ಅಧಿಕಾರಿಗಳು, ನಿಷ್ಪಕ್ಷಪಾತವಾದಂತಹ ತನಿಖೆಯನ್ನು ಮಾಡುತ್ತಿದ್ದಾರೆ. ಯಾರು ತಪ್ಪಿತಸ್ಥರು ಇರುತ್ತಾರೆ ಅವರುಗಳ ಮೇಲೆ ನಾವು ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ನಿರಾಪರಾಧಿಗಳನ್ನು ಬಂಧಿಸಿದ್ದಾರೆ ಎನ್ನತಕ್ಕಂತಹ ಮಾತು, ಕೋಮುಗಲಭೆಗಳು ನಡೆದಂತಹ ಸಂದರ್ಭದಲ್ಲಿ ಈ ರೀತಿಯಾಗಿ ಕೇಳಿ ಬರತಕ್ಕಂತಹ ದೂರು. ಆದುದರಿಂದ ಅದರ ಬಗ್ಗೆಯೂ ಸಹಿತ ನಾನು ಪರಿಶೀಲನೆ ಮಾಡುವಂಥ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಪೋಲೀಸರು ಎಚ್ಚರಿಕೆಯನ್ನು ವಹಿಸಿದ್ದರೆ ಪರಿಸ್ಥಿತಿಯು ಈ ಮಟ್ಟಕ್ಕೆ ಹೋಗುತ್ತಿರಲಿಲ್ಲ ಎಂಬುದರಲ್ಲಿ ತಿರುಳು ಇಲ್ಲ ಎಂಬುದು ನನ್ನ ಅಭಿಪ್ರಾಯವಾಗಿದೆ. ಕಾರಣ ಏನೆಂದರೆ, ಅಲ್ಲಿಯ ಸ್ಥಳೀಯ ಡಿ.ವೈ.ಎಸ್.ಪಿ.ಯವರು ಆ ದಿನ ಕೋಲಾರ ಜಿಲ್ಲೆಯಲ್ಲಿ ಒಂದು ರಾಜಕೀಯ ಪಕ್ಷದ ಮುಖಂಡರುಗಳು ಸರ್ಕಾರದ ವಿರುದ್ಧವಾಗಿ ಒಂದು ಪ್ರತಿಭಟನೆಯನ್ನು ಶಾಂತವಾಗಿ ಏರ್ಪಾಡು ಮಾಡಿದ್ದರಿಂದಾಗಿ ಅದರ ಬಂದೋಬಸ್ತು ಮಾಡುವ ಸಲುವಾಗಿ ಡಿ.ವೈ.ಎಸ್.ಪಿ.ಯವರು ಅಲ್ಲಿಗೆ ಹೋಗಿದ್ದರು., ಸರ್ಕಲ್ ಇನ್ ಸ್ಪೆಕ್ಟರ್ ಸಹ ಅಲ್ಲಿಗೆ ಹೋಗಿದ್ದರು. ಉಳಿದಂತಹ ಪೋಲೀಸ್ ಅಧಿಕಾರಿಗಳು ಅಲ್ಲಿಯೇ ಇದ್ದರು. ಗಲಭೆಯು ನಡೆದ ಸ್ಥಳದಲ್ಲಿ ಯಾವುದೋ ಒಂದು ಹಬ್ಬ ಇದೆ ಅಥವಾ ಯಾವುದೋ ಒಂದು ಗಲಭೆಯಾಗುತ್ತದೆ ಎನ್ನತಕ್ಕಂತಹ ಮುನ್ನೆಚ್ಚರಿಕೆ ಪೋಲೀಸರಿಗೆ ಮೊದಲೇ ಗೊತ್ತಿದ್ದರೆ ಬಹುಶಃ ಡಿ.ವೈ.ಎಸ್.ಪಿ.ಯವರು ಆಗಲಿ, ಸರ್ಕಲ್ ಇನ್‌ಸ್ಪೆಕ್ಟರ್‌ರವರು ಅಲ್ಲಿಂದ ಹೋಗುತ್ತಿರಲಿಲ್ಲ. ಮರಣವನ್ನು ಹೊಂದಿರತಕ್ಕಂತಹ ಮಗುವಿನ ವಯಸ್ಸು ಸುಮಾರು ಒಂದೂವರೆ ವರ್ಷವಾಗಿದೆ. ಆ ಬೌಂಡರಿಯಲ್ಲಿರತಕ್ಕಂತಹ ವೈದ್ಯರ ತಂದೆಯು ಕೂಡ ವೈದ್ಯರು, ಮತ್ತು ಆ ಒಂದು ಏರಿಯಾದಲ್ಲಿ ಪ್ರಖ್ಯಾತಿಯಾದ ಮೆಡಿಕಲ್ ಶಾಪ್ ಅದು ಆ ಮಗುವನ್ನು ಕರೆದುಕೊಂಡು ಈಗ ಹೊಸದಾಗಿ ಆ ಡಾಕ್ಟರ್ ಶಾಪಗೆ ಹೋಗಿರತಕ್ಕದ್ದಲ್ಲ. ಆ ಮಗುವನ್ನು ತಾಯಿ ಆ ವೈದ್ಯರ ಬಳಿ ಮೂರು ನಾಲ್ಕು ಬಾರಿ ತೋರಿಸಿರುತ್ತಾರೆ. ಸ್ವತಃ ನಾನೇ ಆ ಮಗುವಿನ ತಾಯಿಯನ್ನು ಭೇಟಿ ಮಾಡಿದ್ದೇನೆ. ಅವರ ಅಳಲನ್ನು ಸಹಿತ ನಾನು ಕೇಳಿದ್ದೇನೆ. ಆ ಮಗುವಿನ ತಾಯಿ ಪೋಲೀಸ್ ಸ್ಟೇಷನ್‌ಗೆ ಹೋಗುವುದಕ್ಕೆ ಮುಂಚೆ ಆ ಬಸ್‌ಸ್ಟ್ಯಾಂಡ್‌ನಲ್ಲಿ ಇದ್ದಂತಹ ಕೆಲವು ಜನ ಆ ಮಗುವಿನ ತಾಯಿಗೆ ಪ್ರಚೋದನೆಯನ್ನು ಮಾಡಿದ್ದಾರೆಂದು ನನಗೆ ಕೆಲವರು ತಿಳಿಸಿದ್ದಾರೆ. ಅದರ ಸತ್ಯಾಸತ್ಯತೆಯನ್ನು ಸಹಿತ ತಿಳಿದುಕೊಳ್ಳುವುದಕ್ಕೆ ಪೋಲೀಸ್ ಅಧಿಕಾರಿಗಳಿಗೆ ನಾನು ಸೂಚನೆಯನ್ನು ಕೊಟ್ಟಿದ್ದೇನೆ. ಮತ್ತೆ ಪರಿಹಾರದ ವಿಚಾರದಲ್ಲಿ ಇವತ್ತೆ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ. ಜಿಲ್ಲಾಧಿಕಾರಿಗಳು ಘಟನೆ ನಡೆದ ಸ್ಥಳದಲ್ಲಿಯೇ ಇದ್ದಾರೆ, ನಾನು ಅವರಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಕಾನೂನಿನ ಪ್ರಕಾರವಾಗಿ ಏನು ಅನ್ಯಾಯವಾಗಿದೆ, ಏನು ಆಸ್ತಿಪಾಸ್ತಿ ನಷ್ಟವಾಗಿದೆ ಅದಕ್ಕೆ ಪರಿಹಾರವನ್ನು ಕೊಡುವುದಕ್ಕೆ ನಾನು ಕ್ರಮವನ್ನು ತೆಗೆದುಕೊಂಡಿದ್ದೇನೆ. ಜಿಲ್ಲಾ ಮಂತ್ರಿಗಳು ಮತ್ತು ಉನ್ನತ ಮಟ್ಟದ ಅಧಿಕಾರಿಗಳು ಈಗಾಗಲೆ ಆ ಸ್ಥಳಕ್ಕೆ ಭೇಟಿಯನ್ನು ಕೊಟ್ಟಿದ್ದಾರೆ. ನಾನು ಮತ್ತೊಮ್ಮೆ ಹೇಳುತ್ತೇನೆ. ಇದಕ್ಕೆ ರಾಜಕೀಯ ಬಣ್ಣವನ್ನು ಕೊಡುವುದಕ್ಕೆ ನಾವು ಪ್ರಯತ್ನವನ್ನು ಯಾವತ್ತು ಸಹ ನಾವು ಮಾಡಿಯೂ ಇಲ್ಲ,

ಮುಂದೆಯೂ ಸಹ ಮಾಡುವುದಿಲ್ಲ. ರಾಜಕೀಯ ಲಾಭವನ್ನು ಸಹಿತ ತೆಗೆದುಕೊಳ್ಳುವುದಕ್ಕೆ ಬಯಸುವುದಿಲ್ಲ. ರಾಜಕೀಯ ಸೇಡಿನ ಪ್ರಶ್ನೆ ಇದರ ಮೇಲೆ ಬರುವುದೇ ಇಲ್ಲ. ಇದರಲ್ಲಿ ನಾವು ಸೇಡನ್ನು ತೆಗೆದುಕೊಳ್ಳುವಂಥದ್ದು ಏನಿದೆ? ಇದೊಂದು ಬಹಳ ಚಿಕ್ಕ ಘಟನೆಯನ್ನು ದೊಡ್ಡದಾಗಿ ಮಾಡಿ ಅಲ್ಲಿರತಕ್ಕಂತಹ ಜನ ಈ ಘಟನೆಯನ್ನು ಬಹಳ ಅಮಾನವೀಯ ಕೃತ್ಯವನ್ನು ಮಾಡಿದ್ದಾರೆ. ಇದನ್ನು ಈ ಸದನ ಖಂಡಿಸಬೇಕಾಗುತ್ತದೆ. ನಾನು ತಮಗೆ ಭರವಸೆಯನ್ನು ಕೊಡುವುದು ಏನೆಂದರೆ, ಅಲ್ಲಿರತಕ್ಕಂತಹ ಉನ್ನತ ಅಧಿಕಾರಿಗಳು ಈಗಾಗಲೇ ತೀವ್ರ ಕ್ರಮವನ್ನು ತೆಗೆದುಕೊಂಡು ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲಿಕ್ಕೆ ಮಾಡುತ್ತಿದ್ದಾರೆ. ಎರಡನೆಯ ತಾರೀಖಿನ ರಾತ್ರಿಯೇ ಮಾನ್ಯ ಬೈರೇಗೌಡರು ಘಟನೆ ನಡೆದ ಸ್ಥಳಕ್ಕೆ ಹೋಗಿ ಪರಿಸ್ಥಿತಿಯನ್ನು ತಿಳಿಗೊಳಿಸುವುದಕ್ಕೆ ಬಹಳ ಸಹಾಯವನ್ನು ಮಾಡಿದ್ದಾರೆ. ನಾನು ಎರಡನೆಯ ತಾರೀಖಿನಂದು ಹೋಗಲಿಲ್ಲ, ಕಾರಣವೇನೆಂದರೆ ಗಲಭೆಯಾದಂತಹ ಸಂದರ್ಭದಲ್ಲಿ ಮುಖ್ಯಮಂತ್ರಿಗಳಾಗಲಿ, ಗೃಹ ಮಂತ್ರಿಗಳಾಗಲಿ, ಆ ಸ್ಥಳಕ್ಕೆ ಹೋದರೆ ಪೋಲೀಸ್ ಅಧಿಕಾರಿಗಳು ನನ್ನ ಸುತ್ತ ಮುತ್ತಲೇ ಇರುತ್ತಾರೆ. ಆದುದರಿಂದ ಪರಿಸ್ಥಿತಿಯು ನಿಯಂತ್ರಣಕ್ಕೆ ಬಂದ ಮೇಲೆ ನಾನು ಅಲ್ಲಿಗೆ ಭೇಟಿಯನ್ನು ಕೊಟ್ಟಿದ್ದೇನೆ. ಇದಕ್ಕೆ ಸಂಬಂಧಪಟ್ಟಂತಹ ಎಲ್ಲಾ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಪರಿಹಾರದ ವಿಚಾರವಷ್ಟೇ ಅಲ್ಲ ಆ ತಾಲ್ಲೂಕಿನಲ್ಲಿ ಆ ಜಿಲ್ಲೆಯಲ್ಲಿ ಸೂಕ್ಷ್ಮವಾದಂತಹ ಪ್ರದೇಶಗಳನ್ನು ಗುರುತು ಮಾಡಿ ಅಲ್ಲಿ ಸಮಾಜ ಬಾಹಿರ ಕೃತ್ಯಗಳನ್ನು ಮಾಡತಕ್ಕಂತಹ, ಹಿಂಸಾಚಾರಕ್ಕೆ ಪ್ರಚೋದನೆಯನ್ನು ಕೊಡತಕ್ಕಂತಹ ಜನಗಳ ಮೇಲೆ ಮುಂಜಾಗ್ರತೆಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸೂಚನೆಯನ್ನು ಸಹಿತ ಕೊಟ್ಟಿದ್ದೇನೆ. ಮತ್ತು ಗೌರವಾನ್ವಿತ ಸದಸ್ಯರಾದ ಶ್ರೀ ಶ್ರೀನಿವಾಸಗೌಡರು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಒಂದು ಅಪಘಾತದ ಬಗ್ಗೆ ಹೇಳಿದ್ದಾರೆ. ಈ ಅಪಘಾತವಾದ ಒಂದೂವರೆ ಗಂಟೆಯ ಒಳಗಡೆ ನಾನು ಸಹಿತ ಭೇಟಿಯನನ್ನು ಕೊಟ್ಟಿದ್ದೆ. ಅಪಘಾತವಾದ ಒಂದುವರೆ ಗಂಟೆಯ ಒಳಗಡೆ ಸ್ಥಳದ ಪರಿಶೀಲನೆಯನ್ನು ಸಹಿತ ಮಾಡಿದ್ದಾರೆ. ಬಹಳ ಹೃದಯ ವಿದ್ರಾವಕವಾದಂತಹ ಯಾರ ಮನಸ್ಸನ್ನು ಸಹ ನೋಯಿಸುವಂತಹ ಒಂದು ಆಕಸ್ಮಿಕ ಅಪಘಾತ ಆದಾಗಿದೆ. ಈ ಅಪಘಾತದಲ್ಲಿ ಒಂದು ಮೆಟಡೋರ್ ವ್ಯಾನ್ ಶ್ರೀನಿವಾಸಪುರದಿಂದ ಬರುತ್ತಿತ್ತು ಮತ್ತೊಂದು ಸರಕನ್ನು ತೆಗೆದುಕೊಂಡು ಹೋಗುವಂತಹ ಟೆಂಪೋ ಕೋಲಾರದಿಂದ ಹೋಗುತ್ತಿತ್ತು. ಬೆಳಗಿನ ಜಾವ ಸ್ವಲ್ಪ ಮಂಜು ಇದ್ದುದ್ದರಿಂದ ಬಹುಶಃ ಡ್ರೈವರ್‌ಗಳಿಗೆ ಸರಿಯಾಗಿ ಮುಂದೆ ಬರುತ್ತಿರುವ ವಾಹನಗಳು ಕಾಣಿಸಲಿಲ್ಲವೆಂದು ಕಾಣುತ್ತದೆ. ಹೆಡ್‌ಆನ್ ಕೊಲ್ಯೂಷನ್ ಆಗಿದೆ. ಎರಡು ವಾಹನಗಳ ಚಾಲಕರುಗಳು ಬೆಂಕಿ ಹತ್ತಿಕೊಂಡು ಸ್ಥಳದಲ್ಲಿಯೇ ಸತ್ತಿದ್ದಾರೆ. ಇತರೆ ಎಂಟು ಜನ ಪ್ರಯಾಣಿಕರು ಸಹ ಸತ್ತಿದ್ದಾರೆ. ಒಬ್ಬರು ಅಡಿಷನಲ್ ಎಸ್.ಪಿ.ಯವರಿಗೆ ಈ ಒಂದು ಅಪಘಾತಕ್ಕೆ ಕಾರಣ ಏನು ಎಂದು ವಿಚಾರಣೆಯನ್ನು ಮಾಡುವುದಕ್ಕೆ ಸೂಚನೆಯನ್ನು ಕೊಟ್ಟಿದ್ದೇವೆ. ಈ ಮೋಟಾರ್ ವಾಹನದ ಅಪಘಾತಕ್ಕೂ ಕೆ.ಎಸ್.ಆರ್.ಟಿ.ಯನ್ನು ಪ್ರೈವೇಟೈಸೇಷನ್ ಮಾಡುವುದಕ್ಕೆ ಉತ್ತರವಾಗುವುದಿಲ್ಲ. ಅಪಘಾತಗಳನ್ನು ತಡೆಗಟ್ಟಲು ಪೋಲೀಸ್ ನವರು, ಮೋಟಾರ್ ವಾಹನಗಳ ಇಲಾಖೆಯವರು ಕೆಲವು ಕ್ರಮಗಳನ್ನು ನಾವು ಈಗಾಗಲೇ ತೆಗೆದುಕೊಂಡಿದ್ದೇವೆ. ಮೃತರ ಕುಟುಂಬಗಳಿಗೆ ಆಗಿರತಕ್ಕಂತಹ ನಷ್ಟದ ಬಗ್ಗೆ ಸರ್ಕಾರಕ್ಕೆ ಸಹಾನುಭೂತಿ ಇದೆ. ಅದರ ಬಗ್ಗೆ ವಿಚಾರವನ್ನು ಮಾಡುತ್ತೇವೆಂದು ಹೇಳಿ ಶ್ರೀನಿವಾಸಪುರರದ ವಿಚಾರದಲ್ಲಿ ಸರ್ಕಾರಕ್ಕೂ ಸಹಿತ ಬಹಳ ನೋವಾಗಿದೆ. ಕಾರಣ ಏನು ಎಂದರೆ,

ಇಂತಹ ಘಟನೆಗಳಿಂದ ಕೆಲವರು ಅಲ್ಲಿ ಸ್ಥಳೀಯ ಮುಖಂಡರ ಪ್ರಚೋದನೆಯಿಂದ ಇದು ಆಗಿರತಕ್ಕಂತಹ ಕೆಲಸ ಎನ್ನುವುದರ ಬಗ್ಗೆ ಉನ್ನತ ಮಟ್ಟದ ಅಧಿಕಾರಿಗಳು ಅನುಮಾನವನ್ನು ವ್ಯಕ್ತಮಾಡಿದ್ದಾರೆ. ಅದರ ಬಗ್ಗೆಯೂ ಸಹಿತ ಸರ್ಕಾರ ತೀವ್ರವಾಗಿ ಪರಿಶೀಲನೆಯನ್ನು ಮಾಡಿ ತಪ್ಪಿತಸ್ಥರು ಎಷ್ಟೇ ದೊಡ್ಡವರು ಆಗಿರಲಿ, ಯಾರೇ ಆಗಿರಲಿ ಅದರ ಪ್ರಶ್ನೆ ಬರುವುದಿಲ್ಲ, ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇಂತಹ ಘಟನೆಗಳು ಮರುಕಳುಹಿಸದಂತೆ ಎಲ್ಲಾ ಗೌರವಾನ್ವಿತ ಸದಸ್ಯರುಗಳು ಸರ್ಕಾರಕ್ಕೆ ನಮಗೆ ಸಹಾಯವನ್ನು ಮಾಡಬೇಕು, ಶಾಂತಿಯನ್ನು ಕಾಪಾಡುವುದಕ್ಕೆ ಸಹಕರಿಸಬೇಕು ಎಂದು ಎಲ್ಲಾ ಮಾನ್ಯ ಸದಸ್ಯರುಗಳಿಗೂ ಮನವಿಯನ್ನು ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಾಮುಖ್ಯವಾದಂತಹ ವಿಷಯ ಏನೆಂದರೆ ಮರಣವನ್ನು ಹೊಂದಿರತಕ್ಕಂತಹ ಇಬ್ಬರು ವ್ಯಕ್ತಿಗಳು ಯಾರಿದ್ದಾರೆ ಅವರ ಗುರುತು ಇನ್ನೂ ಸಿಕ್ಕಿಲ್ಲವೆಂದು ಮಾನ್ಯ ಗೃಹ ಸಚಿವರು ಹೇಳಿದ್ದಾರೆ. ಬಹುಶಃ ನನಗನ್ನಿಸುತ್ತದೆ, ಎರಡು ದಿವಸಗಳು ಕಳೆದರೂ ಮರಣವನ್ನು ಹೊಂದಿರುವಂತಹ ವ್ಯಕ್ತಿಯ ಹೆಸರು ಸಿಕ್ಕಿಲ್ಲ ಎಂದರೆ ಎಷ್ಟರಮಟ್ಟಿಗೆ ಈ ತನಿಖೆ ನಡೆಯಬಹುದು ಎಂದು ಪ್ರಾರಂಭದಲ್ಲಿ ಸಂಶಯ ಪ್ರಾರಂಭವಾಗಬಹುದು. ಯಾವುದೋ ಒಂದು ವಿಶೇಷವಾದಂತಹ ಕಾರಣಕೋಸ್ಕರವಾಗಿ ಆ ಸತ್ತಂತಹ ವ್ಯಕ್ತಿ ಯಾರು ಎಂದು ಗೊತ್ತಿದ್ದರೂ ಸಹ ಇಲ್ಲಿ ನಾನು ಬಹಿರಂಗ ಮಾಡುತ್ತಿಲ್ಲ ಎಂದು ಮಾನ್ಯ ಗೃಹ ಸಚಿವರು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಸತ್ತಂತ ವ್ಯಕ್ತಿ ಯಾರು ಎಂದು ಗೊತ್ತೆ ಆಗಿಲ್ಲ ಎನ್ನುವಂಥದ್ದು ಬಹುಶಃ ಯಾರು ಆ ವಿಷಯವನ್ನು ಹೊರಗಡೆಗೆ ಬಿಡುತ್ತಿಲ್ಲ. ಪ್ರಕ್ಷುಬ್ಧ ವಾತಾವರಣ ಇದೆ, ಕರ್ಫ್ಯೂ ಇದೆ, ಯಾರು ಕೆಲವರು ಹಿರಿಯರು ಇದ್ದಾರೆ ಅವರನ್ನು ಕರೆಯಿಸಿ ಆ ಹೆಣ ಯಾರದು ಎಂದು ಗುರುತಿಸಿ ಅವರ ವಶಕ್ಕೆ ಕೊಡುವುಂತದ್ದು ಸರ್ಕಾರದ ಕರ್ತವ್ಯ ಇದೆ. ಎರಡು ಮೂರು ದಿವಸಗಳು ಕಳೆದರೂ ಸಹಿತ ಮರಣ ಹೊಂದಿದ ವ್ಯಕ್ತಿ ಯಾರು ಎಂದು ಗೊತ್ತಿಲ್ಲದೇ ಇರುವುದು ನಿಮ್ಮ ಅಧಿಕಾರಿಗಳು ಯಾವ ರೀತಿಯಲ್ಲಿ ನಡವಳಿಕೆಯನ್ನು ನಡೆಸಿದ್ದಾರೆ ಮುಂದೆ ಯಾವ ದಿಕ್ಕಿನಲ್ಲಿ ತನಿಖೆ ಹೋಗಬಹುದು ಎಂಬುದಕ್ಕೆ ಇದು ಒಂದು ಕಾರಣವಾಗಬಹುದು. ನನಗೆ ಸರಿಯಾಗಿ ಮಾಹಿತಿ ಗೊತ್ತಿಲ್ಲ, ಆದರೆ ನನಗೆ ಸಿಕ್ಕಿರುವ ಮಾಹಿತಿಯ ಪ್ರಕಾರ ಈ ಗಲಭೆಯ ಸಂದರ್ಭದಲ್ಲಿ ಯಾರು ಇಬ್ಬರು ಆ ಒಂದು ದುಷ್ಕೃತ್ಯಕ್ಕೆ ಬಲಿಯಾಗಿ ಮರಣವನ್ನು ಹೊಂದಿರುತ್ತಾರೆಯೋ ನಂತರ ಇದು ಒಂದು ಪ್ರಕ್ಷುಬ್ಧ ವಾತಾವರಣವಾಗುವುದಕ್ಕೆ ಕಾರಣವಾಯಿತು ಎನ್ನುವ ಸಂಗತಿ ನನ್ನ ಗಮನಕ್ಕೆ ಬಂದಿರುವುದು ಮೊದಲನೆಯದು. ಎರಡನೆಯದಾಗಿ ಯಾವ ಭಾರತೀಯ ಜನತಾ ಪಾರ್ಟಿಯ ಮುಖಂಡರನ್ನು ಬಂಧಿಸಿರುತ್ತಿರೋ ಈ ಬಗ್ಗೆ ಮಾನ್ಯ ಗೃಹ ಸಚಿವರನ್ನು ಕೇಳುವುದು ಏನೆಂದರೆ ಈ ಒಂದು ಲೂಟಿ, ದೊಂಬಿಯಾಗುವಂತಹ ಕಾಲದಲ್ಲಿ ಅವರು ಪ್ರತ್ಯಕ್ಷವಾಗಿ ಆ ಸ್ಥಳದಲ್ಲಿದ್ದರೆ, ತಾವು ಯಾವುದೋ ಒಂದು ಸಂದರ್ಭದಲ್ಲಿ ಯಾರು ಏನೇ ಮಾಡಿದರೂ ಇದಕ್ಕೆ ಚಿತಾವಣೆಯನ್ನು ಕೊಡುವಂತಹ ವ್ಯಕ್ತಿಗಳು ಎಂದು ಹೇಳಿ ಭಾರತೀಯ ಜನತಾ ಪಾರ್ಟಿಯ ಮುಖಂಡರನ್ನು ಬಂಧನ ಮಾಡಿರುವಂತದ್ದೆ ಇದೊಂದು ರಾಜಕೀಯ ತಿರುವು ಕೊಡುವಂತಹ ಒಂದು ಪ್ರಾಮಾಣಿಕ ಪ್ರಯತ್ನ ನಿಮ್ಮ ಸರ್ಕಾರದ ಕಡೆಯಿಂದ ಆಗಿದೆ ಎಂಬುದು ಒಂದು ಸ್ಪಷ್ಟವಾದಂತಹ

ಸಂಗತಿಯಾಗಿದೆ. ಅದಕೋಸ್ಕರವಾಗಿ ನಾನು ನಾಳೆ ಬೆಳಿಗ್ಗೆ 8 ಗಂಟೆಗೆ ಆ ಸ್ಥಳಕ್ಕೆ ಹೋಗಿ ಬರುತ್ತೇನೆ. ಇವತ್ತು ವಾತಾವರಣ ತಿಳಿಯಾಗಲಿ ಎಂದು ನಾನು ಅಲ್ಲಿಗೆ ಹೋಗಿಲ್ಲ. ನಾನೂ ಸಹ ಮಾಹಿತಿಗಳನ್ನು ತಿಳಿದುಕೊಳ್ಳುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ. ಸರ್ಕಾರಕ್ಕೂ ಸಹ ನಾನು ವಿನಂತಿಯನ್ನು ಮಾಡುವುದು ಏನೆಂದರೆ, ಇನ್ನು ಹೆಚ್ಚು ಮುಂದುವರೆದು ನಾನು ಮಾತನಾಡಲಿಕ್ಕೆ ಇಚ್ಛೆಯನ್ನು ಪಡುವುದಿಲ್ಲ ಏಕೆಂದರೆ ತಾವು ಅನೇಕ ಸಂಗತಿಗಳನ್ನು ತಿಳಿಸಿಲ್ಲ. ಗಲಭೆ ಯಾವಾಗ ಆಯಿತು? ಈ ಸತ್ತಂತಹ ವ್ಯಕ್ತಿ ಯಾರು? ಯಾವ ಸಂದರ್ಭದಲ್ಲಿ ಆ ವ್ಯಕ್ತಿ ಸತ್ತ, ಯಾರು ಚೂರಿಯನ್ನು ಹಾಕಿ ಕೊಂದ, ಆ ವ್ಯಕ್ತಿ ಯಾರೂ ಇದು ಯಾವುದು ಮಾಹಿತಿಯೇ ಗೊತ್ತಿಲ್ಲ ಎನ್ನುವುದಾದರೆ ಬಹುಶಃ ನಾನು ನಿಮ್ಮನ್ನು ಯಾವ ರೀತಿಯಲ್ಲಿ ಕ್ಲಾರಿಫಿಕೇಷನ್ ಕೇಳಬೇಕು ಎಂಬುದು ಅರ್ಥವಾಗದೇ ಇರುವಂತಹ ಸಂಗತಿ. ನಾನಾದರೂ ಇಷ್ಟುಮಾತ್ರ ಒತ್ತಾಯ ಮಾಡುತ್ತೇನೆ, ಈ ತನಿಖೆಯು ನಡೆಯುತ್ತಿರುವಂಥ ರೀತಿಯನ್ನು ನೋಡಿದರೆ ವ್ಯವಸ್ಥಿತವಾಗಿ, ನಿಶ್ಚಿತವಾಗಿ ಯಾರನ್ನೋ ರಕ್ಷಣೆ ಮಾಡಿ, ಬೇರೆ ಯಾರನ್ನೋ ಒಂದುರೀತಿಯ ಕಪ್ಪು ದೃಷ್ಟಿಯಿಂದ ಆ ಜನರು ನೋಡುವಂಥ ಪರಿಸ್ಥಿತಿಗೆ ತಂದಿಟ್ಟು ಈ ಅಪಾದನೆಯನ್ನು ಯಾರೋ ಪ್ರಾಮಾಣಿಕ ವ್ಯಕ್ತಿಗಳ ಮೇಲೆ ಮಾಡುವಂಥ ಪ್ರಯತ್ನ ಸಾಗಿದೆ ಎಂಬುದು ಇವತ್ತು ಇಲ್ಲಿ ಮೇಲ್ನೋಟಕ್ಕೇ ನನಗೆ ಮನವರಿಕೆಯಾಗುತ್ತಿದೆ. ಆದ್ದರಿಂದ ನಾನು ಮಾನ್ಯ ಗೃಹಮಂತ್ರಿಗಳನ್ನು ಒತ್ತಾಯ ಮಾಡುತ್ತಿದ್ದೇನೆ. ಆ ಸತ್ತಿರತಕ್ಕಂಥ ವ್ಯಕ್ತಿಗಳು ಯಾರು, ಅವರ ಮೃತದೇಹವನ್ನು ಅವರ ಸಂಬಂಧೀಕರಿಗೆ ಅಂತ್ಯಕ್ರಿಯೆ ಮಾಡಲು ತಲುಪಿಸುವಂಥಾದ್ದು ಸರ್ಕಾರದ ಮುಖ್ಯ ಕರ್ತವ್ಯವಾಗಿದೆ. ಈ ಗಲಾಟೆಗಳಲ್ಲಿ ಇಂಥ ವ್ಯಕ್ತಿಗಳಿಗೆ ಚಾಕು ಚೂರಿಯಿಂದ ಹೊಡೆತ ಬಿದ್ದು ಸಾಯುವಂತಾದ ಮೇಲೆ ಈ ರೀತಿ ಗಲಭೆಗಳಾಯಿತೋ ಅಥವಾ ಅದಕ್ಕಿಂತ ಮುಂಚೆ ಆಯಿತೋ ಎಂಬುದನ್ನೂ ಕೂಡ ಮಾನ್ಯ ಗೃಹಮಂತ್ರಿಗಳು ಉತ್ತರವನ್ನು ಕೊಡುವ ಸಂದರ್ಭದಲ್ಲಿ ಸ್ಪಷ್ಟಪಡಿಸಲಿಲ್ಲ. ಈ ಎಲ್ಲ ಸಂಶಯಗಳೂ ಪರಿಹಾರವಾಗುವ ದೃಷ್ಟಿಯಿಂದ ಮತ್ತು ವಿನಾ ಕಾರಣ ಯಾವುದೋ ರಾಜಕೀಯ ಪಕ್ಷದ ಪ್ರಮುಖರ ಮೇಲೆ ಈ ರೀತಿಯ ಅಪಾದನೆಯನ್ನು ಮಾಡುವಂಥ ಪ್ರವೃತ್ತಿ ಏನಿದೆ ಅದು ಕೊನೆಯಾಗಬೇಕೆಂಬ ದೃಷ್ಟಿಯಿಂದ ಸತ್ಯ ಸಂಗತಿ ಈ ನಾಡಿನ ಜನತೆಗೆ ಗೊತ್ತಾಗಬೇಕೆಂಬ ದೃಷ್ಟಿಯಿಂದ, ಇದರಲ್ಲಿ ಯಾವುದೇರೀತಿಯ ಮುಚ್ಚುಮರೆ ಇಲ್ಲ, ಸತ್ಯ ಸಂಗತಿಯನ್ನು ಮುಚ್ಚುವಂಥ ಪ್ರಶ್ನೆಯೇ ಇಲ್ಲ ಎಂದು ಹೇಳಬೇಕೆಂಬುದಲ್ಲಿ ನಿಮಗೆ ಕಳಕಳಿ ಇದ್ದರೆ ದಯವಿಟ್ಟು ಇದನ್ನು ಜ್ಯುಡಿಷಿಯಲ್ ಎನ್ ಕ್ವೈರಿಗೆ ಒಪ್ಪಿಸಬೇಕು. ಎರಡನೆಯದಾಗಿ ಯಾವ ನಿರಪರಾಧಿಗಳನ್ನು ಬಂಧನ ಮಾಡಿದೆ ಅವರನ್ನೆಲ್ಲಾ ಬಿಡುಗಡೆ ಮಾಡಬೇಕು. ಮೂರನೆಯದಾಗಿ, ಸತ್ತವರ ಸಂಬಂಧೀಕರಿಗೆ ಸರಿಯಾದ ಪರಿಹಾರವನ್ನು ಕೊಡುವ ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂಬ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಗುರುಮಿಠ್‌ಕಲ್) : ಮಾನ್ಯ ಉಪಾಧ್ಯಕ್ಷರೆ, ನಾನು ಕೇವಲ ಒಂದೆರಡು ಕ್ಲಾರಿಫಿಕೇಷನ್ ಗಳನ್ನು ಮಾತ್ರ ಕೇಳಬಯಸುತ್ತೇನೆ. ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತೆ 2ನೇ ತಾರೀಖು ಈ ಘಟನೆ ಆದಮೇಲೆ ಇದುವರೆಗೂ ಆ ಮೃತದೇಹಗಳನ್ನು ಗುರುತು ಹಚ್ಚಿಲ್ಲವೆಂದು ಹೇಳುವುದಾದರೆ, ಎಷ್ಟುರಮಟ್ಟಿಗೆ ಈ ದಿಸೆಯಲ್ಲಿ ಪೋಲೀಸರು ಆಸಕ್ತಿವಹಿಸಿ

ಕೆಲಸಮಾಡುತ್ತಿದ್ದಾರೆಂಬುದು ಗೊತ್ತಾಗುತ್ತದೆ. ಏಕೆಂದರೆ, ಆ ವ್ಯಕ್ತಿಗಳು ಯಾರು, ಅವರು ಎಂಥವರು ಎಂಬುದನ್ನಾದರೂ ಕಂಡುಹಿಡಿಯಬೇಕಲ್ಲಾ. ಆ ಕೆಲಸವನ್ನು ಇವರು ಇದುವರೆಗೂ ಮಾಡಿಲ್ಲ ಎನ್ನುವುದಾದರೆ, ಇವರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಪೋಲೀಸರು ವಹಿಸುತ್ತಿಲ್ಲ ಎಂಬುದು ಇವರಿಂದ ಗೊತ್ತಾಗುತ್ತದೆ.

ಇನ್ನು ಎರಡನೆಯದಾಗಿ, 3 ಕೇಸುಗಳನ್ನು ಪೋಲೀಸರ ವತಿಯಿಂದ ರಿಜಿಸ್ಟರ್ ಮಾಡಲಾಗಿದೆ ಎಂದು ತಾವು ಹೇಳಿದಿರಿ. 8 ಕೇಸುಗಳನ್ನು ಕಂಪ್ಲೇಂಟ್ ಆಧಾರದಮೇಲೆ ರಿಜಿಸ್ಟರ್ ಮಾಡಲಾಗಿದೆ ಎಂದು ಹೇಳಿದಿರಿ. ಈಗ ಪೋಲೀಸರ ಮುಖಾಂತರ ರಿಜಿಸ್ಟರ್ ಆದಂಥ 3 ಕೇಸುಗಳಲ್ಲಿ ಎಷ್ಟು ಜನರು ಈ ಪ್ರಕರಣದಲ್ಲಿ ಇನ್‌ವಾಲ್ವ್‌ಡ್ ಆಗಿದ್ದಾರೆ. ಜನರು ಕಂಪ್ಲೇಂಟ್ ಕೊಟ್ಟಂಥ 8 ಕೇಸುಗಳನ್ನು ತಾವು ಏನು ರಿಜಿಸ್ಟರ್ ಮಾಡಿದ್ದೀರಿ ಅದರಲ್ಲಿ ಎಷ್ಟು ಜನರು ಇನ್‌ವಾಲ್ವಡ್ ಆಗಿದ್ದಾರೆಂಬುದನ್ನೂ ತಾವು ಹೇಳಬೇಕು. ಮೂರನೆಯದಾಗಿ 35 ಅಂಗಡಿಗಳನ್ನು ಸುಟ್ಟು ಹಾಕಿದ್ದಾರೆ ಮತ್ತು 18 ಅಂಗಡಿಗಳನ್ನು ಲೂಟಿ ಮಾಡಿದ್ದಾರೆಂದು ತಾವು ಹೇಳಿದ್ದೀರಿ, ಇದಕ್ಕೆ ಸಂಬಂಧಪಟ್ಟಂತೆ ತಾವು ಏನು ಪರಿಹಾರವನ್ನು ಕೊಟ್ಟಿದ್ದೀರಿ? ಅಥವಾ ಕೊಡುತ್ತೇವೆಂದು ಅನೌನ್ಸ್ ಮಾಡಿದ್ದೀರಿ? ಈ ಲೂಟಿಯಿಂದ ಎಷ್ಟು ಹಣ, ಆಸ್ತಿಗೆ ಹಾನಿ ಆಗಿದೆ ಎಂಬುದನ್ನೂ ಕೂಡ ತಾವು ತಿಳಿಸಿಲ್ಲ. ಈ ಘಟನೆ ಸಂದರ್ಭದಲ್ಲಿ 500 ಜನರು ಗಾಯಗೊಂಡಿದ್ದಾರೆ ಎಂಬುದಾಗಿ ಹೇಳಿದ್ದೀರಿ. ಇಷ್ಟು ಜನರು ಗಾಯಗೊಂಡಿರಬೇಕಾದರೆ ಈ ಘಟನೆಯಲ್ಲಿ ಸಾವಿರಾರು ಜನರು ಇನ್‌ವಾಲ್ವಡ್ ಆಗಿರಬೇಕಾಗುತ್ತದೆ. ಇದು ಒಬ್ಬಿಬ್ಬರಿಂದ ಇಷ್ಟುಮಟ್ಟಿಗೆ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ 500 ಜನರಿಗೆ ಪೆಟ್ಟಾಗಬೇಕಾದರೆ ಕನಿಷ್ಠ 8-10 ಸಾವಿರ ಜನರಾದರೂ ಗುಂಪು ಸೇರಿರಬೇಕು. ಅಷ್ಟು ಜನರಿದ್ದರೆ ಮಾತ್ರ 500 ಜನರಿಗೆ ನೀವು ಹೇಳಿದಂತೆ ಗಾಯ ಆಗುವುದಕ್ಕೆ ಸಾಧ್ಯವಿದೆ,

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಹಾಗೆ ಹೇಳಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಬರೆದುಕೊಂಡಿದ್ದೇನೆ. ಪೋಲೀಸರ ವಸತಿಯಿಂದ 3 ಕೇಸು ರಿಜಿಸ್ಟರ್ ಆಗಿದೆ, ಕಂಪ್ಲೇಂಟ್ ಆಧಾರದ ಮೇಲೆ 8 ಕೇಸುಗಳು 35 ಅಂಗಡಿಗಳು ಬೆಂಕಿ ಅನಾಹುತಕ್ಕೆ ಸಿಕ್ಕಿ ನಾಶವಾಗಿವೆ, 18 ಅಂಗಡಿಗಳು ಲೂಟಿ ಆಗಿವೆ, ಸುಮಾರು 500 ಜನರವರೆಗೆ ಗಾಯಗೊಂಡಿದ್ದಾರೆ ಎಂದು ತಾವು ಹೇಳಿದಿರಿ. ಒಂದು ವೇಳೆ ಅವರು ಇದನ್ನು ನಾನು ಹೇಳಲಿಲ್ಲ ಎನ್ನುವುದಾದರೆ ಪರವಾಗಿಲ್ಲ, ಏಕೆಂದರೆ ನೀವು ಏನು ಹೇಳಿದಿರಿ, ಅದನ್ನು ನಾನು ಬರೆದುಕೊಂಡಿದ್ದೇನೆ. ನಾನು ಕೇಳಿದಂಥ ಈ ವಿಚಾರಗಳಿಗೆ ಸ್ಪಷ್ಟವಾಗಿ ತಿಳಿಸಬೇಕು. ಈಗ ಇದಕ್ಕೆ ಸ್ವಲ್ಪಮಟ್ಟಿಗೆ ರಾಜಕೀಯ ಬಣ್ಣ ಬರುತ್ತಿದೆ . ಏಕೆಂದರೆ ಮಾನ್ಯ ಶ್ರೀನಿವಾಸ ರೆಡ್ಡಿಯವರು ಹೇಳಿದಮೇಲೆ, ಪಾರ್ಟಿ, ಪಂಗಡ ಎಂದು ಬರುತ್ತದೆ. ಆದರೆ ಇವರಲ್ಲಿ ಪಾರ್ಟಿ, ಪಂಗಡ ಎಂಬ ಪ್ರಶ್ನೆಯೇ ಇಲ್ಲ, ನಾನು ನಿಷ್ಪಕ್ಷಪಾತವಾದ ಎನ್‌ಕ್ವೈರಿಯನ್ನು ಮಾಡಿಸುತ್ತೇನೆ, ಇದರಲ್ಲಿ ಯಾವುದೇ ಪಾರ್ಟಿ ಪಕ್ಷದ ಪ್ರಶ್ನೆ ಬರುವುದಿಲ್ಲ, ಅಲ್ಲಿ ಏನಾಗಿದೆ ಆ ಘಟನೆಗೆ ಸೀಮಿತವಾಗಿ ನಾನು ಎನ್‌ಕ್ವೈರಿ ಮಾಡಿಸುತ್ತೇನೆಂದು ಮಾನ್ಯ ಸಿಂಧ್ಯಾರವರು ಹೇಳಿದ್ದಾರೆ. ಆದರೆ ಇಲ್ಲಿ ಮತ್ತೆ ಪಾರ್ಟಿ ಪಂಗಡ ಎಂಬ ವಿಚಾರ ಬಂದರೆ ನಿಷ್ಪಕ್ಷಪಾತವಾದ

ಎನ್‌ಕ್ವೈರಿ ಆಗುತ್ತದೆಂದು ನನಗನಿಸುವುದಿಲ್ಲ. ನಿಷ್ಪಕ್ಷಪಾತವಾದ ಎನ್‌ಕ್ವೈರಿ ಆಗಬೇಕೆಂದು ಹೇಳುವುದಾದರೆ ನಾವು ಜ್ಯುಡಿಷಿಯಲ್ ಎನ್‌ಕ್ವೈರಿ ಆಗಬೇಕೆಂದು ಒತ್ತಾಯ ಮಾಡಲೇಬೇಕಾಗಿದೆ. ಪಾರ್ಟಿ ಪಂಗಡ ಎಂಬ ವಿಚಾರ ತಮ್ಮ ಮನಸ್ಸಿನಲ್ಲಿದ್ದಾಗ ಅಥವಾ ಈ ವಿಚಾರದಲ್ಲಿ ನೀವು ಯೋಜನೆಯನ್ನು ಮಾಡುವುದಾದರೆ, ನಾವೂ ಕೂಡ ಇದರ ಬಗ್ಗೆ ಯೋಜನೆ ಮಾಡುವುದಾದರ ಈ ವಿಚಾರಗಳೆ ಎಂಬುದು ಕೇವಲ ಒಂದು ಪಾರ್ಟಿ ಪಕ್ಷದ ದೃಷ್ಟಿಕೋನದಿಂದಲೇ ಹೋಗಬಹುದೇ ಹೊರತು ಅದನ್ನು ಬಿಟ್ಟು ಬೇರೆ ರೀತಿಯಲ್ಲಿ ಹೋಗುವುದಕ್ಕೆ ಸಾಧ್ಯವಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದ್ದರಿಂದ ಇದರಲ್ಲಿ ನಿಷ್ಪಕ್ಷಪಾತವಾಗಿ, ಎನ್‌ಕ್ವೈರಿ ಆಗಬೇಕಾದರೆ ಜ್ಯುಡಿಷಿಯಲ್ ಪ್ರೋಬ್ ನ್ನು ಮಾಡಬೇಕು . ಏಕೆಂದರೆ, ಅಲ್ಲಿ ಇಬ್ಬರು ಸತ್ತಿದ್ದಾರೆ, 35 ಅಂಗಡಿಗಳು ಬೆಂಕಿಯಿಂದ ನಾಶವಾಗಿದೆ, 18 ಅಂಗಡಿಗಳ ಲೂಟಿಯಾಗಿದೆ, ನೂರಾರು ಜನರು ಈ ಕೇಸಿನಲ್ಲಿ ಇನ್‌ವಾಲ್ವಡ್ ಆಗಿದ್ದಾರೆ. ಆದ್ದರಿಂದ ಇದರ ಎನ್‌ಕ್ವೈರಿಗೆ ಒಂದು ಜ್ಯುಡಿಷಿಯಲ್ ಪ್ರೋಬ್‌ನ್ನು ಮಾಡಿದರೆ ಎಲ್ಲ ಸತ್ಯ ಸಂಗತಿಗಳೂ ಹೊರಗೆ ಬರುತ್ತವೆ. ಯಾರು ತಪ್ಪಿತಸ್ಥರಿದ್ದಾರೆ ಅವರಿಗೆ ಮುಂದೆ ಶಿಕ್ಷೆಯಾಗುತ್ತದೆ. ಮತ್ತು ನೀವೂ ಕೂಡ ನಿಷ್ಪಕ್ಷಪಾತವಾದ ರೀತಿಯಲ್ಲಿ ಎನ್‌ಕ್ವೈರಿ ಮಾಡಿಸಿದಂತಾಗುತ್ತದೆ. ಆದ್ದರಿಂದ ದಯವಿಟ್ಟು ಜ್ಯುಡಿಷಿಯಲ್ ಪ್ರೋಬ್‌ಗೆ ಒಪ್ಪಿಕೊಳ್ಳಿ. ಮತ್ತು ಉಳಿದ ಘಟನೆಗಳು ಏನಿವೆ ಅದಕ್ಕೆ ಸಂಬಂಧಪಟ್ಟಂತೆ ತಾವು ಸ್ಪಷ್ಟೀಕರಣವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜ ನಗರ) : ಮಾನ್ಯ ಉಪಾಧ್ಯಕ್ಷರೆ, ನಾವೆಲ್ಲರೂ ಪ್ರಸ್ತಾಪ ಮಾಡುತ್ತಿರುವಂಥ ಒಂದು ಪ್ರಮುಖ ಪ್ರಶ್ನೆ ಎಂದರೆ, ಸತ್ತಿರುವ ಇಬ್ಬರು ವ್ಯಕ್ತಿಗಳ ಗುರುತು ಸಿಕ್ಕಿಲ್ಲವೆಂದು ತಾವು ಏನು ಹೇಳುತ್ತಿದ್ದೀರಿ, ಆ ಶವಗಳು ಎಲ್ಲಿವೆ? ಅವು ಎಲ್ಲಾದರೂ ಒಂದು ಜಾಗದಲ್ಲಿ ಇರಲೇಬೇಕಲ್ಲವೆ? ಗುರುತು ಸಿಕ್ಕದ ಶವಗಳನ್ನು ಎಲ್ಲಿಟ್ಟಿದ್ದಾರೆ? ಅವುಗಳನ್ನು ಗುರ್ತಿಸುವುದಕ್ಕೆ ಇಂಥ ಕಡೆ ಶವಗಳನ್ನು ಇಟ್ಟಿದ್ದೇವೆ ಎಂದು ಸಾರ್ವಜನಿಕರಿಗೆ ತಿಳಿಸುವುದಕ್ಕೆ ಏನು ಕ್ರಮ ತೆಗೆದು ಕೊಂಡಿದ್ದೀರಿ? ಇದುವರೆಗೂ ಯಾರೂ ಬಂದು ಆ ಶವಗಳನ್ನು ಗುರ್ತಿಸಿಲ್ಲ ಎಂದು ಹೇಳತಕ್ಕದ್ದು ಎಷ್ಟು ಸಮಂಜಸ ಮತ್ತು ಈ ದಿಸೆಯಲ್ಲಿ ಎಷ್ಟು ನಿಷ್ಕ್ರಿಯತೆ ನಡೆದಿದೆ ಎಂಬುದು ಗೊತ್ತಾಗುತ್ತದೆ. ಏಕೆಂದರೆ ಸತ್ತಿರತಕ್ಕ ಆ ಇಬ್ಬರು ವ್ಯಕ್ತಿಗಳೂ ಬೇರೆ ರಾಜ್ಯದಿಂದ ಅಥವಾ ಬೇರೆ ದೇಶದಿಂದ ಅಥವಾ ಬೇರೆ ಜಿಲ್ಲೆಯಿಂದ ಬಂದಿರುವವರೇನೂ ಅಲ್ಲ. ಅಲ್ಲೇ ನಡೆದ ಗದ್ದಲ, ಗಲಾಟೆಯಿಂದಾಗಿ ಸತ್ತಿರುವಂಥ ವ್ಯಕ್ತಿಗಳ ಶವವನ್ನು ಗುರ್ತಿಸುವುದಕ್ಕೆ ಆಗಿಲ್ಲ ಎಂದರೆ ಹೇಗೆ? ಏಕೆಂದರೆ ಶ್ರೀನಿವಾಸಪುರ ಎಂಬುದು ಒಂದು ಸಣ್ಣ ತಾಲ್ಲೂಕು.

ಶ್ರೀ ಕೆ. ಶ್ರೀನಿವಾಸಗೌಡ : ಮದನಪಲ್ಲಿ ಅಲ್ಲಿಗೆ ಕೇವಲ 40-50 ಕಿ.ಮೀ.ಇದೆ. ಅಲ್ಲಿಂದಲೂ ಈ ಸಂತೆಗೆ ಜನರು ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಇರಬಹುದು. ಅದನ್ನು ಬೇಕಾದರೆ ಹೇಳಲಿ, ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ನಾನಾದರೂ ಹೇಳುವುದೇನೆಂದರೆ, ಆ ಇಬ್ಬರು ವ್ಯಕ್ತಿಗಳ ಗುರುತು ಸಿಕ್ಕಿಲ್ಲ ಎನ್ನುವುದು ಒಂದು ಎರಡನೆಯದಾಗಿ ಇಷ್ಟೊಂದು ಲೂಟಿ, ಗಲಾಟೆ, ನಡೆಯುತ್ತಿದ್ದಾಗ ಪೋಲೀಸರು

ಗಾಳಿಯಲ್ಲಿ 6 ಸುತ್ತು ಗುಂಡನ್ನು ಹಾರಿಸಿದ್ದಾರೆ. ಈ ಗುಂಡನ್ನು ಹಾರಿಸುವ ಪರಿಸ್ಥಿತಿ ಯಾವಾಗ ಬಂತು? ಮತ್ತು ಯಾವಾಗ ಗುಂಡು ಹಾರಿಸಿದರು. ಇದು ಬಸ್ ಸ್ಟ್ಯಾಂಡ್‌ನಲ್ಲಿ ಪ್ರಾರಂಭವಾದಂಥ ಒಂದು ಸಣ್ಣ ಘಟನೆ. ಇಷ್ಟೊಂದು ಬೃಹದಾಕಾರವಾಗಿ ಹಬ್ಬಿ, ಇಷ್ಟೊಂದು ಅಂಗಡಿಗಳು ಲೂಟಿಯಾಗಿ, ಜನರು ಒಬ್ಬರಿಗೊಬ್ಬರು ಹೊಡೆದಾಡಬೇಕಾದರೆ ಅದುವರೆಗೂ ಪೋಲೀಸ್ ಸ್ಟೇಷನ್‌ಗೆ ಏನಾದರೂ ಬೀಗ ಹಾಕಿತ್ತೆ? ಆ ಸ್ಥಳೀಯ ಪೋಲೀಸ್ ಠಾಣೆಗೆ ಬೀಗ ಹಾಕಿಕೊಂಡು ಎಲ್ಲಿಗಾದರೂ ಹೋಗಿದ್ದರೆ? ಅಥವಾ ಪೋಲೀಸ್ ಠಾಣೆಗೆ ಅವತ್ತು ಏನಾದರೂ ರಜಾ ಇತ್ತೆ? ಇನ್ನೂ ಮುಂತಾದ್ದೆಲ್ಲಾ ಪ್ರಶ್ನೆಗಳೆಲ್ಲ ಉದ್ಭವವಾಗುತ್ತವೆ. ಒಂದು ವೇಳೆ ರಜಾ ಇದ್ದರೆ ಆ ಮೇಲೆ ಅವರು ಬಂದರು ಎಂದರೆ ಅದು ಬೇರೆ ಪ್ರಶ್ನೆಯಾಗುತ್ತದೆ. ಒಂದು ಕಡೆಯಿಂದ ಗದ್ದಲ ಶುರುವಾದಾಗಿ ಇಷ್ಟೆಲ್ಲಾ ಲೂಟಿಯಾದ ಒಂದು ಕಡೆ ಗಾಳಿಯಲ್ಲಿ ಗುಂಡು ಹಾರಿಸಿದ್ದೇವೆಂದು ಹೇಳಿದ್ದೀರಿ. ಇನ್ನೊಂದು ಕಡೆ ಲೂಟಿ ಆಗಿದೆ ಎಂದು ಹೇಳಿದ್ದೀರಿ. ಪೋಲಿಸರು ಈ ದಿಸೆಯಲ್ಲಿ ನಿಷ್ಕ್ರಿಯರಾಗಿಲ್ಲ ಎಂಬುದನ್ನೂ ತಾವು ಹೇಳುತ್ತೀದ್ದೀರಿ. ಪೋಲಿಸರು ನಿಷ್ಕ್ರಿಯರಾಗದೇ ಇದ್ದಿದ್ದರೆ ಇಷ್ಟೊಂದು ಗದ್ದಲ ಆಗುವುದಕ್ಕೆ ಕಾರಣವಿಲ್ಲ. ಎಲ್ಲಿ ಪೋಲೀಸರು ನಿಷ್ಕ್ರಿಯರಾಗುತ್ತಾರೆ ಅಲ್ಲಿ ಇಷ್ಟೊಂದು ಉಲ್ಬಣವಾಗಿ ಗಲಾಟೆಯಾಗುತ್ತದೆ. ನಾನಾದರೂ ಹೇಳುತ್ತೇನೆ, ಔಷಧಿಯನ್ನು ತೆಗೆದುಕೊಳ್ಳುವುದಕ್ಕೂ, ವೈದ್ಯರಿಗೂ ಜಾತಿಯ ಪಟ್ಟಾ ಕಟ್ಟಿ ಪ್ರಕರಣವನ್ನು ಬೇರೆ ರೀತಿಯಲ್ಲಿ ತಿರುಗಿಸುವುದಾದರೆ ಈ ದೇಶದಲ್ಲಿ ನಾವು ಯಾರೂ ಕೂಡ ಬದುಕುವುದಕ್ಕೆ ಸಾಧ್ಯವಿಲ್ಲ. ಆಗ ನಾವು ನಮ್ಮ ಜಾತಿಯ ವೈದ್ಯರನ್ನೇ ಹಿಡಿದುಕೊಂಡು ಔಷಧಿಯನ್ನು ತೆಗೆದುಕೊಳ್ಳುವುದಕ್ಕೆ ಹೋಗಬೇಕಾಗುತ್ತದೆ. ನಮಗೆ ಆಗದೇ ಇರುವಂಥ ಬಹಳ ಪ್ರಮುಖವಾದ ಜಾತಿಯ ವೈದ್ಯರಲ್ಲಿ ಬಹಳ ಅಮೂಲ್ಯವಾದ ಔಷಧಿ ಸಿಕ್ಕುತ್ತಿದ್ದರೂ ಕೂಡ ಅವರು ಇಂಥ ಜಾತಿಯವರು ನಾವು ಅವರ ಹತ್ತಿರ ಔಷಧಿಗೆ ಹೋಗಬಾರದೆಂದು ಒಂದು ನಿರ್ಧಾರಕ್ಕೆ ಬರಬೇಕಾಗುತ್ತದೆ. ಆದುದರಿಂದ ಇದರ ಬಗ್ಗೆ ಒಂದು ನಿಧಾರ್ರಕ್ಕೆ ಬರಬೇಕಾಗುತ್ತದೆ. ಮಾನ್ಯ ಸಭಾಧ್ಯಕ್ಷರು ತಮ್ಮ ಪೀಠವನ್ನು ಬಿಟ್ಟು ಏತಕ್ಕೆ ಹೋದರು ಎಂದರೆ ಅವರು ಬಹಳ ನೋವನ್ನು ವೇದನೆಯನ್ನು ಪಟ್ಟುಕೊಂಡು ಹೋದರು ಎಂದು ನನಗನಿಸುತ್ತದೆ. ಅವರು 3-4 ವಿಚಾರಗಳನ್ನು ಹೇಳಿದರು. ಹುಚ್ಚುನಾಯಿ ಕಡಿತಕ್ಕೆ ಔಷಧಿ ಇದೆ, ಆದರೆ ಈ ರೀತಿ ಪ್ರಕ್ಷುಬ್ಧ ವಾತಾವರಣವನ್ನು ನಿರ್ಮಾಣ ಮಾಡುವಂಥ ಜನರಿಗೆ ಔಷಧಿ ಇಲ್ಲ ಎನ್ನತಕ್ಕ ಮಾತನ್ನು ಮಾನ್ಯ ಅಧ್ಯಕ್ಷರು ಏನು ಹೇಳಿದರು ಅವರ ಮಾತಿನ ಹಿಂದೆ ಏನು ನೋವಿತ್ತು ಎಂಬುದು ನನಗೆ ತಿಳಿದುಬಂತು. ನಿನ್ನೆ ಅವರ ಮನೆಯಲ್ಲಿ ಗಳಗಳನೆ ಅತ್ತರು. ಇನ್ನೂ ಅಳುವ ಧಾಟಿಯಲ್ಲಿ ಈ ಸದನದಲ್ಲಿ ಕುಳಿತು ಕೊಳ್ಳುವುದು ಸರಿಯಲ್ಲವೆಂಬ ವಿಚಾರ ತಿಳಿದು ಈ ಪೀಠವನ್ನು ಬಿಟ್ಟು ಹೋದರು. ನನಗನ್ನಿಸುತ್ತದೆ, ಇದರಲ್ಲಿ ನಮಗೆಲ್ಲರಿಗೆ ನೋವಾಗುತ್ತದೆ. ಇದರಲ್ಲಿ ನಾವು ಯಾರೂ ರಾಜಕೀಯ ಅಥವಾ ಪಕ್ಷಭೇದ ಮಾಡಬೇಕೆಂದು ಇಲ್ಲ. ಬಹಳ ನೋವಾಗುತ್ತದೆ, ಇಂಥ ಘಟನೆ ಆಗಬಾರದು. ನಾನು ಹೇಳುತ್ತೇನೆ, ಇದರ ಬಗ್ಗೆ ಸಮಗ್ರವಾದ ನ್ಯಾಯಾಂಗ ತನಿಖೆ ಆಗಬೇಕು. ಇನ್ನೂ ಕೆಲವರ ಬಗ್ಗೆ ಗುಮಾನಿ ಇದೆ ಎಂದು ಹೇಳುತ್ತಿದ್ದಾರೆ. ಇದಕ್ಕೆ ಯಾರೂ ಕಾರಣಕರ್ತರು ಎಂದು ಇದುವರೆಗೆ ಸರ್ಕಾರಕ್ಕೆ, ಪೊಲೀಸ್ ಇಲಾಖೆಗೆ ವಿಚಾರ ಸಿಗಲಿಲ್ಲವೆಂದರೆ, ಇನ್ನೂ ಇವರಿಗೆ ಮಾಹಿತಿ ಸಿಗಲಿಲ್ಲವೆಂದರೆ ಪೋಲಿಸ್ ಸ್ಟೇಷನ್ ಇದೆಯೇ ಎಂಬ ಪ್ರಶ್ನೆಗೆ ನಾವು ಬರಬೇಕಾಗುತ್ತದೆ.ಆದುದರಿಂದ ಇದರ ಬಗ್ಗೆ

ಪರಿಣಾಮಕಾರಿಯಾಗಿ ನ್ಯಾಯಾಂಗ ತನಿಖೆ ಆಗಬೇಕು. ನ್ಯಾಯಾಂಗ ತನಿಖೆಯನ್ನು ವರ್ಷಗಟ್ಟಲೆ ಮಾಡಬಾರದು, ಕನಿಷ್ಟ ಎರಡು ತಿಂಗಳು ಅಥವಾ ಒಂದು ತಿಂಗಳಲ್ಲಿ ನ್ಯಾಯಾಂಗ ತನಿಖೆಯ ವರದಿ ಬರುವುದಕ್ಕೆ ತಾವು ಅವಕಾಶ ಮಾಡಿ, ಇದರ ಬಗ್ಗೆ ಸಮಗ್ರವಾದ ತನಿಖೆ ಆದರೆ ಇದರ ಹಿಂದೆ ಯಾರಿದ್ದಾರೆ ಅವರು ಯಾರೇ ಇರಲಿ ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಇದುವರೆಗೆ ತಾವು ಏನು ಪರಿಹಾರ ನೀಡಿಲ್ಲ ಈ ಪರಿಹಾರವನ್ನು ಮುಖ್ಯ ಮಂತ್ರಿಗಳ ಸಹಾಯಧನದಲ್ಲಿ ಕೊಡಬೇಕೇ ಅಥವಾ ಯಾವುದರಲ್ಲಿ ಕೊಡಬೇಕಾಗಿತ್ತು ಎಂದು ಚಿಂತನೆ ಮಾಡುತ್ತೀದ್ದೀರಿ, ಈ ಚಿಂತನೆಗೆ ಇಷ್ಟು ಕಾಲ ದೀರ್ಘವಾದುದು ಸರಿಯಲ್ಲ. ಈಗಾಗಲೇ ಎಷ್ಟು ನಷ್ಟವಾಗಿದೆ ಎಂದು ನೋಡಿ ಅವರಿಗೆ ಕನಿಷ್ಟ ಪ್ರಮಾಣದಲ್ಲಿ ಪರಿಹಾರ ಕೊಡಬೇಕಾಗಿತ್ತು. ಸತ್ತವರ ಮನೆಗೆ ಈಗಾಗಲೇ ಸರ್ಕಾರದಿಂದ ಹಣ ತಲುಪಿಸಬೇಕಾಗಿತ್ತು. ಇದು ನಿಜವಾಗಲೂ ಬಹಳ ನೋವಿನ ಪ್ರಸಂಗ. ಇಂಥ ಕೆಲವು ವಿಚಾರಗಳಿಗೆ ಸ್ಪಷ್ಟೀಕರಣ ಕೊಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗೃಹ ಮಂತ್ರಿಗಳು ಮಾತನಾಡುವಾಗ ಹೇಳಿದರು, ಪೋಲಿಸರ ನಿಷ್ಕ್ರಿಯತೆ ಎಂಬುದಲ್ಲಿ ತಿರುಳಿಲ್ಲ ಎಂದು. ನಾನು ಒಂದು ವಿಷಯವನ್ನು ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಪೋಲಿಸರು ಹೋಗಿ ಡಾಕ್ಟರನ್ನು ಹಿಡಿದುಕೊಂಡು ಬಂದರು, ಅರೆಸ್ಟ ಮಾಡಿಕೊಂಡು ಬಂದರು. ಪೊಲೀಸ್ ಸ್ಟೇಷನ್ನಲ್ಲಿ ಆ ಡಾಕ್ಟರನ್ನು ಇಟ್ಟಂಥ ಸಂದರ್ಭದಲ್ಲಿ ಕೆಲವು ವ್ಯಕತ್ತಿಗಳು ಹೂಗಿ ಪೋಲೀಸ್ ಸ್ಟೇಷನ್‌ನಲ್ಲಿ ಸಬ್ ಇನ್ಸಪೆಕ್ಟರ್ ಮುಂದೆ ಡಾಕ್ಟರನ್ನು ಹೊಡೆದಿದ್ದಾರೆ. ಹೊಡೆದು ಆಚೆ ಹೋಗಿದ್ದಾರೆ. ಆ ಜನರೇ ಗುಂಪು ಕಟ್ಟಿ ಗಲಭೆಗಳಿಗೆ ಪ್ರೋತ್ಸಾಹ ನೀಡಿರತಕ್ಕವರು. ಡಾಕ್ಟರನ್ನು ಹೊಡೆದಂಥಾದ್ದು ಇದು ಸತ್ಯ. ಬೇಕಾದರೆ ಯಾವುದೇ ಪರೀಕ್ಷೆಗೆ ನಾನು ಸಿದ್ಧನಿದ್ದೇನೆ. ಸತ್ಯ ಇಲ್ಲವೆಂದು ಗೃಹಮಂತ್ರಿಗಳು ತೋರಿಸಬೇಕಾದರೆ, ಪೊಲೀಸ್ ಸ್ಟೇಷನನಲ್ಲಿ ಸಬ್ ಇನ್ನಪೆಕ್ಟರ್ ಮುಂದೆ ಅರೆಸ್ಟ ಮಾಡಿಕೊಂಡಿ ಬಂದಂಥ ಡಾಕ್ಟರನ್ನು ಹೊಡೆದು ಆಚೆ ಹೋಗಿ ಪ್ರಚೋದನೆ ಮಾಡಿದ್ದಾರೆ. ಡಾಕ್ಟರನ್ನು ಹೊಡೆದಂತಹ ಜನರನ್ನು ಅಲ್ಲಿಯೇ ಇವರು ಬಂಧನ ಮಾಡಿ ಪೊಲೀಸ್ ಸ್ಟೇಷನನಲ್ಲಿ ಹಾಕಿದ್ದರೆ ಬಹುಶಃ ಇಷ್ಟು ಅನಾಹುತವಾಗುವುದಕ್ಕೆ ಖಂಡಿತ ಸಾಧ್ಯವಿರುತ್ತಿರಲಿಲ್ಲ. ಇದು ಪೋಲಿಸರ ವೈಫಲ್ಯವೇ ಅಥವಾ ಏನೆಂದು ಮಾನ್ಯ ಗೃಹ ಮಂತ್ರಿಗಳು ಹೇಳಬೇಕು. ಪೊಲೀಸ್ ಸ್ಟೇಷನ್ ನಲ್ಲಿ ನಡೆದಿರತಕ್ಕದ್ದು. ಎರಡನೇ ಘಟನೆ ಮೊದಲನೇ ಘಟನೆ ನಡೆದಿರತಕ್ಕದ್ದು, ಆ ಮಗುವಿನ ತಾಯಿ ಖಂಡಿತವಾಗಿ ಪೊಲೀಸ್ ಸ್ಟೇಷನ್‌ಗೆ ಹೋಗಬೇಕೆಂದು ಇರಲಿಲ್ಲ. ಪೊಲೀಸ್ ಕಂಪ್ಲೆಂಟ್ ಕೊಡಬೇಕೆಂದು ಇರಲಿಲ್ಲ. ಆಕೆಯ ಮಗು ಸತ್ತು ತನ್ನ ದುಃಖದಲ್ಲಿ ಊರಿಗೆ ಹೋಗಲಿಕ್ಕೆ ಬಸ್ ಸ್ಟ್ಯಾಂಡಿಗೆ ಬಂದಂಥ ಸಂದರ್ಭದಲ್ಲಿ 3 ಜನ ವ್ಯಕ್ತಿಗಳು ಹೋಗಿ ಪ್ರಚೋದನೆ ಮಾಡಿ ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿದ್ದಾರೆ. ಕಂಪ್ಲೇಂಟ್ ಕೊಡಿಸಿದ್ದಾರೆ. ಕಂಪ್ಲೇಂಟ್ ಕೊಡಿಸಿದ ಜನರು ಪೊಲೀಸರಿಂದ ಏನಾಗುತ್ತದೆ, ನಾವೇ ಒಂದು ಕೈ ನೋಡಿಕೊಳ್ಳೋಣ ಎಂದು ಪೊಲೀಸರ ಎದುರಿಗೆ ಹೇಳಿ ಆಚೆ ಬರುವಾಗ ಪೊಲೀಸರು ಏನು ಮಾಡುತ್ತಿದ್ದರು? ಅವರನ್ನು ಏತಕ್ಕೆ ಬಂಧನ ಮಾಡಲಿಲ್ಲ? ಇದು ಪೊಲೀಸರ ನಿಷ್ಕ್ರಿಯತೆ ಅಲ್ಲವೆ ಎಂಬುದನ್ನು ತಾವು ಸದನದಲ್ಲಿರತಕ್ಕವರೆಲ್ಲರೂ ಚಿಂತನೆ ಮಾಡಬೇಕಾಗುತ್ತದೆ. ಮೂರನೆಯದಾಗಿ ಬಸ್ ಸ್ಟ್ಯಾಂಡಿನ

ಹತ್ತಿರದಲ್ಲಿ ನನ್ನ ಸ್ನೇಹಿತರ ವಕೀಲರ ಕಛೇರಿ ಇದೆ. ಅಲ್ಲಿ ನಮ್ಮ ಪರಿಚಯದ ಒಬ್ಬ ಹುಡುಗ ಗಲಭೆ ಆದತಕ್ಷಣ ಮೇಲ್ಗಡೇ ಓಡಿಹೋಗಿದ್ದಾನೆ. ಆತ ಕೆಳಗಡೆ ಸೈಕಲ್ ನಿಲ್ಲಿಸಿದ್ದಾನೆ. ಅವನ ಸೈಕಲ್ ಸುಟ್ಟು ಹೋಗಿದೆ. ಪೊಲೀಸ್ ಸಬ್ ಇನ್ಸಪೆಕ್ಟರ್ ಅಲ್ಲಿ ಬಂದಿದ್ದಾರೆ. ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಮುಂದೆಯೇ ಹಲವಾರು ಅಂಗಡಿಗಳನ್ನು ಸುಟ್ಟಿದ್ದಾರೆ. ಅದನ್ನು ನೋಡಿ ತಡೆಯುವುದಕ್ಕಾಗದೆ ಒಬ್ಬ ಸಣ್ಣ ಹುಡುಗ ಮತ್ತು ಇನ್ನೊಬ್ಬ ಜೊತೆಯಲ್ಲಿ ಬಂದು ಸಬ್ ಇನ್ಸಪೆಕ್ಟರನ್ನು ನೇರವಾಗಿ ಕೇಳಿದ್ದಾರ, ನಿಮ್ಮ ಮುಂದೆ ಬೆಂಕಿ ಇಡುತ್ತಿದ್ದಾರಲ್ಲ ಏತಕ್ಕೆ ಸುಮ್ಮನಿದ್ದೀರಿ ಎಂದು. ನಾನು ಏನು ಮಾಡಲಿ, ನನ್ನ ಕೈಯಲ್ಲಿ ಏನೂ ಆಗುವುದಿಲ್ಲವೆಂದು ಹೇಳಿದ್ದಾರೆ. ಈ ಮೂರು ಘಟನೆಗಳು ಸತ್ಯವಾದವು. ನಾನು ಯಾವುದೇ ಸ್ಥಳದಲ್ಲಿ ಬೇಕಾದರೂ ಪ್ರಮಾಣ ಮಾಡಿ ಹೇಳುವುದಕ್ಕೆ ಸಿದ್ಧನಿದ್ದೇವೆ. ನಾಲ್ಕನೆಯದಾಗಿ, ನಿನ್ನೆ ನಾನು ಶ್ರೀನಿವಾಸಪುರಕ್ಕೆ ಹೋಗಿ ಎಲ್ಲ ಕಡೆ ಸುತ್ತಾಡಿ ಎಲ್ಲರ ಜೊತೆ ಮಾತನಾಡಿ ವಾಪಸ್ಸು ಬರಬೇಕಾದರೆ 2-3 ರಸ್ತೆಗಳಲ್ಲಿ ಸಣ್ಣಸಣ್ಣ ಹುಡುಗರು ದೊಣ್ಣೆ ಹಿಡಿದು ನಿಂತಿದ್ದಾರೆ, ಮರದ ಕೆಳಗೆ ಗುಂಪುಗಳನ್ನು ಕಟ್ಟಿಕೊಂಡು ನಿಂತಿದ್ದಾರೆ. ಕೋಲಾರದ ರಸ್ತೆಯಲ್ಲಿದ್ದಾರೆ, ಚಿಂತಾಮಣಿಯ ರಸ್ತೆಯಲ್ಲಿದ್ದಾರೆ. ನಾನು ಶ್ರೀನಿವಾಸಪುರಕ್ಕೆ ಹೋಗಿ ವಾಪಸ್ಸು ಬರತಕ್ಕ ಸಂದರ್ಭದಲ್ಲಿ ಒಂದು ಗುಂಪಿನ ಹುಡುಗರು, ಹುಣಸೆ ಮರದ ಕೆಳಗೆ ನಿಂತಂಥ ಹುಡುಗರು ದೊಣ್ಣೆ ತೆಗೆದುಕೊಂಡು ಬಂದು ನನ್ನ ಕಾರಿಗೆ ಅಡ್ಡ ಇಟ್ಟರು. ಏಯ್ ಯಾರು ಯಾರು ಹೋಗುತ್ತಿದ್ದಾರ ನೋಡಿರೋ. ಇವರೇ ನನ್ನ ಮಕ್ಕಳು ಹೋಗುತ್ತಿದ್ದಾರ ನೋಡಿರೋ ಎಂದರು. ನಾನು ಕಾರು ಸ್ವಲ್ಪ ತಡ ಮಾಡಿದೆ. ಇವರೆಲ್ಲ ಹೋಗಲಿ ಬಿಡು ಎಂದರು, ಆ ಸಣ್ಣ ಸಣ್ಣ ಹುಡುಗರು. ಶ್ರೀನಿವಾಸಪುರದಿಂದ 3-4 ಕಿಲೋಮೀಟರ್‌ವರೆಗೂ ಒಬ್ಬರೂ ಪೋಲೀಸರು ಇರಲಿಲ್ಲ. ಸುಮಾರು 50-60 ಜನರ ಗುಂಪು ಇದ್ದರ. ಬಹುಶಃ ನನ್ನ ಮೇಲೆ ಧಾಳಿ ಮಾಡಿದ್ದರೂ ಕೂಡ ಅಲ್ಲಿ ಪೋಲೀಸರು ಯಾರೂ ಇರಲಿಲ್ಲ. ಇದು ಪೋಲೀಸರ ವೈಫಲ್ಯ ಅಲ್ಲವೆ? ಪೋಲೀಸರು ಸ್ವಲ್ಪ ಎಚ್ಚರ ವಹಿಸಿದ್ದರೆ ಬಹುಶಃ ಇಷ್ಟು ಅನಾಹುತವಾಗುವುದಕ್ಕೆ ಸಾಧ್ಯವಿರುತ್ತಿರಲಿಲ್ಲ, ತಡೆಯಬಹುದಿತ್ತು. ಐದನೆಯ ಅಂಶ, ಪ್ರಚೋದನೆ ಮಾಡಿರತಕ್ಕದ್ದು ಸ್ಪಷ್ಟ ಇದೆ, ಪ್ರಚೋದನೆ ಮಾಡಿರತಕ್ಕವರು ಯಾರು ಎಂದು ಮಾನ್ಯ ಗೃಹ ಮಂತ್ರಿಗಳಿಗೆ ಗೊತ್ತು, ಅಧಿಕಾರಿಗಳಿಗೆ ಗೊತ್ತದೆ, ನಮಗೂ ಗೊತ್ತಿದೆ. ಪ್ರಚೋದನೆ ಮಾಡಿ ಈ ಘಟನೆಯನ್ನು ಸೃಷ್ಟಿಸಿದ್ದಾರೆಯೇ ಹೊರತು ಇದು ಆಕಸ್ಮಿಕವಾಗಿ ಆಗಿರತಕ್ಕದ್ದು ಅಲ್ಲ, ಸ್ಪಾಂಟೇನಿಯಸ್ ಆಗಿ ಆಗಿರತಕ್ಕದ್ದು ಅಲ್ಲ. ವ್ಯವಸ್ಥಿತವಾಗಿ ಪ್ರಚೋದನೆ ಮಾಡಿ, ಟಾರ್ಗೆಟ್ ಮಾಡಿ ಇಂಥಿಂಥ ಅಂಗಡಿಗಳನ್ನು ಹೊಡೆಯಬೇಕೆಂದು ಹೊಡೆದಿದ್ದಾರೆ. ಆದುದರಿಂದ ಇವರ ಬಗ್ಗೆ ಯಾವುದೇ ಒತ್ತಾಯಕ್ಕೆ ಒಳಗಾಗದೆ ನಿಷ್ಪಕ್ಷಪಾತವಾಗಿ ತನಿಖೆ ಮಾಡಬೇಕು. ಪೋಲೀಸ್ ಠಾಣೆಯಲ್ಲಿ ಸಬ್ ಇನ್ಸ್‌ಪೆಕ್ಟರ್ ಮುಂದೆ ಯಾರು ಡಾಕ್ಟರನ್ನು ಹೊಡೆದರು ಆ ವ್ಯಕ್ತಿಗಳ ವಿರುದ್ಧ ಪ್ರತ್ಯೇಕವಾಗಿ ಕ್ರಮ ತೆಗೆದುಕೊಳ್ಳಬೇಕು. ಆ ದೃಷ್ಟಿಯಲ್ಲಿ ಇವರ ಬಗ್ಗೆ ನಿಷ್ಪಕ್ಷಪಾತವಾದ ತನಿಖೆ ಆಗಬೇಕು. ನನಗೆ ಯಾವ ತನಿಖೆಯಾದರೂ ಸರಿ. ನ್ಯಾಯಾಂಗ ತನಿಖೆಯಾದರೂ ಮಾಡಿಸಿ, ಸದನದ ಸಮಿತಿಯಿಂದ ತನಿಖೆ ಮಾಡಿಸಿ, ಮ್ಯಾಜಿಸ್ಟ್ರೇಟ್‌ರಿಂದ ತನಿಖೆ ಮಾಡಿಸಿ ಅಥವಾ ಅಧಿಕಾರಿಗಳಿಂದ ತನಿಖೆ ಮಾಡಿಸಿ, ತನಿಖೆಯಂತೂ ಆಗಲೇಬೇಕು. ತನಿಖೆ ಆಗದೆ ಹೋದರೆ ಆಗುವುದಿಲ್ಲ. ತನಿಖೆ ಅಂದರ ವರ್ಷಗಟ್ಟಲೆ ಹೋಗತಕ್ಕ ತನಿಖೆ ಬೇಡ. ತನಿಖೆ ಆಗಬೇಕು ಮತ್ತು ತಕ್ಷಣ ಅವರಿಗ

ಪರಿಹಾರವನ್ನು ಕೊಡಬೇಕೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಈ ಬಗ್ಗೆ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಒಂದು ಸಂಗತಿ ನಾನು ಹೇಳುವುದನ್ನು ಮರೆತಿದ್ದೆ. ವೈದ್ಯರನ್ನು ಬಂಧಿಸಿದರು, ವೈದ್ಯರನ್ನು ಬಂಧಿಸಬೇಕಾದರೆ ಯಾರಾದರೂ ಒಂದು ಕಂಪ್ಲೈಂಟ್ ಇರಬೇಕಲ್ಲ. ಸತ್ತವರ ಕಡೆಯಿಂದ ಕಂಪ್ಲೈಂಟ್ ಇರಬೇಕಲ್ಲ? ಯಾರ ಕಂಪ್ಲೈಂಟ್ ಇಲ್ಲದೆ ವೈದ್ಯರನ್ನು ಬಂಧಿಸತಕ್ಕ ಕಾರಣ ಏನಿತ್ತು? ವೈದ್ಯರನ್ನು ಏತಕ್ಕೆ ಬಂಧಿಸಿದರು ಎಂದು ಸ್ಪಷ್ಟಪಡಿಸಬೇಕು. ಏಕೆಂದರೆ, ಎಲ್ಲೆಲ್ಲಿ ವೈದ್ಯರು ಔಷಧಿ ಕೊಟ್ಟು ರೋಗಿ ಸತ್ತು ಹೋದಾಗ ಆ ವೈದ್ಯರು ಎಲ್ಲರನ್ನೂ ಬಂಧಿಸಬೇಕೆಂದು ಸರ್ಕಾರದ ನೀತಿ ಇದೆಯೆ? ಏತಕ್ಕೆ ಆ ವೈದ್ಯರನ್ನು ಬಂಧಿಸಿದರು ಎಂಬುದು ಅತಿ ಮುಖ್ಯ. ಮಗುಸತ್ತು ತಂದೆತಾಯಿಗಳು ಯಾರಾದರೂ ದೂರು ಕೊಟ್ಟು ಇಂಥ ವೈದ್ಯರು ನನ್ನ ಮಗುವನ್ನು ಈ ಕಾರಣಕ್ಕಾಗಿ ಕೊಂದಿದ್ದಾರೆಂದು ದೂರು ಕೊಟ್ಟಿದ್ದ ಅದು ಒಂದು ರೀತಿ. ಯಾವುದೇ ದೂರು ಇಲ್ಲದೆ ವೈದ್ಯರನ್ನು ಬಂಧಿಸತಕ್ಕ ನೀತಿ ಏನಿತ್ತು ಆ ವೈದ್ಯರನ್ನು ಬಂಧಿಸುವುದಕ್ಕೆ ಕಾರಣವೇನು, ಬಂಧಿಸಿ ಠಾಣೆಯಲ್ಲಿಟ್ಟುಕೊಳ್ಳುವುದಕ್ಕೆ ಕಾರಣವೇನಿತ್ತು ಇಷ್ಟು ವಿಚಾರಗಳು ಬಹಳ ಪ್ರಾಮುಖ್ಯ.

+ಶ್ರೀಮತಿ ಪ್ರಮೀಳಾ ನೇಸರ್ಗಿ(ಚಾಮರಾಜಪೇಟೆ) : ಮಾನ್ಯ ಉಪಾಧ್ಯಕ್ಷರೆ, ಮೂಲಭೂತವಾಗಿ ಮಗು ಸಾಯುವುದಕ್ಕೆ ಕಾರಣವೇನೆಂದರೆ, ಗ್ಲೂಕೋಸ್ ಕೊಡುವಾಗ ಸತ್ತಿತ್ತು ಎಂದು ತಾವು ಹೇಳಿದಿರಿ. ಈಗಾಗಲೇ ಗೊತ್ತಿರುವ ಹಾಗೆ, ಸಮಿತಿಗಳಲ್ಲಿ ತೀರ್ಮಾನವಾಗಿ ಸಭೆಗಳಲ್ಲಿ ಬಂದು ಚರ್ಚೆಯಾಗಿದೆ. ಈ ಡಾಕ್ಟರುಗಳು, ಡ್ರಗ್ಗಿಸ್ಟ್ ಕಳಪೆ ಮಾಲುಗಳನ್ನು ಸಪ್ಲೈ ಮಾಡತಕ್ಕ ವಿಷಯ ಈಗಾಗಲೇ ಸಮಿತಿ ಮುಂದೆ ಬಂದಿದೆ. ನಾವು ಎಷ್ಟೋ ಸಾರಿ ಕೇಳಿದ್ದೇವೆ. ಇದುವರೆಗೂ ಕೂಡ ಮಾಹಿತಿ ಕೊಡಲಿಲ್ಲ. ನನಗೆ ಬೇಕಾಗಿರತಕ್ಕ ಮಾಹಿತಿ ಏನೆಂದರೆ ಗ್ಲೂಕೋಸ್ ಯಾವಾಗ ಕೊಟ್ಟರು, ಅದನ್ನು ಯಾವ ಅಂಗಡಿಯಲ್ಲಿ ತೆಗೆದುಕೊಂಡರು ಅದು ಯಾವ ಗ್ರೂಪಿಗೆ ಸೇರಿದ್ದು, ಅದನ್ನು ಯಾವ ಕಂಪನಿಯಿಂದ ಸಪ್ಲೈ ಮಾಡಿದ್ದರು, ಇದೇ ರೀತಿ ಗ್ಲೂಕೋಸ್ ಇಡೀ ಕರ್ನಾಟಕದಲ್ಲಿ ಏನಾದರೂ ಸಪ್ಲೈ ಆಗಿದೆಯೇ? ಈ ಗ್ಲೂಕೋಸ್ ಕೊಟ್ಟಿದ್ದರಿಂದ ಮಗು ಸಾಯುವುದಕ್ಕೆ ಕಾರಣವಾದರೆ, ಇಂಥ ಹಲವಾರು ಮಕ್ಕಳು ದೇಶದಲ್ಲಿ ಸಾಯುವುದಕ್ಕೆ ಗ್ಲೂಕೋಸ್ ಕಾರಣವಾಗುತ್ತದೆ. ಅದಕ್ಕೋಸ್ಕರ ನಾನು ಕೇಳತಕ್ಕದ್ದು ಏನೆಂದರೆ ಈ ಬಗ್ಗೆ ಸಂಪೂರ್ಣ ಮಾಹಿತಿ ತರಿಸಿಕೊಡಬೇಕಾಗುತ್ತದೆ. ಗ್ಲೂಕೋಸ್ ಗ್ರೂಪ್ ಯಾವುದು, ಯಾವ ಯಾವ ಮೆಡಿಸನ್ ಕೊಟ್ಟಿದ್ದರು, 3 ದಿನಗಳಿಂದ ಆ ಮಗುವಿಗೆ ಏನೇನು ಮೆಡಿಸನ್ ಕೊಟ್ಟಿದ್ದರು ಇದನ್ನೂ ಸಹ ತಾವು ಪರಿಶೀಲನೆ ಮಾಡಿಕೊಡಬೇಕಾಗುತ್ತದೆ. ಚೀಫ್ ಡ್ರಗ್ಗಿಸ್ಟರು ಏನಿದ್ದಾರೆ ಅವರಿಗೆ ಹೇಳಿ ಎಲ್ಲ ಗ್ರೂಪಿನ ಗ್ಲೂಕೋಸನ್ನು ತಕ್ಷಣ ಸೀಜ್ ಮಾಡಿ ಸೀಲ್ ಮಾಡುವಂತೆ ಆರ್ಡರ್ ಮಾಡಬೇಕಾಗುತ್ತದೆ. ಇದರ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಬೇಕಾಗುತ್ತದೆ. ಮತ್ತೊಂದು ಆಯುರ್ವೇದಿಕ್ ಡಾಕ್ಟರು ಎಂದು ಹೇಳಿದ್ದೀರಿ. ಆಯುರ್ವೇದಿಕ್ ಡಾಕ್ಟರುಗಳಿಗೆ ಈ ರೀತಿ ಗ್ಲೂಕೋಸ್ ಕೊಟ್ಟು ಮಾಡುವುದಕ್ಕೆ ಅವರ ಹತ್ತಿರ ಏನಾದರೂ ಪರಿಮಿತಿಯಾದ ಅಸಿಸ್ಟೆಂಟ್ಸ್ ಇದ್ದಾರೆಯೆ? ಕೊಡುವುದಕ್ಕೆ ಸಾಧ್ಯ ಇದೆಯೆ? ಈ ರೀತಿ ಕೊಡುವುದಕ್ಕೆ ಮಾಡುವುದಕ್ಕೆ ಕಾರಣ

ಇರಬೇಕಲ್ಲ. ಆಯುರ್ವೇದಿಕ ಡಾಕ್ಟರು ಈ ರೀತಿ ಹಳ್ಳಿ ಹಳ್ಳಿಗಳಲ್ಲಿ ಔಷಧಿ ಕೊಟ್ಟು ಹಲವಾರು ಮಕ್ಕಳು ಸಾಯುವುದನ್ನು ನೋಡಿದ್ದೇವೆ. ಇದು ಒಂದು ಪ್ರಕರಣ ಹೊರಗೆ ಬಂದಿದೆ. ಈ ರೀತಿ ಎಷ್ಟು ಮಕ್ಕಳು ಸತ್ತಿದ್ದಾರೆ ಈ ಮಾಹಿತಿ ನಮಗೆ ಇನ್ನೂ ಕೂಡ ಗೊತ್ತಾಗಿಲ್ಲ. ಆದುದ್ದರಿಂದ ಇವರ ಬಗ್ಗೆ ತಾವು ತಕ್ಷಣ ಗಮನ ಹರಿಸಿ ಏನು ಕ್ರಮ ಕೈಗೊಳ್ಳುತ್ತೀರಿ ಅದನ್ನು ಕೂಡ ದಯವಿಟ್ಟು ಹೇಳಬೇಕಾಗುತ್ತದೆಂದು ಮಾನ್ಯ ಉಪಾಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : ಮಾನ್ಯ ಉಪಾಧ್ಯಕ್ಷರೆ ಶ್ರೀಯುತರುಗಳಾದ ಯಡಿಯೂರಪ್ಪನವರು, ಖರ್ಗೆಯವರು, ವಾಟಾಳ್ ನಾಗರಾಜ್ ಅವರು, ಶ್ರೀ ರಾಮರೆಡ್ಡಿಯವರು ಮತ್ತು ಶ್ರೀಮತಿ ಪ್ರಮೀಳಾರವರು ಅನೇಕ ವಿಚಾರಗಳನ್ನು ವಿವರಣೆಯನ್ನು ಈ ಘಟನೆ ಬಗ್ಗೆ ಕೇಳಿದ್ದಾರೆ. ಇಬ್ಬರು ಯಾರು ಸತ್ತಿದ್ದಾರೆ ಅವರ ಶವಗಳನ್ನು ಬೆಂಗಳೂರಿನ ಆಸ್ಪತ್ರೆಯಲ್ಲಿಟ್ಟಿದ್ದೇವೆ. ಪ್ರಾಮಾಣಿಕವಾಗಿ ಇದಕ್ಕೋಸ್ಕರ ಒಂದು ಸ್ಕ್ವಾಡ್ ಹಾಕಿದ್ದೇವೆ. ಏಕೆಂದರ ಅವತ್ತು ಸಂತೆ ದಿನ ಇತ್ತು. ಜನರು ಪಕ್ಕದ ಊರಿನಿಂದ ಅಥವಾ ಪಕ್ಕದ ರಾಜ್ಯದಿಂದ ಬಂದಿರತಕ್ಕ ಸಂದರ್ಭಗಳು ಇವೆ. ಇದುವರೆಗೆ ಮಿಸ್ಸಿಂಗ್ ಕಂಪ್ಲೆಂಟ್ ಯಾರೂ ಸಹ ಕೊಟ್ಟಿಲ್ಲ. ಶ್ರೀನಿವಾಸಪುರದಲ್ಲಿ ಇಂಥವರು ಮಿಸ್ಸಿಂಗ್ ಆಗಿದ್ದಾರೆಂದು ದೂರು ಕೊಟ್ಟಿದ್ದರೆ ನಾವು ಹೋಲಿಕೆ ಮಾಡಬಹುದಾಗಿತ್ತು. ಆದರೂ ಇದಕ್ಕೋಸ್ಕರ ಒಂದು ಸ್ಕ್ವಾಡ್ ಮಾಡಿ ತಕ್ಷಣ ಇದನ್ನು ಪತ್ತೆಹಚ್ಚಬೇಕೆಂದು ಕ್ರಮ ತೆಗೆದುಕೊಂಡಿದ್ದೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

11.30 ಎ.ಎಂ.

ಪತ್ತೆ ಹಚ್ಚುವುದಕ್ಕೆ ಕ್ರಮ ಏನೂ ತೆಗೆದುಕೊಂಡಿಲ್ಲ ಎಂಬುದನ್ನು ನಾನು ಒಪ್ಪುವುದಕ್ಕೆ ತಯಾರಿಲ್ಲ. ಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ. ಮತ್ತು ಯಾವುದೇ ರಾಜಕೀಯ ಪಕ್ಷದವರ ಮೇಲೆ ನಾವು ಗೂಬೆ ಕೂರಿಸಬೇಕು ಅನ್ನತಕ್ಕಂಥದ್ದು ಖಂಡಿತವಾಗಿಯೂ ಸರ್ಕಾರಕ್ಕೆ ಉದ್ದೇಶ ಇಲ್ಲ. ಅದನ್ನು ಖಚಿತವಾಗಿ ಹೇಳುತ್ತಿದ್ದೇನೆ. ಅದು ಕಾಂಗ್ರೆಸ್ ಇರಬಹುದು ದಳ ಇರಬಹುದು, ಬಿ.ಜೆ.ಪಿ.ಇರಬಹುದು, ಮತ್ತೊಂದು ಪಾರ್ಟಿ ಇರಬಹುದು. ಯಾವ ರಾಜಕೀಯ ಪಕ್ಷದ ಹೆಸರನ್ನೂ ಸಹಿತ ಗೃಹಮಂತ್ರಿಯಾಗಿ ನಾನು ಇದುವರೆಗೂ ತೆಗೆದುಕೊಂಡಿಲ್ಲ ಕಾರಣ ಏನೆಂದರೆ ಮಾನ್ಯ ಅಧ್ಯಕ್ಷರೆ ಅಲ್ಲಿ ಮುಖ್ಯವಾಗಿ ಆಗಬೇಕಾಗಿರುವುದು ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದು ಗಲಭೆಗಳು ಆಗದೇ ಇರುವ ರೀತಿಯಲ್ಲಿ ಮತ್ತು ಗಲಭೆಗಳು ಬೇರೆಕಡೆ ಹಬ್ಬದೇ ಇರುವ ರೀತಿಯಲ್ಲಿ ನಾವು ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದಾಗಿ ಯಾವುದೋ ರಾಜಕೀಯ ಪಕ್ಷದ ಮೇಲೆ ಗೂಬೆ ಕೂರಿಸಿ ಅದರಿಂದ ಲಾಭ ಪಡೆಯತಕ್ಕ ಅವಶ್ಯಕತೆಯಾದರೂ ನನಗೇನಿದೆ? ಸರ್ಕಾರಕ್ಕಾದರೂ ಏನಿದೆ? ಆದ್ದರಿಂದ ಯಾರೂ ಇದರ ಬಗ್ಗೆ ಅನಾವಶ್ಯಕವಾಗಿ ಮೈಮೇಲೆ ಹಾಕಿಕೊಳ್ಳತಕ್ಕಂಥ ಅವಶ್ಯಕತೆ ಇಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ಮಾನ್ಯ ಖರ್ಗೆಯವರು ಈ ಮೂರು ಕೇಸುಗಳನ್ನು ಪೋಲೀಸರು ಏನು ದಾಖಲೆಮಾಡಿದ್ದಾರೆ, ಮತ್ತೆ 8 ಕೇಸುಗಳು ಬೇರೆ ಕಡೆಯಿಂದ ಏನು ಬಂದಿದೆ ಇದರಲ್ಲಿ ಟೋಟಲ್ ಫಿಗರ್ ನನ್ನ ಹತ್ತಿರ ಇದೆ 102 ಜನರ ಮೇಲೆ ಕಂಪ್ಲೇಂಟ್ ಇದ್ದು ಇನ್‌ವಾಲ್ವ್ ಆಗಿದ್ದಾರೆ

ಎಂದು ನನ್ನ ಹತ್ತಿರ ಮಾಹಿತಿ ಇದೆ. ಸ್ಕ್ರಿಪ್ಟನ್ನು ನಾನು ಸಾಯಂಕಾಲದೊಳಗೆ ಕೊಡುತ್ತೇನೆ. ಏಕೆಂದರೆ ಅದನ್ನು ತಂದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೂರು ಕೇಸಸ್ ಪೋಲೀಸರು ಕೊಡುವಾಗ ಹೆಚ್ಚುಕಡಿಮೆ ಅಲ್ಲಿನ ಸಿಚುಯೇಷನ್ ಪ್ರಕಾರ ರಿಜಿಸ್ಟರ್ ಮಾಡಿರುತ್ತಾರೆ. 8 ಕೊಟ್ಟಮೇಲೆ ಅವರಲ್ಲಿ ಪ್ರಿಜುಡೀಸ್ ಇರುತ್ತದೆ. ಏಕೆಂದರೆ ತಾವು ಏನು ಹೇಳಿದಿರಿ ಈ 8 ಕೇಸ್‌ಗಳನ್ನು ರಿಜಿಸ್ಟರ್ ಮಾಡಿದ್ದು ಪಬ್ಲಿಕ್ ಕಂಪ್ಲೇಂಟ್ ಆಧಾರದ ಮೇಲೆ. ಆ ಪಬ್ಲಿಕ್ ಕಂಪ್ಲೇಂಟ್‌ನಲ್ಲಿ ನಿಮಗೆ ಗೊತ್ತಿದ್ದಹಾಗೆ ಪರ ಮತ್ತು ವಿರೋಧ ಎರಡೂ ಇರುತ್ತದೆ. ಅದಕ್ಕಾಗಿ ನಾನು ಸ್ಪಷ್ಟೀಕರಣ ಕೊಡಿ ಎಂದು ಕೇಳಿದ್ದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ 102 ಜನ ಇದ್ದಾರೆ. ನೀವು ಮಂತ್ರಿಗಳಾಗಿದ್ದವರು, ಆಡಳಿತ ನಡೆಸಿರತಕ್ಕವರು ಅನೇಕ ಸಂದರ್ಭಗಳಲ್ಲಿ ಈ ರೀತಿ ಇನ್ನೊಸೆಂಟ್ ಪೀಪಲ್ಲನ್ನು ಅರೆಸ್ಟ ಮಾಡಿದ್ದಾರೆ ಎಂದು ಎಲ್ಲಾ ಕಡೆಯಿಂದಲೂ ಹೇಳೇ ಹೇಳುತ್ತಾರೆ. ಅದರ ಬಗ್ಗೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಪರಿಹಾರದ ಬಗ್ಗೆ ನಾನು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಕೊಡುತ್ತೇನೆ ಎಂದು ಹೇಳೇ ಇಲ್ಲ.ನಾನು ಹೇಳಿದ್ದು ಇದು ಒಂದು ಕಮ್ಯುನಲ್ ರಯಟ್ ಆಗಿರುವುದರಿಂದ ಸರ್ಕಾರದ ಒಂದು ಆಜ್ಞೆ ಇದೆ. ಸರ್ಕಾರದ ಆಜ್ಞೆ ಪ್ರಕಾರವಾಗಿ ಜಿಲ್ಲಾಧಿಕಾರಿಗಳು ಅಲ್ಲಿ ಸ್ಥಳದಲ್ಲಿ ಸಂಬಂಧಪಟ್ಟ ಸಿಬ್ಬಂದಿಯವರ ಜೊತೆಯಲ್ಲಿ ಏನೇನು ನಷ್ಟ ಆಗಿದೆ ಎನ್ನತಕ್ಕಂಥ ಒಂದು ಅಂದಾಜನ್ನು ಮಾಡಬೇಕು, ಸರ್ಕಾರಿ ಆಜ್ಞೆ ಪ್ರಕಾರವಾಗಿ ದುಡ್ಡನ್ನು ವಿತರಣೆ ಮಾಡಬೇಕು ಎಂದು ಆಜ್ಞೆಯನ್ನು ನಾನು ನಿನ್ನೆಯೇ ಮಾಡಿದ್ದೇನೆ. ಆದರೆ ಜಿಲ್ಲಾಧಿಕಾರಿಗಳು ಮೇಲ್ನೋಟಕ್ಕೆ ಸುಮಾರು 12 ರಿಂದ 15 ಲಕ್ಷ ರೂಪಾಯಿವರೆಗೆ ಆಸ್ತಿ ನಷ್ಟ ಆಗಿದೆ ಎಂದು ನನಗೆ ತಿಳಿಸಿದ್ದಾರೆ. ಆದರೆ ವಿವರಗಳನ್ನು ಇವತ್ತು ಮಾಡುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ ಅಲ್ಲಿ ಏನಾಗಿದೆ ಎಂದರೆ ಕರ್ಫ್ಯೂ ಇದೆ. ಇವತ್ತು ಬೆಳಗ್ಗೆ ವರೆಗೂ ಸಹಿತ ಕರ್ಫ್ಯೂ ಇತ್ತು. ಕರ್ಫ್ಯೂ ಸಂದಂರ್ಭದಲ್ಲಿ ಇದೆಲ್ಲಾ ಪರಿಹಾರವನ್ನು ನಾವು ಕೊಡುವುದಕ್ಕಾಗುವುದಿಲ್ಲ. ಇವತ್ತು ಕರ್ಫ್ಯೂ ರಿಲಾಕ್ಸ ಮಾಡಿದ್ದೇವೆ. ಸಾಯಂಕಾಲದ ಹೊತ್ತಿಗೆ ಪರಿಸ್ಥಿತಿ ಸರಿಹೋಗಬಹುದು. ನಾನು ತುರ್ತಾಗಿ ಪರಿಹಾರವನ್ನು ಕೊಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ನಾನು ಎಲ್ಲೂ ಸಹಿತ ಮಾನ್ಯ ಖರ್ಗೆಯವರಿಗಾಗಲೀ ಸದನಕ್ಕಾಗಲೀ 500 ಜನ ಗಾಯಗೊಂಡಿದ್ದಾರೆ ಎಂದು ಹೇಳೇ ಇಲ್ಲ ಎನ್ನುವುದನ್ನು ನಾನು ಹೇಳುತ್ತೇನೆ. ಮತ್ತೆ ಪೋಲೀಸರು ಯಾವಾಗ ಗುಂಡು ಹಾರಿಸಿದರು ಅನ್ನತಕ್ಕಂಥ ವಿಚಾರವನ್ನು ಹೇಳಿದರು. ಹನ್ನೊಂದೂವರೆಯಿಂದ ಎರಡೂವರೆ ಗಂಟೆಯೊಳಗಡೆ. ಯಾವಾಗ ಮಗುವನ್ನು ಕಳೆದುಕೊಂಡಿರತಕ್ಕ ತಾಯಿ ಪೋಲೀಸ್ ಸ್ಟೇಷನ್ನಿಗೆ ಹೋದರು ಪೋಲೀಸ್ ಸ್ಟೇಷನ್ನಿನಿಂದ ಬಂದಮೇಲೆ, ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿರತಕ್ಕಂಥ ವಿಚಾರದಲ್ಲಿ ಸ್ವಲ್ಪ ಸತ್ಯ ಇದೆ. ಪೋಲೀಸಿನವರು ಏನೂ ಮಾಡುವುದಿಲ್ಲ, ನಾವೇ ಮಾಡೋಣ ಎಂದು ಕೆಲವರು ಹೇಳಿದರು ಎಂದು ನನಗೆ ಉನ್ನತ ಪೋಲೀಸ್ ಅಧಿಕಾರಿಗಳು ಹೇಳಿದ್ದಾರೆ. ಅದೆಲ್ಲಾ ವಿವರಗಳನ್ನು ನಾನು ಹೇಳುವುದರಿಂದ ಅಲ್ಲಿ ಘಟನೆಯನ್ನು ನಿಯಂತ್ರಣಕ್ಕೆ ತರತಕ್ಕಂಥ ವಿಚಾರದಲ್ಲಿ ನಾನು ಬೇಗ ಯಶಸ್ವಿಯಾಗುವುದಕ್ಕೆ ಆಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ಪೋಲೀಸರು ತಾವು

ಹೇಳುವಹಾಗೆ ಸಂಪೂರ್ಣವಾಗಿ ನಿಷ್ಕ್ರಿಯ ಆಗಿದ್ದಿದ್ದರೆ ಘಟನೆ ನಡೆದ ಅರ್ಧ ಗಂಟೆಯೊಳಡೆ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರುವುದಕ್ಕೆ ಆಗುತ್ತಿರಲಿಲ್ಲ. ನಿಯಂತ್ರಣಕ್ಕೆ ತಂದಿದ್ದಾರೆ. ಯಶಸ್ವಿಯಾಗಿ ಇವತ್ತು ಆ ಕೆಲಸವನ್ನು ಮಾಡಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್ ಅವರು ಪೋಲೀಸರು ವೈದ್ಯರನ್ನು ಬಂಧಿಸುವುದಕ್ಕೆ ಕಾರಣ ಏನು ಎಂದು ಕೇಳಿದರು. ಆ ವೈದ್ಯರ ಮೇಲೆಯೇ ಮಗುವನ್ನು ಕಳೆದುಕೊಂಡಿರತಕ್ಕ ಹೆಣ್ಣುಮಗಳು ಕಂಪ್ಲೇಂಟ್ ಕೊಟ್ಟಿರುವುದರಿಂದಾಗಿ ನಾವು ಆ ವೈದ್ಯರನ್ನು ಅರೆಸ್ಟ ಮಾಡಿರತಕ್ಕದ್ದು ಎನ್ನುವ ವಿಚಾರವನ್ನು ಹೇಳುತ್ತೇನೆ. ಶ್ರೀಮತಿ ಪ್ರಮೀಳ ಅವರು ಗ್ಲೂಕೋಸ್ ಬಗ್ಗೆ ಏನು ಎನ್ನತಕ್ಕಂಥ ವಿಚಾರವನ್ನು ಹೇಳಿದ್ದಾರೆ. ಅದರ ಬಗ್ಗೆ ಜಿಲ್ಲಾಧಿಕಾರಿಗಳು ನಿನ್ನೆ ನಾನು ಹೋಗುವುದಕ್ಕಿಂತ ಮುಂಚೆಯೇ ಕ್ರಮ ತೆಗೆದುಕೊಂಡಿದ್ದಾರೆ. ಅವರು ತೆಗೆದುಕೊಂಡಿರತಕ್ಕ ಬಿ.ಎಸ್.ಎ.ಎಂ.ಡಿಗ್ರಿ ಮತ್ತು ಅವರು ತೆಗೆದುಕೊಂಡಿರತಕ್ಕ ಇತರೆ ಡಿಗ್ರಿಗಳು ಅವರು ಕೊಟ್ಟಿರತಕ್ಕ ಔಷಧಿ ಇದೆಲ್ಲದರ ಬಗ್ಗೆಯೂ ತನಿಖೆ ಮಾಡಬೇಕು ಎಂದು ಹೇಳಿ ನಾನು ಹೋಗುವುದಕ್ಕೆ ಮುಂಚೆಯೇ ಮಾನ್ಯ ಜಿಲ್ಲಾಧಿಕಾರಿಗಳು ಡಿ.ಎಚ್.ಒ.ಅವರಿಗೆ ವಿಚಾರಣೆ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಂಡಿದ್ದಾರೆ. ಸುಮಾರು 15 ಲಕ್ಷ ರೂಪಾಯಿನಷ್ಟು ನಷ್ಟ ಆಗಿದೆ. ಆ ನಷ್ಟವನ್ನು ಭರಿಸಿಕೊಡುವುದಕ್ಕೆ ನಾವು ಸರ್ಕಾರದವರು ತಕ್ಷಣ ಕ್ರಮವನ್ನು ಕಾನೂನು ಪ್ರಕಾರವಾಗಿ ತಗದುಕೊಳ್ಳುತ್ತೇವೆ ಎನ್ನತಕ್ಕ ಭರವಸೆಯನ್ನು ಕೊಡುತ್ತೇನೆ ಮೊದಲನೆಯದಾಗಿ. ಎರಡನೆಯದಾಗಿ ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಕಠಿಣವಾಗಿ ಕ್ರಮವನ್ನು ನಾವು ಕಾನೂನು ಪ್ರಕಾರವಾಗಿ ಜರುಗಿಸಲೇಬೇಕಾಗುತ್ತದೆ. ಅದು ಅನಿವಾರ್ಯ ಇದೆ. ಸದಸ್ಯರು ಒಪ್ಪುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ ಅನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಸ್ವತಃ ಉನ್ನತ ಅಧಿಕಾರಿಗಳು, ಐ.ಜಿ.ಪಿ.ಮಟ್ಟದ ಅಧಿಕಾರಿಗಳು ಅಲ್ಲೇ ಇದ್ದಾರೆ. ಸತ್ಯಾಸತ್ಯತೆಯನ್ನು ತಿಳಿದು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಜ್ಯುಡಿಷಿಯಲ್ ಎನ್‌ಕ್ವೈರಿಗೆ ಏನೂ ತೊಂದರೆ ಇಲ್ಲವಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನ್ಯಾಯಾಂಗ ತನಿಖೆಗಳನ್ನು ನಾವು ನೋಡಿದ್ದೇವೆ. ನ್ಯಾಯಾಲಯಗಳ ಬಗ್ಗೆ ನ್ಯಾಯಾಂಗ ತನಿಖೆ ಬಗ್ಗೆ ನನಗೆ ಸಂಪೂರ್ಣವಾದ ಒಂದು ಗೌರವ, ನಂಬಿಕೆ, ವಿಶ್ವಾಸ ಎಲ್ಲವೂ ಸಹಿತ ಇದೆ. ಆದರೆ ಇವತ್ತು ಅಲ್ಲಿ ಆಗಬೇಕಾಗಿರುವುದು ಪರಿಸ್ಥಿತಿ ನಿಯಂತ್ರಣಕ್ಕೆ ತರಬೇಕು. ಗಲಭೆ ಹಬ್ಬದೇ ಇರುವಹಾಗೆ ಮಾಡಬೇಕಾಗುತ್ತದೆ. ತಪ್ಪಿತಸ್ಥರು ಯಾರು ಎನ್ನತಕ್ಕಂಥದ್ದಿದೆ. ಅದನ್ನು ಪತ್ತೆ ಮಾಡತಕ್ಕ ಕೆಲಸವನ್ನು ಪೋಲೀಸಿನವರು ಮಾಡಿದ್ದಾರೆ. ಆದ್ದರಿಂದ ಇದಕ್ಕೆ ದೊಡ್ಡ ಒಂದು ನ್ಯಾಯಾಂಗ ತನಿಖೆಯನ್ನು ಮಾಡಿಸಬೇಕು ಎಂದು ಸರ್ಕಾರಕ್ಕೆ ಅನ್ನಿಸುವುದಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನ್ಯಾಯಾಂಗ ತನಿಖೆಯಾದರೆ ಇದಕ್ಕೆ ಹೆಚ್ಚಿನ ಮಹತ್ವ ಬರುತ್ತದೆ. ಮತ್ತು ನಿಜವಾಗಿ ಯಾರುಯಾರು ಇದರಲ್ಲಿದ್ದಾರೆ ಎನ್ನುವುದು ಹೊರಗೆ ಬರುತ್ತದೆ ನ್ಯಾಯಾಂಗ ತನಿಖೆ ಆಗದೇ ಇದ್ದರೆ ಈ ಪ್ರಕರಣ ಅಷ್ಟು ಸಮಂಜಸವಾಗುವುದಿಲ್ಲ ಎಂಬುದು ನಮ್ಮ ನಿರ್ಧಾರ. ನ್ಯಾಯಾಂಗ

ತನಿಖೆ ಆಗಬೇಕು. ನಮ್ಮ ಒತ್ತಾಯ ನ್ಯಾಯಾಂಗ ತನಿಖೆಗೆ ಅನ್ನತಕ್ಕಂಥದ್ದನ್ನು ತಮ್ಮ ಮೂಲಕ ಮಾನ್ಯ ಸರ್ಕಾರಕ್ಕೆ ತಿಳಿಸುತ್ತಿದ್ದೇವೆ. ನ್ಯಾಯಾಂಗ ತನಿಖೆ ಮಾಡುವುದರಿಂದ ಸರ್ಕಾರಕ್ಕೆ ಆಗತಕ್ಕ ನಷ್ಟ ಏನು? ಏತಕ್ಕೆ ನ್ಯಾಯಾಂಗ ತನಿಖೆಯನ್ನು ಮಾಡುವುದಿಲ್ಲ? ಉದ್ದೇಶಗಳೇನು? ಕಾರಣ ಏನಿದೆ? ನ್ಯಾಯಾಂಗ ತನಿಖೆ ಮುಂದೆ ಯಾರು ತಪ್ಪಿತಸ್ಥರು ಎನ್ನುವುದು ಹೊರಗಡೆ ಬರಲಿ. ನ್ಯಾಯಾಂಗ ತನಿಖೆಯನ್ನು ನೀವು ಯಾವುದಾದರೂ ಮಟ್ಟದಲ್ಲಿ ಮಾಡಿ. ಇಂಥ ಮಟ್ಟದಲ್ಲೇ ಮಾಡಬೇಕು ಅಂತ ಅಲ್ಲ. ಒಂದು ನ್ಯಾಯಾಂಗ ತನಿಖೆ ಉನ್ನತ ಮಟ್ಟದಲ್ಲಿ ನಡೆಯಬೇಕು ಎಂಬುದು ನಮ್ಮೆಲ್ಲರ ಅಭಿಲಾಷೆ. ಸರ್ಕಾರ ಅದಕ್ಕೆ ಹಿಂದೇಟು ಹೊಡೆಯತಕ್ಕಂಥ ಉದ್ದೇಶವಾದರೂ ಏನು?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಅನೇಕ ವಿಷಯಗಳು ಸಂಶಯಕ್ಕ ಎಡೆಯಾಗಿವೆ. ಅನೇಕ ಸಂಶಯಾತ್ಮಕ ವಿಷಯಗಳಿವೆ. ಮೊದಲು ತಾವು ಉತ್ತರ ಕೊಡುವಂಥ ಕಾಲದಲ್ಲಿ ಆ ಮಗುವನ್ನು ಕಳೆದುಕೊಂಡಂಥ ತಾಯಿ ಕಂಪ್ಲೇಂಟ್ ಕೊಟ್ಟಿದ್ದಳು, ಆದಕ್ಕಾಗಿ ಡಾಕ್ಟರನ್ನು ಬಂಧನ ಮಾಡಿದೆವು ಎಂದು ಹೇಳಲಿಲ್ಲ. ನಾವು ಒತ್ತಾಯ ಮಾಡಿದಮೇಲೆ ನೀವು ಬಾಯಿ ಬಿಟ್ಟಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನೋನೋನೋ. ನೀವು ದಯವಿಟ್ಟು ಕುಳಿತುಕೊಳ್ಳಿ ತಾವು ದಯವಿಟ್ಟು ಹೇಳುವಾಗ ನೀವು ಹೇಳಲಿಲ್ಲ. ನಾವು ಬಾಯಿಸಿದೆವು ಎಂದು ನೀವು ಹೇಳುವುದಕ್ಕೆ ಹೋಗಬೇಡಿ. ಪ್ರಾಮಾಣಿಕವಾಗಿ ನನ್ನ ಹೃದಯದ ಅಂತರಾಳದಿಂದ ನನಗೇ ಅನ್ನಿಸಿದೆ ಅದನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. I have nothing to hide. ನನಗೇನಿದೆ ಇದರಲ್ಲಿ ದಯವಿಟ್ಟು ಹೇಳಿ. ಅದರಲ್ಲಿ ಮುಚ್ಚಿಡತಕ್ಕಂಥದ್ದು ಏನಿದೆ ನನಗೆ? ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಸರ್ಕಾರಕ್ಕಾಗಲೀ ನನಗಲೀ ರಾಜಕೀಯವಾಗಿ ಇದರಿಂದ ಲಾಭಗಳಿಸಿ ಯಾರ ಮೇಲೋ ಗೂಬೆ ಕೂರಿಸಬೇಕು ಎನ್ನತಕ್ಕಂಥ ವಿಚಾರ ಇಲ್ಲ. ಕೆಲವು ಅನ್ ಡಿಸೈರಬಲ್ ಆಂಟಿಸೋಷಿಯಲ್ ಎಲಿಮೆಂಟ್ಸ್ ಇದನ್ನು ಇನ್‌ಸ್ಟಿಗೇಟ್ ಮಾಡಿರತಕ್ಕಂಥವರು. ಅವರ ಬಗ್ಗೆ ಅತ್ಯಂತ ಉನ್ನತ ಮಟ್ಟದ ಅಧಿಕಾರಿಗಳು, ಪ್ರಾಮಾಣಿಕತೆಗೆ, ನಿಷ್ಠೂರತೆಗೆ, ಕಠಿಣತೆಗೆ ಹೆಸರುವಾಸಿಯಾಗಿರತಕ್ಕ ಅಧಿಕಾರಿಗಳನ್ನು ವಿಚಾರಣೆ ಮಾಡಲಿಕ್ಕೆ ಹಚ್ಚಿದ್ದೇನೆ ಎನ್ನತಕ್ಕಂಥ ಭರವಸೆಯನ್ನೂ ಕೂಡ ನಾನು ಕೊಟ್ಟಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಗೃಹಸಚಿವರ ಬಗ್ಗೆ ನಮಗೆ ವಿಶ್ವಾಸ ಇದೆ. ತಾವು ಹೇಳುವುದರ ಬಗ್ಗೆ, ಅವರ ಬಗ್ಗೆ ವಿಶೇಷವಾದ ಗಮನ ಕೊಡುತ್ತೀರಿ ಎನ್ನುವುದರಲ್ಲಿ ನನಗೇನೂ ಅನುಮಾನ ಇಲ್ಲ. ನಾನೂ ನಮ್ಮ ಅಧ್ಯಕ್ಷರೂ ಸಹ ಬೆಳಗ್ಗೆ ಹೋಗಿ ಸಿಕ್ಕಂಥ ಕೆಲವು ಮಾಹಿತಿಗಳನ್ನು ತಮಗೆ ಕಳುಹಿಸಿಕೊಡುವಂಥ ಪ್ರಯತ್ನ ಮಾಡುತ್ತೇನೆ. ಆಗಾಗ್ಗ ಈ ರೀತಿಯ ಘಟನೆಗಳು ಅಲ್ಲಿ ನಡೆಯುತ್ತಿರುವುದರಿಂದ ಕೆಲವರು ಯಾವುದೇ ಘಟನೆ ಅಲ್ಲಿ ನಡೆದರೂ ಸಹ ಇದಕ್ಕೊಂದು ಗಲಭೆಯನ್ನು ಮಾಡಿ ಅದರಲ್ಲಿ ಸಮಾಧಾನಪಟ್ಟುಕೊಳ್ಳುವಂಥ ಪ್ರವೃತ್ತಿ ಅಲ್ಲಿ ಬೆಳೆಯುತ್ತಿರುವುದರಿಂದ ಈ ಜ್ಯುಡಿಷಿಯಲ್ ಎನ್‌ಕ್ವೈರಿ ಆಗುವುದರಿಂದ ಮುಂದೆ ಈ ರೀತಿಯ ಘಟನೆಗಳು ಆಗುವುದಿಲ್ಲ ಎನ್ನುವ ದೃಷ್ಟಿಯಿಂದ ನಾನು ಈ ಸಲಹೆ ಕೊಡುತ್ತಾ ಇದ್ದೇನೆ. ಈ ಕಡೆ ಕುಳಿತಿರುವ ಎಲ್ಲರೂ ಹೇಳಿದಾಗ ದಯಮಾಡಿ ನಮ್ಮ ಮಾತಿಗೊಂದು ಬೆಲೆ ಕೊಡಿ. ತಾವು ಇಲ್ಲಿದ್ದೀರಿ, ಅಲ್ಲಿದ್ದೀರಿ ಎರಡೂ ಕಡೆ ಕೆಲಸ

ಮಾಡಿದ್ದೀರಿ. ಈ ತರಹ ಘಟನೆಗಳು ಬಂದಾಗ ಅನೇಕ ಸಂದರ್ಭದಲ್ಲಿ ತಾವು ಮಾಡಿದ್ದೀರಿ, ನಾವು ಏನು ಹೇಳಿದ್ದೇವೆ ಎಂದರೆ ಕೋಲಾರ ಜಿಲ್ಲೆ ಈ ರೀತಿಯ ಒಂದು ಪರಿಸ್ಥಿತಿಗೆ ಒಳಗಾಗುತ್ತಿದೆ. ಸ್ವತಃ ಅಧ್ಯಕ್ಷರು ಅಲ್ಲಿ ಇರುವಂಥ ಕ್ಷೇತ್ರ ಇದು. ಈ ಹಿನ್ನೆಲೆಯಲ್ಲಿ ಒಂದು ನಿಷ್ಪಕ್ಷಪಾತವಾದ ತನಿಖೆಯಾಗಬೇಕು ಎನ್ನತಕ್ಕಂಥ ಕಳಕಳಿ ನಿಮಗಿದ್ದರ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ. ಆ ಭಾಗದಲ್ಲಿರತಕ್ಕ ಜನ ಜ್ಯುಡಿಷಿಯಲ್ ಎನ್‌ಕ್ವೈರಿಯಾದಾಗ ಈ ಘಟನೆಗಳಿಗೆ ಯಾರುಯಾರು ಕಾರಣ, ಯಾವರೀತಿ ನಡೆಯುತ್ತಿದೆ ಎಂಬ ಅನೇಕ ಸತ್ಯ ಸಂಗತಿಗಳು ಬಯಲಾಗುತ್ತದೆ. ಸರ್ಕಾರವೂ ಸಹ ಒಳ್ಳೆಯ ರೀತಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಮುಂದೆ ಈ ರೀತಿಯ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆ ದಿಕ್ಕಿನಲ್ಲಿ ನೀವು ಯೋಚನೆ ಮಾಡಿ. ಅದಕ್ಕಾಗಿ ಒತ್ತಾಯಿಸುತ್ತೇವೆ.

ಶ್ರೀ ವಾಟಾಳ್ ನಾಗಾರಾಜ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರಾದ ಯಡಿಯೂರಪ್ಪನವರು ಅದನ್ನೇ ಒತ್ತಾಯ ಮಾಡಿದ್ದಾರೆ. ನಾವೆಲ್ಲ ಅದನ್ನೆ ಒತ್ತಾಯ ಮಾಡಿದ್ದೇವೆ. ಪ್ರಾಮುಖ್ಯತೆ ಏನೆಂದರೆ, ಮಾನ್ಯ ಅಧ್ಯಕ್ಷರು ಅವರ ಮೌನ ಅದನ್ನು ನಾನು ಪ್ರತಿಭಟನೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ, ಒಂದು ರೀತಿ ಮೌನದಿಂದ ಅವರು ಈ ಪೀಠದಿಂದ ಹೊರಗಡೆ ಹೋಗಿದ್ದಾರೆ. ಅಂದರೆ ಇದಕ್ಕೋಸ್ಕರ ಅಂತ ಅಲ್ಲ ನೋವಿನಿಂದ ಹೇಗಿದ್ದಾರೆ ನಾವೆಲ್ಲರೂ ಪಕ್ಷಾತೀತವಾಗಿ ಒತ್ತಾಯ ಮಾಡತಕ್ಕದ್ದು ನ್ಯಾಯಾಂಗ ತನಿಖೆಗೆ. ಸರ್ಕಾರ ಮತ್ತು ಮಾನ್ಯ ಗೃಹಸಚಿವರ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಅದರಿಂದ ಅವರು ಇದನ್ನು ಮುಚ್ಚಿಡುತ್ತಾರೆಂದು ನಾನು ಹೇಳುವುದಕ್ಕೆ ತಯಾರಾಗಿಲ್ಲ. ಇದನ್ನು ನ್ಯಾಯಾಂಗ ತನಿಖೆ ಮಾಡುವುದರಿಂದ ಶಕ್ತಿ ಬರುತ್ತದೆ ಮತ್ತು ಪರಿಣಾಮಕಾರಿಯಾದಂತಹ ವ್ಯವಸ್ಥೆಯಲ್ಲಿ ಒಂದು ಹೆದರಿಕೆ ಬರುತ್ತೆ, ಭಯಭೀತಿ ಹುಟ್ಟುತ್ತೆ, ಯಾರು ಇದರಲ್ಲಿ ಸಿಕ್ಕಿದ್ದಾರೆ ಅವರು ಹೊರಗಡೆ ಬರತಕ್ಕ ಅವಕಾಶವಿರುತ್ತದೆ. ಆದ್ದರಿಂದ ನ್ಯಾಯಾಂಗ ತನಿಖೆಗೆ ನಮ್ಮ ಸಂಪೂರ್ಣವಾದಂತಹ ಒತ್ತಾಯ ಇದೆ. ನ್ಯಾಯಾಂಗ ತನಿಖೆಗೆ ಸರ್ಕಾರ ಒಪ್ಪಲೇಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ನನ್ನದು ಒಂದೇ ಪ್ರಶ್ನೆ ಡಾಕ್ಟರನ್ನು ಬಂಧಿಸಿ ಪೋಲೀಸ್ ಠಾಣೆಗೆ ತೆಗೆದುಕೊಂಡು ಬಂದಾಗ, ಕೆಲವು ವ್ಯಕ್ತಿಗಳು ಬಂದು ಪೋಲೀಸ್ ಠಾಣೆಯಲ್ಲಿ ಡಾಕ್ಟರನ್ನು ಹೊಡೆದಿದ್ದಾರೆ. ಅದು ನಡೆದಿದೆಯೋ ಇಲ್ಲವೋ ಎಂದು ಸ್ಪಷ್ಟವಾಗಿ ಹೇಳಲಿಲ್ಲ. ನಾನು ನಿರ್ದಿಷ್ಟವಾಗಿ ಹೇಳಬೇಕಾದರೆ, ಕೆಲವು ಪೋಲೀಸ್ ಅಧಿಕಾರಿಗಳು ಎಎಸ್‌ಐ ಮಟ್ಟದವರು ಅದರಲ್ಲಿ ಷಾಮೀಲಾಗಿದ್ದಾರೆ. ನಾನು ಸ್ಪಷ್ಟವಾಗಿ ಪ್ರಶ್ನೆ ಎತ್ತಿದ್ದೇನೆ ಅದಕ್ಕೆ ಉತ್ತರವಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಆಯಿತು, ಅದರಲ್ಲೇನಿದೆ ಅದನ್ನು ನಾನು ಹೇಳುತ್ತೇನೆ. ಈ ಹೌಸ್‌ನಲ್ಲಿ ಡಿಬೇಟ್ ಆಗುತ್ತಿರುವಾಗ ಅದರಲ್ಲೂ ಇಂತಹ ವಿಚಾರಗಳಲ್ಲಿ ನಮಗೇನು ಹೈಡ್ ಮಾಡತಕ್ಕದ್ದು ಇಲ್ಲ. ಒಬ್ಬ ಕಾನ್ ಸ್ಟೇಬಲ್, ಒಬ್ಬ ಹೆಡ್ ಕಾನ್‌ಸ್ಟೇಬಲ್ ಒಬ್ಬ ಎಎಸ್‌ಐ, ಒಬ್ಬ ಪಿಎಸ್‌ಐ ಇವರುಗಳ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ ನಾನು ನಮ್ಮ ಡಿಜಿಪಿಯವರಿಗೆ ಮತ್ತು ಸಂಬಂಧಪಟ್ಟ

ಅಧಿಕಾರಿಗಳಿಗೆ ಹೇಳಿದ್ದೇನೆ. ತಮ್ಮ ಅನಿಸಿಕೆಗಳಿಗೆ ಸರ್ಕಾರ ಸ್ಪಂಧಿಸುತ್ತದೆ. ಅದರಲ್ಲಿ ಇದ್ದರೂ ಇರಬಹುದು, ನಿಮಗೆ ಬಂದಿರತಕ್ಕ ಮಾಹಿತಿ ತಪ್ಪು ಎಂದು ನಾನು ಹೇಳಲಿಕ್ಕೆ ತಯಾರಿಲ್ಲ. ಅನೇಕ ಸೂಕ್ಷ್ಮವಾದ ವಿಚಾರಗಳನ್ನು ನಾನು ಹೇಳಲಿಕ್ಕಾಗುವುದಿಲ್ಲ. ದಯವಿಟ್ಟು ನಮ್ಮ ಮೇಲೆ ವಿಶ್ವಾಸ ಇಡಬೇಕೆಂದು ಹೇಳಿ ತಮ್ಮ ಮೂಲಕ ಮಾನ್ಯ ಶ್ರೀರಾಮರೆಡ್ಡಿಯವರಲ್ಲಿ ನಾನು ವಿನಂತಿಯನ್ನು ಮಾಡುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಅಧ್ಯಕ್ಷರು ತಮ್ಮ ಕ್ಷೇತ್ರದಲ್ಲಿ ನಡೆದಿರತಕ್ಕ ಘಟನೆಯ ಬಗ್ಗೆ ವಿಶೇಷವಾಗಿ ದುರ್ಬಲ ವರ್ಗದವರು ಮತ್ತು ಬಡವರ ಮೇಲೆ ಅನ್ಯಾಯವಾಗಿದೆ ಅವರಿಗೆ ನೋವಾಗಿದೆಯೆನ್ನುವ ದೃಷ್ಟಿಯಿಂದ ಅವರ ಮನಸ್ಸಿಗೆ ನೋವಾಗಿದೆಯೇ ಹೊರತು ಸರ್ಕಾರವಾಗಲೀ ಅಥವಾ ಈ ಸದನವಾಗಲೀ ಸರ್ಕಾರ ತೆಗೆದುಕೊಂಡಿರತಕ್ಕ ಕ್ರಮದ ಬಗ್ಗೆ ಅವರಿಗೇನೂ ನೋವು ಇಲ್ಲ.ಜಿಲ್ಲಾ ಮಂತ್ರಿಗಳು ತುರ್ತಾಗಿ ಹೋಗಿದ್ದಾರೆ. ಗೃಹ ಮಂತ್ರಿಗಳು ಅಲ್ಲಿಗೆ ಹೋಗಿದ್ದಾರೆ. ಎಲ್ಲಾ ಉನ್ನತಮಟ್ಟದ ಅಧಿಕಾರಿಗಳು ಹೋಗಿದ್ದಾರೆ. ಮಾನ್ಯ ಸಭಾಧ್ಯಕ್ಷರಿಗೆ ನಾನು ಎಲ್ಲಾ ವಿಚಾರಗಳನ್ನು ಎಲ್ಲಾ ಹಂತಗಳಲ್ಲಿ ಸಹಿತ ನಾನು ತಿಳಿಸಿದ್ದೇನೆ. ಅವರಿಗೆ ಬಹಳ ನೋವು ಇದೆ. ನೋವಿಗೆ ಕಾರಣ, ಇಂತಹ ಜನಗಳಿಗೆ ನನ್ನ ಕ್ಷೇತ್ರದಲ್ಲಿ ಹೀಗೆ ಆಯಿತಲ್ಲವೆಂದು ಅವರಿಗೆ ನೋವು ಇದೆಯೇ ಹೊರತು ಸರ್ಕಾರದ ಬಗ್ಗೆ ಅಲ್ಲವೆನ್ನುವುದನ್ನು ಈ ಸಂದರ್ಭದಲ್ಲಿ ಹೇಳಿ, ಗೌರವಾನ್ವಿತ ಎಲ್ಲಾ ಸದಸ್ಯರುಗಳು ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಒಂದು ವಿಚಾರಣೆಯಾಗಬೇಕೆಂದು ಹೇಳಿದ್ದಾರೆ. ನಾನು ಒಪ್ಪಿಕೊಳ್ಳುತ್ತೇನೆ. ನಾವು ಸರ್ಕಾರದಲ್ಲಿ ಯಾರಾನ್ನೋ ಬಚ್ಚಿಡಬೇಕು ಯಾರಿಗೋ ಉಪಯೋಗ ಮಾಡಿಕೊಡಬೇಕೆನ್ನುವ ವಿಚಾರವಿಲ್ಲ, ಇದರ ಬಗ್ಗೆ ತನಿಖೆ ಮಾಡಲು ಒಂದು ಮ್ಯಾಜಿಸ್ಟೇರಿಯಲ್ ಎನ್‌ಕ್ವಾಯರಿ ಮಾಡಲಿಕ್ಕೆ ಸರ್ಕಾರ ಒಪ್ಪಿಗೆಯನ್ನು ಕೊಡುತ್ತದೆ ಎನ್ನುವುದನ್ನು ಸಹಿತ ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಉಪಾಧ್ಯಕ್ಷರು : ಆಯಿತಲ್ಲ ಬಿಡಿರಿ, ಈಗ ಈ ವಿಷಯವನ್ನು ಇಲ್ಲಿಗೆ ಮುಗಿಸಿ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ.

ಕ್ರಿಕೆಟ್ ಟಿಕೆಟ್ ಅವ್ಯಾವಹಾರ ಕುರಿತು.

ಶ್ರೀ ಎ. ರಾಮದಾಸ್ : ಮಾನ್ಯ ಉಪಾಧ್ಯಕ್ಷರೆ, ನಾನು ಶೂನ್ಯವೇಳೆಯಲ್ಲಿ ಕ್ರಿಕೆಟ್ ವಿಷಯದ ಬಗ್ಗೆ ಪ್ರಸ್ತಾಪ ಮಾಡತ್ತೇನೆಂದು ತಮಗೆ ಬರೆದು ಕೊಟ್ಟಿದ್ದೇನೆ. ನಾನು ನಿನ್ನೆ ನಡೆದಂತಹ ಕ್ರಿಕೆಟ್ ಟಿಕೆಟ್ ವಿತರಣೆಯ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ.

ಉಪಾಧ್ಯಕ್ಷರು : ನಾನು ಹೇಳುವುದನ್ನು ಕೇಳಿ, ನೀವು ಹೇಳಿದ್ದು ಅಷ್ಟೇ ಕೇಳಬೇಕು ಇವತ್ತು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕೆಂದು ಅನೇಕ ಜನ ತಮ್ಮ ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ. ಒಂದು ಗಂಟೆಗೆ ಬಜೆಟ್ ಭಾಷಣ ಶುರುವಾಗುತ್ತದೆ. ಒಂದು ಗಂಟೆಯೊಳಗಾಗಿ ಯಾರಾದರೂ 10-10 ನಿಮಿಷ ಮಾತನಾಡುವುದಾದರೆ ಅದಕ್ಕೆ ಅವಕಾಶವಾಗುತ್ತದೆ. ಇಲ್ಲವೆಂದರೆ ಅದನ್ನು ಕಟ್ ಮಾಡಬೇಕಾಗುತ್ತದೆ. ಅದಕ್ಕೆ ಸನ್ಮಾನ್ಯ ಸದಸ್ಯರೆಲ್ಲರೂ ಒಪ್ಪಿದಿರಿ ಅಂದರೆ ಒಂದು